ಶುಕ್ರವಾರ, ಅಕ್ಟೋಬರ್ 28, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಪುನೀತ್ ರಾಜ್‌ಕುಮಾರ್ ಕನಸಿನ 'ಗಂಧದಗುಡಿ'ಯ ಘಮಲು ಅದೆಷ್ಟು ಚೆಂದ..

INVEST KARNATAKA

Azadi Ka Amrit Mahotsav

ಬಿಲ್ಡ್ ಫಾರ್ ದ ವರ್ಲ್ಡ್

ಇನ್ವೆಸ್ಟ್ ಕರ್ನಾಟಕ 2022	ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್	ಬೆಂಗಳೂರು ಪ್ಯಾಲೇಸ್, ಬೆಂಗಳೂರು ನವೆಂಬರ್ 2 - 4

ಶ್ರೀ. ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಶ್ರೀ. ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ

ಜಾಗತಿಕ ನಾಯಕರಿಗೆ ಜಾಗತಿಕ ವೇದಿಕೆ.

ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್ 2022, ಕರ್ನಾಟಕದ ಹೆಗ್ಗುರುತು ಹೂಡಿಕೆ ವೇದಿಕೆಯಾಗಿದ್ದು, ಪ್ರಪಂಚದಾದ್ಯಂತದ ದೊಡ್ಡ ನಾಯಕರು, ನಾವೀನ್ಯಕಾರರು ಮತ್ತು ನೀತಿ ನಿರೂಪಕರನ್ನು ಒಂದೇ ಸೂರಿನಡಿ ತರುತ್ತದೆ. ಜಾಗತಿಕ ನೆಟ್‌ವರ್ಕ್‌ನೊಂದಿಗೆ ಹೊಸ ಸಂಭಾಷಣೆಗಳನ್ನು ಪ್ರಾರಂಭಿಸಲು ಮತ್ತು ನಿಮ್ಮ ವ್ಯಾಪಾರದ ಮಹತ್ವಾಕಾಂಕ್ಷೆಗಳನ್ನು ಅರಿತುಕೊಳ್ಳಲು ಹಾಗೂ ಜಗತ್ತಿಗಾಗಿ ನಿರ್ಮಿಸಲು ಇಂದೇ ನೋಂದಾಯಿಸಿ.

ನಮ್ಮ ಭಾಷಣಕಾರರು

ಕುಮಾರಮಂಗಲಂ ಬಿರ್ಲಾ ಅಧ್ಯಕ್ಷರು, ಆದಿತ್ಯ ಬಿರ್ಲಾ ಸಮೂಹ	**ಕಿರಣ್ ಮಜುಂದಾರ್ ಶಾ** ಕಾರ್ಯಕಾರಿ ಅಧ್ಯಕ್ಷರು ಮತ್ತು ಬಯೋಕಾನ್ ಸಂಸ್ಥಾಪಕರು	**ವಿಕ್ರಮ್ ಕಿರ್ಲೋಸ್ಕರ್** ಉಪಾಧ್ಯಕ್ಷರು, ಟೊಯೊಟಾ ಕಿರ್ಲೋಸ್ಕರ್ ಮೋಟಾರ್	**ರಿಷಾದ್ ಪ್ರೇಮ್‌ಜಿ** ಅಧ್ಯಕ್ಷರು, ವಿಪ್ರೋ	**ರಾಜನ್ ಭಾರತಿ ಮಿತ್ತಲ್** ಉಪಾಧ್ಯಕ್ಷರು, ಭಾರತಿ ಎಂಟರ್‌ಪ್ರೈಸಸ್
ಕರಣ್ ಅದಾನಿ ಸಿಇಒ, ಅದಾನಿ ಪೋರ್ಟ್ಸ್ ಮತ್ತು ಎಸ್.ಇ.ಝಡ್	**ಪ್ರತೀಕ್ ಅಗರ್ವಾಲ್** ಎಂಡಿ ಮತ್ತು ಸಿಇಒ, ಸ್ಟೆರ್ಲೈಟ್ ಪವರ್	**ಅರುಂಧತಿ ಭಟ್ಟಾಚಾರ್ಯ** ಅಧ್ಯಕ್ಷರು ಮತ್ತು ಸಿಇಒ, ಸೇಲ್ಸ್‌ಫೋರ್ಸ್ ಇಂಡಿಯಾ	**ನಿಸಾಬಾ ಗೋದ್ರೇಜ್** ಅಧ್ಯಕ್ಷರು, ಗೋದ್ರೇಜ್ ಗ್ರಾಹಕ ಉತ್ಪನ್ನಗಳು	**ಡಾ. ದೇವಿ ಶೆಟ್ಟಿ** ಅಧ್ಯಕ್ಷರು ಮತ್ತು ಸಂಸ್ಥಾಪಕರು, ನಾರಾಯಣ ಹೆಲ್ತ್

ಜೆವ್ ಸೀಗಲ್ ಸಹ–ಸಂಸ್ಥಾಪಕರು, ಸ್ಟಾರ್‌ಬಕ್ಸ್	**ರ್‍ಯಾಂಡಿ ಝುಕರ್‌ಬರ್ಗ್** ಝುಕರ್‌ಬರ್ಗ್ ಮೀಡಿಯಾ ಸಂಸ್ಥಾಪಕರು	**ಆಗಸ್ಟೋ ಲೋಪೆಜ್ ಕ್ಲಾರೋಸ್** ಕಾರ್ಯನಿರ್ವಾಹಕ ನಿರ್ದೇಶಕರು, ಗ್ಲೋಬಲ್ ಗವರ್ನೆನ್ಸ್ ಫೋರಮ್	**ಚಾಡೆನ್ ಹಂಟರ್** ಹವಾಮಾನ ಕಾರ್ಯಕರ್ತ ಮತ್ತು ಚಲನಚಿತ್ರ ನಿರ್ಮಾಪಕ	**ಹಾನ್ಸ್ ಪಾಲ್ ಬರ್ಕ್ನರ್** ಅಧ್ಯಕ್ಷರು, ಬಿಸಿಜಿ ಗ್ಲೋಬಲ್
ಥಾಮಸ್ ಡೌನರ್ ವ್ಯವಸ್ಥಾಪಕ ನಿರ್ದೇಶಕರು ಮತ್ತು ಹಿರಿಯ ಪಾಲುದಾರರು, ಬಿಸಿಜಿ	**ವಿಲಿಯಂ ಬ್ಲೇರ್** ಉಪಾಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರು, ಲಾಕ್ಹೀಡ್ ಮಾರ್ಟಿನ್	**ವಿನ್ಸೆಂಟ್ ಪೆಂಜರ್** ವಿಪಿ, ಲಾಕ್ಹೀಡ್ ಮಾರ್ಟಿನ್	**ಡಾ.ಸೌಮ್ಯ ಸ್ವಾಮಿನಾಥನ್** ಮುಖ್ಯ ವಿಜ್ಞಾನಿ, ಡಬ್ಲ್ಯೂ.ಹೆಚ್.ಓ	**ಅಡ್ಲಾನ್ ಅಹ್ಮದ್** ಸಿಇಒ, ಪೆಟ್ರೋನಾಸ್ ಹೈಡ್ರೋಜನ್

ವಾರೆನ್ ಹ್ಯಾರಿಸ್ ಸಿಇಒ, ಟಾಟಾ ಟೆಕ್ನಾಲಜೀಸ್	**ವಿಜಯ್ ನಿರಾಣಿ** ಎಂ.ಡಿ, ಎಂ.ಆರ್.ಎನ್ ಗ್ರೂಪ್	**ನಿತಿನ್ ಕಾಮತ್** ಸಂಸ್ಥಾಪಕರು ಮತ್ತು ಸಿಇಒ ಜೆರೋಧಾ	**ಪಿಯರ್ ಡಿಕೆಲ** ಸಿಇಒ ಸಫ್ರಾನ್ ಇಂಡಿಯಾ	**ಮಹೇಶ್ ಬಾಬು** ಸಿಇಒ, ಸ್ವಿಚ್ ಇಂಡಿಯಾ
ಚೇತನ್ ಮೈನಿ ಸನ್ ಮೊಬಿಲಿಟಿ ಸಹ–ಸ್ಥಾಪಕರು ಮತ್ತು ಅಧ್ಯಕ್ಷರು	**ಐರಿನಾ ಘೋಸ್** ಸಿಒಒ, ಮೈಕ್ರೋಸಾಫ್ಟ್ ಇಂಡಿಯಾ	**ವೇಣು ನುಗುರಿ** ಎಂ.ಡಿ ಮತ್ತು ಸಿಇಒ ಹಿಟಾಚಿ ಎನರ್ಜಿ	**ನಾನಾ ಮುರುಗೇಶನ್** ಎಸ್.ವಿ.ಪಿ ಇಂಟರ್ನ್ಯಾಷನಲ್ ಬ್ಯುಸಿನೆಸ್, ಕಾಯಿನ್ ಬೇಸ್	**ಅಸಿಮ್ ಕುಮಾರ್ ಮುಖೋಪಾಧ್ಯಾಯ** ಸಿಒಒ ಮತ್ತು ವ್ಯವಸ್ಥಾಪಕ ನಿರ್ದೇಶಕ, ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಪರಿಹಾರಗಳು

ಕಪಿಲ್ ಮಹೇಶ್ವರಿ ನಾಯಕರು ನವೀಕರಿಸಬಹುದಾದ ಇಂಧನ, ಆರ್.ಐ.ಎಲ್	**ಸಿ ಬಿ ಅನಂತಕೃಷ್ಣನ್** ಹಾಲಿ ಸಿಎಂಡಿ, ಎಚ್.ಎ.ಎಲ್	**ಪ್ರಶಾಂತ್ ಪ್ರಕಾಶ್** ಪಾಲುದಾರರು, ಆಕ್ಸೆಲ್ ಪಾರ್ಟನರ್ಸ್	**ಸಂತೋಷ್ ಕುಮಾರ್** ಎಂಡಿ, ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್	**ಅಲೋಕ್ ನಂದಾ** ಸಿಟಿಒ, ಜಿಇ ಇಂಡಿಯಾ
ಉದಯಂತ್ ಮಲ್ಹೋತ್ರಾ ಸಿಇಒ ಮತ್ತು ಎಂಡಿ, ಡೈನಾಮ್ಯಾಟಿಕ್ ಟೆಕ್ನಾಲಜೀಸ್	**ವೆಂಕಟ್ ರಾವ್** ಗ್ರೂಪ್ ಚೀಫ್ ಕಂಪ್ಲೈಯನ್ಸ್ ಆಫೀಸರ್, ಶಾಹಿ ಎಕ್ಸ್‌ಪೋರ್ಟ್ಸ್	**ಜಿತೇಂದ್ರ ಚಡ್ಡಾ** ಕಂಟ್ರಿ ಹೆಡ್ ಇಂಡಿಯಾ, ಗ್ಲೋಬಲ್ ಫೌಂಡ್ರೀಸ್	**ಅಂಬರ್ ದುಬೆ** ಮಾಜಿ ಜಂಟಿ ಕಾರ್ಯದರ್ಶಿ, ನಾಗರಿಕ ವಿಮಾನಯಾನ ಸಚಿವಾಲಯ	**ಗುರುಪ್ರಸಾದ್ ಮುದ್ಲಾಪುರ್** ಜಂಟಿ ಎಂಡಿ ಮತ್ತು ಸಿಟಿಒ, ಬಾಷ್

ವಿಶೇಷ ಕಾರ್ಯಕ್ರಮಗಳು

ರಿಕಿ ಕೇಜ್ ಅವರಿಂದ ಸಂಗೀತ ಕಚೇರಿ

ಬಹು-ಗ್ರ್ಯಾಮಿ ಪ್ರಶಸ್ತಿ ವಿಜೇತ ಸಂಗೀತಗಾರ ಮತ್ತು ಪರಿಸರವಾದಿ ರಿಕಿ ಕೇಜ್ ಅವರಿಂದ ವಿಶೇಷ ಪ್ರದರ್ಶನ.

ದಿನ 1 – ಸಂಜೆ

ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತದ ಜುಗಲ್ಬಂದಿ

ಎಲ್ಲಾ ಸಂಗೀತ ಪ್ರೇಮಿಗಳಿಗೆ ರೋಮಾಂಚನಕಾರಿ ಅಧಿವೇಶನ.

ದಿನ 2 – ಸಂಜೆ

ಯಕ್ಷಗಾನ

ಕರ್ನಾಟಕದ ಪರಂಪರೆಯನ್ನು ಕೊಂಡಾಡುವ ಸಮ್ಮೋಹನಗೊಳಿಸುವ ಯಕ್ಷಗಾನ ಪ್ರದರ್ಶನ.

ದಿನ 2 – ಸಂಜೆ

ಪ್ರದರ್ಶನಗಳು

ಚಿತ್ರಕಲಾ ಪರಿಷತ್ತಿನಲ್ಲಿ ಕರಕುಶಲ ವಸ್ತು ಪ್ರದರ್ಶನ
ಬೆಂಗಳೂರಿನ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನಲ್ಲಿ ಸ್ವೆಟೋಸ್ಲಾವ್ ರೋರಿಚ್ ಅವರ ಪ್ರದರ್ಶನ

ಎಲ್ಲಾ ದಿನ

ಈಗಲೇ ನೋಂದಣಿ ಮಾಡಿ : investkarnataka.co.in/gim2022

Website: investkarnataka.co.in Email: gim2022@timesnetwork.in Ph. no: 6366581603

ದೇಶೀಯ ಪಾಲುದಾರರು : ಫ್ರಾನ್ಸ್ ನೆದರ್ಲ್ಯಾಂಡ್ಸ್ ಜರ್ಮನಿ ಜಪಾನ್ ಸೌತ್ ಕೊರಿಯಾ ಆಸ್ಟ್ರೇಲಿಯಾ

ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಲ್ಪಟ್ಟಂತೆ, "ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಯ ಎಲ್ಲಾ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಯ ಕಡೆಗೆ ಶ್ರಮಿಸಬೇಕು, ಇದರಿಂದ ರಾಷ್ಟ್ರವು ನಿರಂತರವಾಗಿ ಉನ್ನತ ಮಟ್ಟದ ಪ್ರಯತ್ನ ಮತ್ತು ಸಾಧನೆಗೆ ಏರುತ್ತದೆ" ಎಂಬುದು ಭಾರತದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಕರ್ತವ್ಯವಾಗಿದೆ.

ಗುಂಜನ್ ಕೃಷ್ಣ, ಐಎಎಸ್
ಕೈಗಾರಿಕಾ ಅಭಿವೃದ್ಧಿ ಆಯುಕ್ತರು;
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ನಿರ್ದೇಶಕರು ಕರ್ನಾಟಕ ಸರ್ಕಾರ

ಡಾ.ಇ.ವಿ.ರಮಣ ರೆಡ್ಡಿ, ಐಎಎಸ್
ಹೆಚ್ಚುವರಿ ಮುಖ್ಯ ಕಾರ್ಯದರ್ಶಿ,
ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆ
ಕರ್ನಾಟಕ ಸರ್ಕಾರ

ಸಂಕ್ಷಿಪ್ತ ಸುದ್ದಿ

ನ.6ಕ್ಕೆ ಶಿಕ್ಷಕರ ಅರ್ಹತಾ ಪರೀಕ್ಷೆ

ಬೆಂಗಳೂರು: ರಾಜ್ಯದಾದ್ಯಂತ ನ. 6ರಂದು ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ನಡೆಯಲಿದೆ.

ಬೆಳಿಗ್ಗೆ 9.30ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಪತ್ರಿಕೆ-1, ಮಧ್ಯಾಹ್ನ 2ರಿಂದ ಸಂಜೆ 4.30ರವರೆಗೆ ಪತ್ರಿಕೆ -2 ಪರೀಕ್ಷೆ ನಡೆಯಲಿದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್‌ನಿಂದ ಪ್ರವೇಶಪತ್ರ ಡೌನ್ ಲೋಡ್ ಮಾಡಿಕೊಳ್ಳಬಹುದು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ತಿಳಿಸಿದೆ.

ಪರೀಕ್ಷಾ ಮಾರ್ಗಸೂಚಿಯನ್ನೂ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಜೊತೆಗೆ, ಜಿಲ್ಲಾ ನೋಡಲ್ ಅಧಿಕಾರಿಗಳ ಸಂಪರ್ಕ ಸಂಖ್ಯೆಯನ್ನೂ ನೀಡಲಾಗಿದೆ. ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದುಕೊಳ್ಳಬಹುದು.

'ಧಾರ್ಮಿಕ ಸ್ವಾತಂತ್ರ್ಯಕ್ಕೆ ಅಮೆರಿಕ ಆದ್ಯತೆ'

ವಾಷಿಂಗ್ಟನ್ (ಪಿಟಿಐ): 'ಧಾರ್ಮಿಕ ಸ್ವಾತಂತ್ರ್ಯವು ಅಮೆರಿಕನ್ನರಿಗೆ ಮೂಲಭೂತವಾಗಿ ಅಮೂಲ್ಯವಾದುದು. ಇದನ್ನು ಬೆಂಬಲಿಸುವುದು ಅಧ್ಯಕ್ಷ ಜೋ ಬೈಡನ್ ಅವರ ಪ್ರಮುಖ ಆದ್ಯತೆಯೂ ಆಗಿದೆ' ಎಂದು ಅಮೆರಿಕ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಹೇಳಿದರು.

ಬೈಡನ್ ಆಡಳಿತದಲ್ಲಿ ಸೇವೆ ಸಲ್ಲಿಸುತ್ತಿರುವ ಭಾರತೀಯ ಅಮೆರಿಕನ್ನರು ಮತ್ತು ಸಮುದಾಯದ ಮುಖಂಡರು ದೀಪಾವಳಿ ನಿಮಿತ್ತ ಬುಧವಾರ ಸೇರಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

'ಧಾರ್ಮಿಕ ಸ್ವಾತಂತ್ರ್ಯವು ರಾಷ್ಟ್ರದ ರಾಜತಾಂತ್ರಿಕತೆಯ ಅಮೂಲ್ಯವಾದ ಭಾಗವೆನಿಸಿದೆ. ಇದು ಇತರ ರಾಷ್ಟ್ರಗಳೊಂದಿಗೆ ಮತ್ತು ವಿಶ್ವದ ಜನರೊಂದಿಗೆ ಬಾಂಧವ್ಯ ಗಟ್ಟಿಗೊಳಿಸಲು ನಮಗೆ ಸಹಾಯ ಮಾಡುತ್ತದೆ. ದೀಪಾವಳಿಯಂತಹ ಹಬ್ಬಗಳನ್ನು ಇಷ್ಟೊಂದು ಸಂಭ್ರಮದಿಂದ ಆಚರಿಸುವುದನ್ನು ನೋಡಿದರೆ ಈ ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯಕ್ಕೆ ನಮ್ಮ ಬೆಂಬಲ ಹೇಗಿದೆ ಎನ್ನುವುದು ತಿಳಿಯಬಹುದು'ಎಂದರು.

ಜೆಡಿಎಸ್ ಪಕ್ಷದಿಂದ ಮೊದಲ ಹಂತದಲ್ಲಿ 35 ದಿನಗಳ ಯಾತ್ರೆ

'ಪಂಚರತ್ನ ಯಾತ್ರೆ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್‌ನ ಮಹತ್ವಾಕಾಂಕ್ಷೆಯ 'ಪಂಚರತ್ನ ರಥಯಾತ್ರೆ'ಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ನಗರದ ಪುರಾತನ ಗವಿಗಂಗಾಧರೇಶ್ವರ ದೇವಸ್ಥಾನದಲ್ಲಿ ಗುರುವಾರ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ನವೆಂಬರ್ 1 ರಂದು ಮುಳಬಾಗಿಲಿನ ಕುರುಡುಮಲೆಯಲ್ಲಿ ಪಂಚರತ್ನ ರಥಯಾತ್ರೆ ಪೂರ್ಣ ಪ್ರಮಾಣದಲ್ಲಿ ಆರಂಭವಾಗಲಿದೆ. ಅಂದು ಅಲ್ಲಿ ಬೃಹತ್ ಸಮಾವೇಶ ನಡೆಸಲಾಗುವುದು ಎಂದರು.

ಶುಕ್ರವಾರ ನಗರದ ಅಣ್ಣಮ್ಮ ದೇವಸ್ಥಾನದಲ್ಲಿ ಪೂಜೆ ಮಾಡಲಾಗುವುದು. ಗಾಂಧಿನಗರದಲ್ಲಿ ಸಾಂಕೇತಿಕವಾಗಿ ರಥಯಾತ್ರೆ ಮಾಡಲಾಗುತ್ತದೆ. ಮೊದಲ ಹಂತದಲ್ಲಿ 35 ದಿನಗಳ ಕಾಲ ರಥಯಾತ್ರೆ ಮಾಡಲಾಗುವುದು ಎಂದು ಅವರು ಹೇಳಿದರು.

'ರಥಯಾತ್ರೆ ಜತೆಗೆ ಗ್ರಾಮ ವಾಸ್ತವ್ಯವನ್ನೂ ಮಾಡಲಾಗುತ್ತದೆ. ಇವತ್ತು ನಮ್ಮ ಪಕ್ಷಕ್ಕೆ ಇದು ಸವಾಲು. ರಾಷ್ಟ್ರೀಯ ಪಕ್ಷಗಳು ಜನರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ನಾನು ಮುಖ್ಯಮಂತ್ರಿ ಆಗಿದ್ದಾಗ ರೈತರ ಸಾಲ ಮನ್ನಾ ಮಾಡಿದ್ದೆ. ಆಗಲೂ ರಾಷ್ಟ್ರೀಯ ಪಕ್ಷಗಳು ಲಘುವಾಗಿ ಮಾತನಾಡಿದ್ದವು.

ಜೆಡಿಎಸ್ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಎಚ್‌.ಡಿ.ದೇವೇಗೌಡ ಮತ್ತು ಎಚ್‌.ಡಿ.ಕುಮಾರಸ್ವಾಮಿ ಭಾಗವಹಿಸಿದ್ದರು.

ಕಾಂಗ್ರೆಸ್ ನಾಯಕರಿಗೆ ಈಗ ಭದ್ರಾ ಮೇಲ್ದಂಡೆ ಬಗ್ಗೆ ಕಾಳಜಿ ಬಂದಿದೆ. ಐದು ವರ್ಷ ಸರ್ಕಾರ ಇದ್ದಾಗ ಏನು ಮಾಡಿದ್ದರು ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'ಬೇರೆ ಪಕ್ಷದ ಪಾದಯಾತ್ರೆ ಬಗ್ಗೆ ಭಯ ಇಲ್ಲ. ಇವರ ಪಾದಯಾತ್ರೆ ನೋಡುತ್ತಿದ್ದೇನೆ. ಕಾಂಗ್ರೆಸ್ ನಾಯಕರು ಈ ರೀತಿ ಕಾರ್ಯಕ್ರಮವನ್ನು ಐದು ವರ್ಷ ಅಧಿಕಾರದಲ್ಲಿ ಇದ್ದಾಗ ಮಾಡಿರಲಿಲ್ಲ. ಈಗ ಮಾಡುವುದರಿಂದ ಏನು ಪ್ರಯೋಜನ? ಇದು ಚುನಾವಣಾ ಸ್ಟಂಟ್ ಅಷ್ಟೇ' ಎಂದು ಅವರು ತಿಳಿಸಿದರು.

'ಪರಿಶಿಷ್ಟ ಪಂಗಡದ ಸಮಾಜಕ್ಕೆ ಮೀಸಲಾತಿ ಕೊಟ್ಟಿದ್ದೇ ದೇವೇಗೌಡರು. ಗಂಡೆದೆ ಮುಖ್ಯಮಂತ್ರಿ ಅಂತ ಮಾತಿನಲ್ಲಿ ಹೇಳಿಕೊಂಡರೆ ಸಾಲುವುದಿಲ್ಲ. ಇಷ್ಟು ದಿನ ಆ ಸಮುದಾಯದ ಸ್ವಾಮೀಜಿಯನ್ನು ಯಾಕೆ ಧರಣಿ ಕೂರಿಸಿದಿರಿ' ಎಂದು ಬೊಮ್ಮಾಯಿ ಅವರನ್ನು ಪ್ರಶ್ನಿಸಿದರು.

> **ಬಿಜೆಪಿಯವರು ಪಾಪದ ಹಣ ಇಟ್ಟುಕೊಂಡು ಕರ್ನಾಟಕದಲ್ಲಿ ಆಪರೇಷನ್ ಕಮಲ ಮಾಡಿದರು. ಈಗ ತೆಲಂಗಾಣದಲ್ಲಿ ಕೂಡ ಇದನ್ನೇ ಮಾಡಲು ಹೊರಟಿದ್ದಾರೆ**
> **ಎಚ್‌.ಡಿ.ಕುಮಾರಸ್ವಾಮಿ** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಎಚ್‌.ಡಿ. ದೇವೇಗೌಡ ಪುನರಾಯ್ಕೆ

ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡರನ್ನು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಪುನರಾಯ್ಕೆ ಮಾಡಲು ಗುರುವಾರ ಸಂಜೆ ನಡೆದ ಕಾರ್ಯಕಾರಿಣಿ ಸಭೆಯಲ್ಲಿ ಎಲ್ಲ ರಾಜ್ಯಗಳ ಪ್ರತಿನಿಧಿಗಳು ಒಮ್ಮತ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಅಧಿಕೃತ ಪ್ರಕಟಣೆ ಹೊರಬೀಳಬೇಕಿದೆ. ಸಭೆಯಲ್ಲಿ ಕೇರಳದ ಇಂಧನ ಸಚಿವ ಕೃಷ್ಣನ್ ಕುಟ್ಟಿ, ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ ಇಬ್ರಾಹಿಂ, ಅಲ್ಲದೆ, 13 ರಾಜ್ಯಗಳ ಪ್ರತಿನಿಧಿಗಳು, ಕೇರಳದ ಹಾಲಿ ಶಾಸಕರು ಭಾಗವಹಿಸಿದ್ದರು. ಕಾರ್ಯಕಾರಿಣಿ ಸಭೆ ಶುಕ್ರವಾರವೂ ಮುಂದುವರೆಯಲಿದೆ.

'ಭಾರತ್ ಜೋಡೊದಿಂದ ಜನರ ಸಮಸ್ಯೆ ಅರ್ಥ ಆಗಲ್ಲ'

'ಭಾರತ್ ಜೋಡೊದಿಂದ ಜನರ ಸಮಸ್ಯೆ ಅರ್ಥ ಆಗಲ್ಲ. ಆ ಪಾದಯಾತ್ರೆಯಿಂದ ಆದ ಪರಿಣಾಮಗಳ ಕುರಿತ ಪಟ್ಟಿ ಕಾಂಗ್ರೆಸ್ ನಾಯಕರು ಮಾಡ್ತಾರಂತೆ. ಅದರಿಂದ ಜನರ ಸಮಸ್ಯೆ ನಿವಾರಣೆ ಮಾಡಲು ಸಾಧ್ಯವೇ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಪಂಚರತ್ನ ಯಾತ್ರೆಗೆ ಚಾಲನೆ ನೀಡಿದ ನಂತರ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಮತ್ತು ಬಿಜೆಪಿಯ ಪಾಪದ ಕೊಡ ತುಂಬಿದೆ. ಕಾಂಗ್ರೆಸ್‌ನವರು ಯಾವ ಜೋಡೊ ಆದರೂ ಮಾಡಲಿ, ಬಿಜೆಪಿಯವರು ಯಾವ ಸಂಕಲ್ಪ ಯಾತ್ರೆಯನ್ನಾದರೂ ಮಾಡಲಿ. 2023 ರಲ್ಲಿ ನಮ್ಮ ಪಕ್ಷವೇ ಅಧಿಕಾರಕ್ಕೆ ಬರಲಿದೆ' ಎಂದು ಹೇಳಿದರು.

'ಒಂದು ವೋಟಿಗೆ ₹2,000, ಕುಕ್ಕರ್ ಕೊಡ್ತೇವೆ ಅಂತ ಬರ್ತಾರೆ. ಇದೆಲ್ಲ ರಾಜ್ಯದ ಜನರಿಂದ ಲೂಟಿ ಮಾಡಿದ ಹಣ. ಆದರೆ, ನಾವು ಜನರ ದುಡ್ಡು ಲೂಟಿ ಮಾಡಿಲ್ಲ' ಎಂದರು. 'ನಮ್ಮ ಸರ್ಕಾರ ಬಂದರೆ ಈ ಉದ್ದೇಶ ಸಾಕಾರಕ್ಕಾಗಿ ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಮಾಗಡಿಯಲ್ಲಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಗುವುದು' ಎಂದು ಹೇಳಿದರು.

ಸುದ್ದಿ 2 ನಿಮಿಷ

ಅರೇಬಿಕ್ ಶಾಲೆಗಳಲ್ಲಿ ಶಿಕ್ಷಣ: ವರದಿ ಸಲ್ಲಿಸಲು ಸೂಚನೆ

ಮಡಿಕೇರಿ: 'ರಾಜ್ಯದಲ್ಲಿರುವ ಎಲ್ಲ ಅರೇಬಿಕ್ ಶಾಲೆಗಳ ಮಕ್ಕಳೂ ಉತ್ತಮ ಶಿಕ್ಷಣ ಪಡೆಯಬೇಕೆಂಬ ಉದ್ದೇಶದಿಂದ ಅಲ್ಲಿನ ಬೋಧನೆ ಕುರಿತು ವರದಿ ಕೇಳಲಾಗಿದೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

'ರಾಜ್ಯದಲ್ಲಿ 106 ಅನುದಾನಿತ ಹಾಗೂ 80 ಅನುದಾನರಹಿತ ಅರೇಬಿಕ್ ಶಾಲೆಗಳಿವೆ. ಅಲ್ಲಿ ಶಿಕ್ಷಣ ಇಲಾಖೆಯ ಪಠ್ಯಕ್ರಮದಂತೆ ಬೋಧನೆ ನಡೆಯುತ್ತಿಲ್ಲ ಎಂಬ ಆರೋಪಗಳಿವೆ. ಆ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದು ಗುರುವಾರ ಸುದ್ದಿಗಾರರಿಗೆ ಹೇಳಿದರು.

'ಬಹಳಷ್ಟು ಅರೇಬಿಕ್ ಶಾಲೆಗಳಲ್ಲಿ ಭಾಷೆ, ವಿಜ್ಞಾನದ ಕಲಿಕೆ ನಡೆಯುತ್ತಿಲ್ಲ. ಈ ಶಾಲೆಗಳಿಗೆ ಪ್ರತಿವರ್ಷ ಸುಮಾರು 27 ಸಾವಿರ ಮಕ್ಕಳು ಸೇರುತ್ತಾರೆ. ಎಸ್ಸೆಸ್ಸೆಲ್ಸಿ ವೇಳೆಗೆ 2 ಸಾವಿರ ವಿದ್ಯಾರ್ಥಿಗಳಷ್ಟೇ ಇರುತ್ತಾರೆ. ದಾಖಲಾಗುವ ಮತ್ತು ಹಾಜರಾಗುವವರ ಸಂಖ್ಯೆಯಲ್ಲಿ ಭಾರಿ ವ್ಯತ್ಯಾಸವಿದೆ. ನಿರ್ದಿಷ್ಟ ಧರ್ಮದ ಮಕ್ಕಳು ಶಾಲೆಗಳಿಂದ ಹೊರಗುಳಿಯುತ್ತಿದ್ದಾರೆ. ಇದಾಗಬಾರದು' ಎಂದು ಪ್ರತಿಪಾದಿಸಿದರು.



'ಹುಡುಗಿಯನ್ನು 'ಐಟಂ' ಎನ್ನುವುದು ಅವಹೇಳನಕಾರಿ'

ಮುಂಬೈ: ಹುಡುಗಿಯನ್ನು 'ಐಟಂ' ಎಂದು ಕರೆಯುವುದು ಅವಹೇಳನಕಾರಿ. ಇದು ಲೈಂಗಿಕವಾಗಿ ಆಕೆಯನ್ನು ಗುರಿಯಾಗಿಸಿ ಅವಮಾನಿಸುವುದಾಗಿದೆ ಎಂದು ಮುಂಬೈನ ವಿಶೇಷ ಕೋರ್ಟ್ ಹೇಳಿದೆ.

2015ರಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಯುವಕನಿಗೆ ಒಂದೂವರೆ ವರ್ಷ ಜೈಲು ಶಿಕ್ಷೆ ವಿಧಿಸಿದ ಸಂದರ್ಭದಲ್ಲಿ ನ್ಯಾಯಾಲಯ ಈ ರೀತಿ ಹೇಳಿದ್ದು, ಈ ಆದೇಶವನ್ನು ಅಕ್ಟೋಬರ್ 20ರಂದು ನೀಡಲಾಗಿದೆ. ಯುವಕನ ಮೇಲೆ ಸಹಾನುಭೂತಿ ತೋರಿಸಲು ನಿರಾಕರಿಸಿದ ಕೋರ್ಟ್, ಬೀದಿ ಬದಿಯ 'ರೋಮಿಯೊ'ಗಳಿಗೆ ತಕ್ಕ ಪಾಠ ಕಲಿಸಬೇಕು. ಮುಂದೆ ಇಂತಹ ಅಸಭ್ಯ ವರ್ತನೆ ತೋರದಂತೆ ಎಚ್ಚರಿಕೆಯಾಗಬೇಕು ಎಂದು ನ್ಯಾಯಮೂರ್ತಿ ಎ.ಜೆ. ಅನ್ಸಾರಿ ತಿಳಿಸಿದ್ದಾರೆ.

2015ರ ಜುಲೈ 14ರಂದು ಮುಂಬೈನ ಹೊರವಲಯದಲ್ಲಿ 25 ವರ್ಷದ ಯುವಕನು ಬಾಲಕಿಯನ್ನು 'ಐಟಂ' ಎಂದು ಕರೆದು, ಜಡೆ ಹಿಡಿದು ಎಳೆದಾಡಿದ್ದ. ಆಗ ಬಾಲಕಿಗೆ 16 ವರ್ಷ ವಯಸ್ಸು. ಬಾಲಕಿ ಶಾಲೆಯಿಂದ ಹಿಂತಿರುಗುತ್ತಿದ್ದಾಗ ಈ ರೀತಿ ಮಾಡಲಾಗಿತ್ತು.

ಯುವಕನ ವರ್ತನೆ ಸಂಪೂರ್ಣವಾಗಿ ಅನುಚಿತವಾಗಿದೆ. ಆತ ದುರುದ್ದೇಶದಿಂದಲೇ ಆಕೆಯ ಜಡೆಯನ್ನು ಹಿಡಿದು ಎಳೆದಿದ್ದಾನೆ ಮತ್ತು ಆಕೆಯನ್ನು 'ಐಟಂ' ಎಂದು ಕರೆದಿದ್ದಾನೆ. ಇದು ಬಾಲಕಿಯನ್ನು ಲೈಂಗಿಕವಾಗಿ ಗುರಿಯಾಗಿಸಿ ಮಾಡಿದ ಅವಮಾನ ಎಂಬುದು ಸಾಬೀತಾಗುತ್ತದೆ ಎಂದು ಅನ್ಸಾರಿ ಹೇಳಿದ್ದಾರೆ.

ಮತ್ತೆರಡು ಯಾತ್ರೆ: ಕಾಂಗ್ರೆಸ್ ಸಿದ್ಧತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೃಷ್ಣಾ ನ್ಯಾಯಾಧೀಕರ ಣದ ತೀರ್ಪನ್ನು ಜಾರಿಗೊಳಿಸಲು ಅಧಿಸೂಚನೆ ಹೊರಡಿಸದೇ ಇರುವುದು, ಕಳಸಾ-ಬಂಡೂರಿ (ಮಹದಾಯಿ) ಯೋಜನೆಯ ಜಾರಿ ವಿಳಂಬ ಹಾಗೂ 371 ಜೆ ಸಮರ್ಪಕ ಅನುಷ್ಠಾನ ಆಗುತ್ತಿಲ್ಲ ಎಂಬ ವಿಚಾರಗಳನ್ನು ಮುಂದಿಟ್ಟುಕೊಂಡು ಮತ್ತೆರಡು ಯಾತ್ರೆಗಳನ್ನು ನಡೆಸಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಸಿದ್ಧತೆ ನಡೆಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸಲು ಬಂದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಈ ಸಂಬಂಧ ಪಕ್ಷದ ಹಿರಿಯ ನಾಯಕರ ಜತೆಗೆ ಸಮಾಲೋಚನೆ ನಡೆಸಿದರು. ಎಲ್ಲರೂ ಒಗ್ಗಟ್ಟಿನಿಂದ ಪಾಲ್ಗೊಂಡು ಈ ಯಾತ್ರೆ ನಡೆಸಬೇಕು ಎಂದು ಪಕ್ಷದ ಹಿರಿಯ ನಾಯಕರು ಸೂಚನೆ ನೀಡಿದರು. ಬಳಿಕ ಸಿದ್ದರಾಮಯ್ಯ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರೊಂದಿಗೂ ಚರ್ಚಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಸಿದ್ದರಾಮಯ್ಯ, 'ಮೂರು ವಿಚಾರ ಮುಂದಿಟ್ಟುಕೊಂಡು 2 ಯಾತ್ರೆಗಳನ್ನು ನಡೆಸಲು ಯೋಜಿಸಲಾಗಿದೆ. ಯಾತ್ರೆಯ ರೂಪರೇಷೆ ಇನ್ನೂ ಅಂತಿಮವಾಗಿಲ್ಲ. ಈ ಸಂಬಂಧ ತಂಡ ರಚಿಸಲಾಗುವುದು' ಎಂದರು.

'ದಕ್ಷಿಣ ಕರ್ನಾಟಕಕ್ಕೆ ಸಂಬಂಧಿಸಿದಂತೆ ಈಗಾಗಲೇ ಮೇಕೆದಾಟು ಪಾದಯಾತ್ರೆ ಮಾಡಿದ್ದೇವೆ. ಉತ್ತರ ಕರ್ನಾಟಕದ ವಿಚಾರದಲ್ಲಿ ರಾಜ್ಯ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ. ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ವಿಳಂಬ ಮಾಡುತ್ತಿದೆ. ಈಗ ನಾವು ಪಾದಯಾತ್ರೆ ನಡೆಸುವುದಿಲ್ಲ. ಟ್ರ್ಯಾಕ್ಟರ್ ಹಾಗೂ ಇತರ ವಾಹನಗಳ ಮೂಲಕ ಯಾತ್ರೆ ನಡೆಸಲಿದ್ದೇವೆ' ಎಂದರು.

ವಿಧಾನಸಭಾ ಚುನಾವಣೆಗೆ ಸಿದ್ಧತೆ ನಡೆಸಲು ಆದಷ್ಟು ಬೇಗ ರಾಜ್ಯ ಚುನಾವಣಾ ಸಮಿತಿ ಹಾಗೂ ಉನ್ನತ ಸಮಿತಿಗಳನ್ನು ರಚಿಸಬೇಕು ಎಂಬುದು ನಮ್ಮ ಆಲೋಚನೆ. ಈ ಬಗ್ಗೆ ರಾಷ್ಟ್ರೀಯ ನಾಯಕರೊಂದಿಗೆ ಚರ್ಚಿಸಲಾಗಿದೆ ಎಂದರು. ನವೆಂಬರ್ ಅಂತ್ಯದೊಳಗೆ ಎಲ್ಲ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಬೇಕು ಎಂಬ ಗುರಿ ಇರಿಸಿಕೊಂಡಿದ್ದೇವೆ ಎಂದರು.

ಮೀಸಲಾತಿ ಸಂಬಂಧ ಪಂಚಮಸಾಲಿ ಸಮುದಾಯದ ಬೇಡಿಕೆ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ 'ಈ ಸಂಬಂಧ ರಾಜ್ಯ ಸರ್ಕಾರವು ಸುಭಾಷ್ ಅಡಿ ನೇತೃತ್ವದಲ್ಲಿ ಸಮಿತಿ ರಚಿಸಿದೆ. ಈ ಸಮಿತಿ ಇನ್ನೂ ವರದಿ ಕೊಟ್ಟಿಲ್ಲ. ಸಮಿತಿ ಮೊದಲು ವರದಿ ನೀಡಲಿ. ಆಮೇಲೆ ಆ ವಿಷಯದ ಬಗ್ಗೆ ಚರ್ಚಿಸೋಣ' ಎಂದರು. 'ಪರಿಶಿಷ್ಟರ ಮೀಸಲು ಹೆಚ್ಚಿಸುವ ಬಗ್ಗೆ ನಾವು ನ್ಯಾಯಮೂರ್ತಿ ನಾಗಮೋಹನದಾಸ್ ಸಮಿತಿ ರಚನೆ ಮಾಡಿದ್ದೆವು. ಆ ಸಮಿತಿ ವರದಿ ಕೊಟ್ಟಿತ್ತು. ಅದರ ಆಧಾರದಲ್ಲಿ ಬಿಜೆಪಿ ಸರ್ಕಾರ ಮೀಸಲಾತಿ ಹೆಚ್ಚಳ ಮಾಡಿದೆ' ಎಂದು ತಿಳಿಸಿದರು.

ದ್ವೇಷ ಭಾಷಣ: ಆಜಂ ಖಾನ್‌ಗೆ ಜೈಲು

ಲಖನೌ: 2019ರ ಲೋಕಸಭಾ ಚುನಾವಣೆ ವೇಳೆ ದ್ವೇಷ ಭಾಷಣ ಮಾಡಿದ ಪ್ರಕರಣದಲ್ಲಿ ಸಮಾಜವಾದಿ ಪಕ್ಷದ ನಾಯಕ ಆಜಂ ಖಾನ್ ಅವರಿಗೆ ಸಂಸದರ/ಶಾಸಕರ ವಿರುದ್ಧದ ಪ್ರಕರಣಗಳ ವಿಚಾರಣೆ ನಡೆಸುವ ನ್ಯಾಯಾಲಯವು ಮೂರು ವರ್ಷಗಳ ಜೈಲು ಶಿಕ್ಷೆಯನ್ನು ಗುರುವಾರ ವಿಧಿಸಿದೆ.

ನ್ಯಾಯಾಲಯವು ಆಜಂ ಖಾನ್ ಅವರಿಗೆ ₹6 ಸಾವಿರ ದಂಡ ವಿಧಿಸಿದೆ. ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವುದಕ್ಕಾಗಿ ನ್ಯಾಯಾಲಯವು ಅವರಿಗೆ ಜಾಮೀನು ನೀಡಿದೆ.

'ಯಾವುದೇ ವಿಧಾನಸಭೆ ಸದಸ್ಯನಿಗೆ ಎರಡು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಜೈಲು ಶಿಕ್ಷೆಯಾದರೆ ಆತನ ಸದಸ್ಯತ್ವ ರದ್ದಾಗಲಿದೆ' ಎಂದು ಸರ್ಕಾರದ ವಕೀಲ ಅಜಯ್ ತಿವಾರಿ ತಿಳಿಸಿದರು.

ಕೊಯಮತ್ತೂರು ಕಾರು ಸ್ಫೋಟ ಪ್ರಕರಣದ ತನಿಖೆ ಎನ್‌ಐಎಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊಯಮತ್ತೂರಿನ ಉಕ್ಕಡಂ ದೇವಾಲಯದ ಬಳಿ ಕಾರಿನಲ್ಲಿ ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ಹಸ್ತಾಂತರಿಸಲು ಕೇಂದ್ರ ಗೃಹ ಸಚಿವಾಲಯ ನಿರ್ಧರಿಸಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಸ್ಫೋಟ ಪ್ರಕರಣದ ತನಿಖೆಯನ್ನು ಎನ್‌ಐಎಗೆ ಒಪ್ಪಿಸಬೇಕೆಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಶಿಫಾರಸು ಮಾಡಿದ ಬಳಿಕ ಕೇಂದ್ರ ಸರ್ಕಾರದ ಈ ನಿರ್ಧಾರ ಹೊರಬಿದ್ದಿದೆ.

'ಪ್ರಕರಣಕ್ಕೆ ಅಂತರರಾಷ್ಟ್ರೀಯ ಮಟ್ಟದ ನಂಟು ಇರುವ ಸಾಧ್ಯತೆ ಇರುವುದರಿಂದ ಇದರ ತನಿಖೆಯನ್ನು ಕೇಂದ್ರ ತನಿಖಾ ಸಂಸ್ಥೆಗೆ ಒಪ್ಪಿಸಲು ತೀರ್ಮಾನಿಸಲಾಗಿದೆ' ಎಂದೂ ತಮಿಳುನಾಡು ಸರ್ಕಾರ ಹೇಳಿದೆ.

ನಿರ್ಬಂಧ ಲೆಕ್ಕಿಸದೇ 'ಇಮ್ರಾನ್ ಖಾನ್' ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನದ ಮಾಜಿ ಪ್ರಧಾನಿ, ಕ್ರಿಕೆಟಿಗ ಇಮ್ರಾನ್ ಖಾನ್ ಕುರಿತ ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕೆ ಕಲಾಗ್ರಾಮದಲ್ಲಿ ನಿರ್ಬಂಧ ಹೇರಿದರೂ, ಅದನ್ನು ಲೆಕ್ಕಿಸದ ಲೇಖಕರು ತಮ್ಮ ಮನೆಯಲ್ಲೇ ಪುಸ್ತಕ ಬಿಡುಗಡೆ ಮಾಡಿದರು.

ಸುಧಾಕರ್ ಎಸ್.ಬಿ. ಅವರು ಬರೆದಿರುವ 'ಇಮ್ರಾನ್ ಖಾನ್ ಒಂದು ಜೀವಂತ ದಂತಕಥೆ' ಪುಸ್ತಕ ಬಿಡುಗಡೆ ಕಾರ್ಯಕ್ರಮ ಕಲಾಗ್ರಾಮದಲ್ಲಿ ಗುರುವಾರ ಸಂಜೆ 5.30ಕ್ಕೆ ಆಯೋಜನೆಗೊಂಡಿತ್ತು. ಇದರ ವಿರುದ್ಧ ಹಿಂದೂ ಜನಜಾಗೃತಿ ಸಮಿತಿ ಜ್ಞಾನಭಾರತಿ ಪೊಲೀಸ್ ಠಾಣೆಗೆ ದೂರು ನೀಡಿತ್ತು.

'ಪಾಕಿಸ್ತಾನವು ಭಾರತದಲ್ಲಿನ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿದ್ದು, ಇದೇ ಕಾರಣಕ್ಕೆ ಪಾಕಿಸ್ತಾನದ ಜತೆ ಎಲ್ಲಾ ವ್ಯವಹಾರಗಳನ್ನು ಭಾರತ ನಿಲ್ಲಿಸಿದೆ. ಇಮ್ರಾನ್ ಖಾನ್ ಕಾಶ್ಮೀರದ ಭಯೋತ್ಪಾದನೆಗೆ ಸ್ವತಃ ಕುಮ್ಮಕ್ಕು ನೀಡುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಖಾನ್ ವೈಭವೀಕರಿಸುವುದು ದೇಶದ್ರೋಹ. ಪುಸ್ತಕ ಬಿಡುಗಡೆಗೆ ಅವಕಾಶ ನೀಡಬಾರದು ಮತ್ತು ಈ ಪುಸ್ತಕವನ್ನು ನಿಷೇಧಿಸಬೇಕು' ಎಂದು ಮನವಿ ಮಾಡಿತ್ತು.

ಪುಸ್ತಕವನ್ನು ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ (ಬಲದಿಂದ ಮೊದಲನೆಯವರು) ಬಿಡುಗಡೆ ಮಾಡಿದರು. ಕವಿ ವಡ್ಡಗೆರೆ ನಾಗರಾಜಯ್ಯ, ಲೇಖಕ ಸುಧಾಕರ್ ಎಸ್‌.ಬಿ., ಸಾಹಿತಿ ಲೀಲಾದೇವಿ ಆರ್‌.ಪ್ರಸಾದ್ ಇದ್ದರು —ಪ್ರಜಾವಾಣಿ ಚಿತ್ರ

ಈ ಬೆನ್ನಲ್ಲೇ, 'ಇಂದಿನ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ' ಎಂಬ ಫಲಕವನ್ನೂ ಕಲಾ ಗ್ರಾಮದ ಅಧಿಕಾರಿಗಳು ಗೇಟ್ ಬಳಿ ಅಂಟಿಸಿದ್ದರು.

ಅದಾದ ಬಳಿಕ, ಲೇಖಕರು ತಮ್ಮ ಮನೆಯಲ್ಲೇ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್. ಎನ್.ನಾಗಮೋಹನದಾಸ್ ಪುಸ್ತಕ ಬಿಡುಗಡೆ ಮಾಡಿದರು. ನಂತರ ಮಾತನಾಡಿದ ಅವರು, 'ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರತಿಯೊಬ್ಬರ ಮೂಲಭೂತ ಹಕ್ಕು. ಅದನ್ನು ಅರ್ಥ ಮಾಡಿಕೊಳ್ಳದೆ ಕಾರ್ಯಕ್ರಮಕ್ಕೆ ಕೆಲ ಮೂರ್ಖರು ಅಡ್ಡಿಪಡಿಸಿದ್ದಾರೆ' ಎಂದರು.

'ಕ್ರಿಕೆಟ್ ಆಟಗಾರ ಇಮ್ರಾನ್ ಅವರನ್ನು ಮೆಚ್ಚುತ್ತೇನೆ. ಅವರ ರಾಜಕೀಯ ನಡೆಗಳ ಬಗ್ಗೆ ಭಿನ್ನಾಭಿಪ್ರಾಯ ಇದೆ. ಭಯೋತ್ಪಾದನೆಯನ್ನು ಎಂದಿಗೂ ಒಪ್ಪುವುದಿಲ್ಲ' ಎಂದರು.

'ಅಭಿವ್ಯಕ್ತಿ ಸ್ವಾತಂತ್ರ್ಯ ಮೂಲಭೂತ ಹಕ್ಕಾಗಿರುವುದರಿಂದ ಅದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ಅದಕ್ಕೆ ಧಕ್ಕೆಯಾದಾಗ ನಮ್ಮ ಧ್ವನಿ ಗಟ್ಟಿಯಾಗಬೇಕು' ಎಂದು ಹೇಳಿದರು. ಸಾಹಿತಿ ಲೀಲಾದೇವಿ ಆರ್.ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಕವಿ ವಡ್ಡಗೆರೆ ನಾಗರಾಜಯ್ಯ ಪುಸ್ತಕ ಪರಿಚಯಿಸಿದರು.

'ವಿಡಿಯೊ' ಬಹಿರಂಗ: ಮಹಿಳೆಗಾಗಿ ಹುಡುಕಾಟ

ರಾಮನಗರ: ಮಾಗಡಿಯ ಕಂಚುಗಲ್ ಬಂಡೆ ಮಠದ ಬಸವಲಿಂಗ ಸ್ವಾಮೀಜಿಯ ವಿಡಿಯೊ ಚಾಟ್ ಜಾಲತಾಣಗಳಲ್ಲಿ ಬಹಿರಂಗ ಆಗಿದ್ದು, ಶ್ರೀಗಳ ಜೊತೆ ಮಾತನಾಡಿರುವ ಮಹಿಳೆಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಆರೇಳು ತಿಂಗಳ ಹಿಂದೆ ಭಕ್ತೆಯ ಸೋಗಿನಲ್ಲಿ ಮಹಿಳೆ ಸ್ವಾಮೀಜಿಗೆ ಪರಿಚಯಿಸಿಕೊಂಡಿದ್ದರು. ನಂತರ ಸಲುಗೆ ಬೆಳೆಸಿಕೊಂಡು ಮೊಬೈಲ್ ಸಂಖ್ಯೆ ಪಡೆದಿದ್ದರು. ನಂತರದಲ್ಲಿ ಇಬ್ಬರ ನಡುವೆ ವಿಡಿಯೊ ಕರೆಗಳ ಮೂಲಕ ಸಂವಾದ ಹಾಗೂ ಸಲುಗೆ ಬೆಳೆದಿತ್ತು ಎನ್ನಲಾಗಿದೆ.

ಮಹಿಳೆಯೇ ಶ್ರೀಗಳ ಸಂಪರ್ಕ ಬೆಳೆಸಿ, ನಂತರ ಅದನ್ನೇ ಮುಂದಿಟ್ಟುಕೊಂಡು ಹಣಕ್ಕಾಗಿ ಒತ್ತಾಯಿಸಿರಬಹುದು. ಇಲ್ಲವೇ, ಅನ್ಯರು ಮಹಿಳೆಯನ್ನು ಬಳಸಿಕೊಂಡು ಶ್ರೀಗಳನ್ನು ಹನಿಟ್ರ್ಯಾಪ್ ಮಾಡಿರಬಹುದು ಎಂಬ ಆಯಾಮದಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಶ್ರೀಗಳ ಆಪ್ತ ಸಹಾಯಕ, ವಾಹನ ಚಾಲಕ ಸೇರಿದಂತೆ 20ಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ವಿಚಾರಣೆಗೊಳಪಡಿಸಿದ್ದಾರೆ.

ಶ್ರೀಗಳು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಮೂರು ಡೆತ್‌ನೋಟ್ ಬರೆದಿದ್ದರು. ಮೊದಲನೇ ನೋಟ್ ಅಪೂರ್ಣವಾಗಿದ್ದು, ಅದು ಸರಿಯಿಲ್ಲವೆಂದು ಕಿಟಕಿಯಿಂದ ಆಚೆಗೆ ಎಸೆದಿದ್ದರು. ಈ ನೋಟ್ ಭಕ್ತರಿಗೆ ಸಿಕ್ಕಿದ್ದು ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇನ್ನೂ 2 ಡೆತ್‌ನೋಟ್ ಇದ್ದು, ಒಟ್ಟು 6 ಪುಟಗಳಿವೆ.

> **ಸ್ವಾಮೀಜಿ ಬರೆದ 2 ಡೆತ್ ನೋಟ್‌ಗಳು ಪೊಲೀಸರಿಗೆ ಸಿಕ್ಕಿವೆ. ಪ್ರಕರಣ ಸಂಬಂಧ 20ಕ್ಕೂ ಹೆಚ್ಚು ಜನರನ್ನು ವಿಚಾರಣೆ ನಡೆಸಿದ್ದು, ಯಾರನ್ನೂ ವಶಕ್ಕೆ ಪಡೆದಿಲ್ಲ. ವಿಡಿಯೊ ಬಗ್ಗೆಯೂ ಪರಿಶೀಲಿಸುತ್ತಿದ್ದೇವೆ**
> **ಸಂತೋಷ್ ಬಾಬು,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ರಾಮನಗರ

ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆ ನಿರ್ಧಾರದ ಹಿಂದೆ ಮತ್ತೊಬ್ಬ ಸ್ವಾಮೀಜಿಯ ಕುಮ್ಮಕ್ಕು ಇರುವುದಾಗಿ ಸುದ್ದಿ ಹಬ್ಬಿದೆ. ಹನಿಟ್ರ್ಯಾಪ್ ಮಾಡಿಸಲು ಅದಕ್ಕೆ ರಾಜಕಾರಣಿಯೊಬ್ಬರ ಸಹಕಾರವೂ ಇತ್ತು. ನಂತರದಲ್ಲಿ ಸಂಧಾನ ನಡೆದು ಪೀಠತ್ಯಾಗಕ್ಕೆ ಒತ್ತಾಯಿಸಲಾಗಿತ್ತು ಎಂಬ ಸುದ್ದಿಯೂ ಹರಿದಾಡುತ್ತಿದೆ.

ಈ ಮಧ್ಯೆ, ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಬೇಕು ಎಂದು ಮಠದ ಭಕ್ತರು ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)				
ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆ ಆರ್ ಎಸ್*	124.80	124.80	6,423	6,164
ಹಾರಂಗಿ	2,859	2,858.23	540	1,291
ಕಬಿನಿ	2,284	2,283	990	2,500
ಹೇಮಾವತಿ	2,922	2,921.50	1,774	2,492
ಲಿಂಗನಮಕ್ಕಿ	1,819	1,813	3,180	6,499
ಸೂಪಾ (ಮೀ)	564	553.87	964.12	2,233
ಮಾಣಿ	595	589	50	761
ತುಂಗಭದ್ರಾ	1,633	1632.96	13,017	12,673
ಮಲಪ್ರಭಾ	2079.50	2,079.50	394	394
ಘಟಪ್ರಭಾ	2,175	2,175	195	195
ಭದ್ರಾ	186	185	1,601	2,203
ಆಲಮಟ್ಟಿ (ಮೀ)	519.60	519.60	15,451	15,451
ನಾರಾಯಣಪುರ (ಮೀ)	492.25	492.20	12,000	12,000

* ನೆಲಮಟ್ಟದಿಂದ

ಬಿಜೆಪಿ ಮುಖಂಡ ನಾಗಣ್ಣಗೌಡ ನೇಮಕಕ್ಕೆ ಆಕ್ಷೇಪ

ಪಟ್ಟಿ ಹೊರಗಿಟ್ಟು ಮಕ್ಕಳ ಆಯೋಗಕ್ಕೆ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರನ್ನಾಗಿ ಮಂಡ್ಯದ ಬಿಜೆಪಿ ಮುಖಂಡ ಕೆ. ನಾಗಣ್ಣಗೌಡ ಅವರನ್ನು ಸರ್ಕಾರ ನೇಮಿಸಿದ ಬೆನ್ನಲ್ಲೆ, ಅವರ ಆಯ್ಕೆಗೆ ಅಪಸ್ವರ ಎದ್ದಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಶಿಫಾರಸು ಮಾಡಿದ್ದ ಪಟ್ಟಿಯಲ್ಲಿ ನಾಗಣ್ಣಗೌಡ ಹೆಸರೇ ಇಲ್ಲ!

ಆಯೋಗದ ಅಧ್ಯಕ್ಷರಾಗಿದ್ದ ಡಾ. ಅಂತೋಣಿ ಸೆಬಾಸ್ಟಿಯನ್ ಅವಧಿ 2021ರ ಡಿ. 4ಕ್ಕೆ ಕೊನೆಯಾಗಿತ್ತು. ಆ ಬಳಿಕ, ಆಯೋಗದ 6 ಸದಸ್ಯರ ಪೈಕಿ ಒಬ್ಬರಾಗಿದ್ದ ಜಯಶ್ರೀ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ಅಧ್ಯಕ್ಷರ ನೇಮಕಾತಿಗೆ ಇಲಾಖೆ ಫೆ. 1ರಂದು ಅಧಿಸೂಚನೆ ಹೊರಡಿಸಿತ್ತು. ಅರ್ಜಿ ಸಲ್ಲಿಸಲು ಮಾರ್ಚ್ 3 ಕೊನೆಯ ದಿನವಾಗಿತ್ತು.

ಮಕ್ಕಳ ಹಕ್ಕುಗಳು, ರಕ್ಷಣೆ ಮತ್ತು ಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸುವ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷ ಅನುಭವ ಹೊಂದಿರುವವರು ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಅರ್ಜಿ ಸಲ್ಲಿಸಿದವರ ಪೈಕಿ, ರಾಯಚೂರಿನವರಾದ ವೀಣಾ ಪಲ್ಲಕ್ಕಿ, ಜಯಶ್ರೀ, ಶಿವಮೊಗ್ಗದ ಡಿ. ಶಂಕರಪ್ಪ, ಬೆಂಗಳೂರಿನವರಾದ ಮರಿಸ್ವಾಮಿ, ಬಿಜು ಪಿ. ಥಾಮಸ್, ಮಧು, ವಾಸುದೇವ ಶರ್ಮಾ, ವಿ.ಪಿ. ನಿರಂಜನಾರಾಧ್ಯ, ಧಾರವಾಡದ ಅಶೋಕ ಜಿ. ಯರಗಟ್ಟಿ, ಬೆಳಗಾವಿಯ ಭಾರತಿ ಎಂಬ 10 ಜನರ ಹೆಸರನ್ನು ಇಲಾಖೆ ಶಿಫಾರಸು ಮಾಡಿತ್ತು. ಆದರೆ, ಈ ಪಟ್ಟಿಯಲ್ಲಿ ನಾಗಣ್ಣಗೌಡ ಅವರ ಹೆಸರು ಇಲ್ಲ.

'ಮಕ್ಕಳ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ಮಾಡಿದವರು ಮಾತ್ರ ಆಯ್ಕೆಯಾಗಲು ಅರ್ಹರು ಎಂದು ಮಕ್ಕಳ ಹಕ್ಕುಗಳ ಕಾಯ್ದೆ ಹೇಳುತ್ತದೆ. ಯಾವುದೇ ರಾಜಕೀಯ ಪಕ್ಷದ ಜೊತೆ ಸಂಬಂಧ ಇರಬಾರದು ಎಂಬುದೂ ನಿಯಮದಲ್ಲಿದೆ. ಇಲಾಖೆಯ ಸಚಿವರ ನೇತೃತ್ವದ ಆಯ್ಕೆ ಸಮಿತಿ ಅಧ್ಯಕ್ಷರನ್ನು ನೇಮಕ ಮಾಡುತ್ತದೆ. ಅರ್ಜಿ ಸಲ್ಲಿಸಿದವರ ಅರ್ಹತೆ ಪರಿಶೀಲಿಸಿ ಇಲಾಖೆಯು ಶಿಫಾರಸು ಮಾಡಿರುತ್ತದೆ. ಹಾಗಿದ್ದರೂ, ಪಟ್ಟಿಯಲ್ಲಿ ಇಲ್ಲದ ವ್ಯಕ್ತಿಯೊಬ್ಬರನ್ನು ಸರ್ಕಾರ ಆಯ್ಕೆ ಮಾಡಿರುವುದು ನಿಯಮಬಾಹಿರ' ಎಂದು ಈ ಕ್ಷೇತ್ರದಲ್ಲಿ ಕೆಲಸ ಮಾಡಿದವರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

'ಅಧ್ಯಕ್ಷ ಸ್ಥಾನ ಸಾಂವಿಧಾನಿಕ ಹುದ್ದೆ ಆಗಿರುವುದರಿಂದ ಈ ಹುದ್ದೆಗೆ ನಾಮನಿರ್ದೇಶನ ಅಥವಾ ನೇರ ನೇಮಕಾತಿಗೆ ಅವಕಾಶವಿಲ್ಲ. ಅರ್ಜಿ ಆಹ್ವಾನಿಸಿ, ಆಯ್ಕೆ ಪ್ರಕ್ರಿಯೆ ನಡೆಸಬೇಕು. ಈ ಹುದ್ದೆಗೆ 50ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆ ಆಗಿದ್ದವು' ಎಂದೂ ಹೇಳಿದರು.

ಬೆಳಗಾವಿ ಜಿಲ್ಲೆ ಮುದೇನೂರ ಗ್ರಾಮದಲ್ಲಿ 186 ಮಂದಿ ಅಸ್ವಸ್ಥ

ಕಲುಷಿತ ನೀರು ಕುಡಿದು ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ರಾಮದುರ್ಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮುದೇನೂರ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಇಬ್ಬರು ಮೃತಪಟ್ಟಿದ್ದಾರೆ. 12 ಬಾಲಕರು, 8 ಬಾಲಕಿಯರು ಸೇರಿ 186 ಮಂದಿ ಅಸ್ವಸ್ಥರಾಗಿದ್ದಾರೆ.

ಇವರಲ್ಲಿ ಆರೋಗ್ಯ ಸ್ಥಿತಿ ಗಂಭೀರವಾಗಿರುವ 94 ಮಂದಿಯನ್ನು ಜಿಲ್ಲೆಯಲ್ಲಿ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಉಳಿದವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಕಳುಹಿಸಲಾಗಿದೆ.

ಇದೇ ಊರಿನ ಸರಸ್ವತಿ ನಿಂಗಪ್ಪ ಹಾವಳ್ಳಿ (70) ಅವರು ಅ.23ರಂದು, ಶಿವಪ್ಪ ಯಂಡಿಗೇರಿ (70) ಬುಧವಾರ ಮೃತಪಟ್ಟರು. ಆಸ್ಪತ್ರೆಗೆ ದಾಖಲಾಗಿರುವ ಹಲವರಿಗೆ ಗುರುವಾರವು ವಾಂತಿ-ಭೇದಿ ಬಾಧಿಸಿದೆ. ತೀವ್ರ ನಿತ್ರಾಣಗೊಂಡಿದ್ದ ನಾಲ್ವರನ್ನು ಹೆಚ್ಚಿನ ಚಿಕಿತ್ಸೆಗೆ ಬಾಗಲಕೋಟೆ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಹಾನಿಗೊಂಡಿರುವ ಕುಡಿಯುವ ನೀರು ಪೂರೈಕೆ ಪೈಪ್ ಚರಂಡಿ ನೀರಿನಲ್ಲೇ ಇರುವುದು

ಕುಡಿಯುವ ನೀರು ಪೂರೈಕೆ ಕೊಳವೆಯಲ್ಲಿ ಚರಂಡಿ ನೀರು ಸೇರಿಕೊಂಡಿದ್ದೇ ಸಾವಿಗೆ ಕಾರಣ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮಹೇಶ ಕೋಣಿ ಸ್ಪಷ್ಟಪಡಿಸಿದ್ದಾರೆ.

ಗ್ರಾಮದಲ್ಲಿ ಮುಂಜಾಗ್ರತೆಯಾಗಿ ಎಂಟು ವೈದ್ಯರು, 33 ಸಿಬ್ಬಂದಿಯ ತಂಡ ಬೀಡುಬಿಟ್ಟಿದ್ದು, ಮೂರು ಆಂಬುಲೆನ್ಸ್‌ಗಳನ್ನೂ ನಿಯೋಜಿಸಲಾಗಿದೆ.

5 ದಿನಗಳ ಹಿಂದೆಯೇ ಕೆಲವರಲ್ಲಿ ವಾಂತಿ-ಭೇದಿ ಕಾಣಿಸಿಕೊಂಡಿತ್ತು. ಇದೇ ಕಾರಣದಿಂದ ಸರಸ್ವತಿ ನಿಧನರಾದರು. ಆದರೆ, ಗ್ರಾಮ ಪಂಚಾಯಿತಿಯವರು ಅದನ್ನು ವಯೋಸಹಜ ಸಾವು ಎಂದು ಪರಿಗಣಿಸಿ ನಿರ್ಲಕ್ಷ್ಯಿಸಿದರು. ಅ. 25 ಹಾಗೂ 26ರಂದು ಏಕಾಏಕಿ ಕಾಯಿಲೆ ಉಲ್ಬಣವಾಗಿದೆ. ನಂತರ ಹಲವರು ಕುಟುಂಬ ಸಮೇತ ಬಂದು ಆಸ್ಪತ್ರೆ ದಾಖಲಾಗಿದ್ದಾರೆ.

₹ 10 ಲಕ್ಷ ಪರಿಹಾರ: ಮೃತ ಶಿವಪ್ಪ ಯಂಡಿಗೇರಿ (70) ಅವರ ಕುಟುಂಬಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ ₹ 10 ಲಕ್ಷ ಪರಿಹಾರ ಘೋಷಿಸಿದ್ದಾರೆ.

'ಆದರೆ, ಸರಸ್ವತಿ ಅವರ ಕುಟುಂಬಕ್ಕೆ ಪರಿಹಾರ ನೀಡುವ ಕುರಿತು ಯಾವುದೇ ಮಾತು ಹೇಳಿಲ್ಲ. ಸರಸ್ವತಿ ಕೂಡ ವಾಂತಿ-ಭೇದಿಯಿಂದಲೇ ಸತ್ತಿದ್ದು, ಪರಿಹಾರ ಒದಗಿಸಬೇಕು' ಎಂದು ಗ್ರಾಮಸ್ಥರು ಆಗ್ರಹಿಸಿದರು.

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

'ಆಗೆಲ್ಲ ಪೇಪರು ಎಂದರೆ ಪ್ರಜಾವಾಣಿ!'

ನಾನು ಚಿಕ್ಕವಳಿದ್ದಾಗ ಬೆಳಗು ಎಂದರೆ ಪೇಪರು, ಪೇಪರು ಎಂದರೆ ಪ್ರಜಾವಾಣಿ ಮತ್ತು ಪ್ರಜಾವಾಣಿ ಮಾತ್ರ! ಪ್ರಜಾವಾಣಿಯಲ್ಲದೇ ಬೇರೆ ಪೇಪರುಗಳೂ ಇವೆ ಎಂಬುದು ನಂಗೆ ತಿಳಿದಿದ್ದು (ಮತ್ತು ನೋಡಿದ್ದು!) ಬಹುಶಃ ಹೈಸ್ಕೂಲಿನ ಕೊನೆಯ ವರ್ಷಗಳಲ್ಲಿ ಇರಬಹುದು. ನನ್ನಪ್ಪ 'ಪ್ರಜಾವಾಣಿ'ಯ 70-80ರ ದಶಕದ ಎಷ್ಟೋ ಸಂಚಿಕೆಗಳನ್ನು ಸಂಗ್ರಹಿಸಿಟ್ಟಿದ್ದರು. ಒಂದರ್ಥದಲ್ಲಿ ಆ ಕಾಲಘಟ್ಟದ ಜನಸಾಮಾನ್ಯರ ಬದುಕಿನ ತುಣುಕುಗಳು ಆ ಪುಟಗಳಲ್ಲಿ ಜೀವಂತವಿದ್ದವು. ಅಪ್ಪನ 'ಪ್ರಜಾವಾಣಿ' ಪ್ರೀತಿ ನನ್ನೊಳಗೆ ಈಗ ಹೆಮ್ಮರವಾಗಿದೆ. ನನ್ನನ್ನು ಹವ್ಯಾಸಿ ಪತ್ರಕರ್ತೆಯಾಗಿಸಿ, ಬೆಳೆಸಿದ್ದೇ ಪ್ರಜಾವಾಣಿ ಎಂದು ನಾನು ಸದಾ ಕೃತಜ್ಞತೆಯಿಂದ ಸ್ಮರಿಸುತ್ತೇನೆ. 'ಪ್ರಜಾವಾಣಿ' ಮುಂದೆಯೂ ಹೀಗೆಯೇ ವಿಶ್ವಾಸಾರ್ಹ ಪತ್ರಿಕೆಯಾಗಿಯೇ ಉಳಿಯಲಿ ಎಂದು ಹಾರೈಸುವೆ.

ಸುಮಂಗಲಾ, ಕತೆಗಾರ್ತಿ

'ನಮಗೆಲ್ಲ ಒಂದು ಮಾದರಿ ಪತ್ರಿಕೆ'



ಎಪ್ಪತ್ತರ ದಶಕ ಹೊಸ,ಹೊಸ ವಿಚಾರಧಾರೆಗಳಿಗೆ ಬಾಯಿ ಕೊಡುತ್ತಿದ್ದ ಕಾಲ. ನವನಿರ್ಮಾಣ, ಬೂಸಾ ಪ್ರಕರಣ, ದಲಿತ, ಬಂಡಾಯ ಚಳವಳಿ, ತುರ್ತು ಪರಿಸ್ಥಿತಿಯ ಕಾಲಘಟ್ಟದಲ್ಲಿ ಸ್ನಾತಕೋತ್ತರ ಪದವಿ ಓದುತ್ತಿದ್ದ ಯುವಕರು ನಾವು. ಪ್ರಜಾವಾಣಿ ನಮ್ಮ ಅಂತರಂಗದಿಚ್ಛೆಗಳಿಗೆ, ತಾತ್ವಿಕ ತಾಕಲಾಟಗಳಿಗೆ 'ಥರ್ಡ್ ಅಂಪೈರ್' ಆಗಿ ಕೆಲಸ ಮಾಡಿದ್ದು, ಈಗಲೂ ವೈಚಾರಿಕವಾಗಿ ಬೆಳೆದು ನಿಂತ ನಮಗೆಲ್ಲ ಒಂದು ಮಾದರಿ ಪತ್ರಿಕೆ. ಸಮಕಾಲೀನ ಚಿಂತನೆ, ಚರ್ಚೆ, ವಾಗ್ವಾದಗಳಿಗೆ ಸದಾ ಮುಖವಾಣಿಯಾಗಿ ನಿಜವಾದ ಅರ್ಥದಲ್ಲಿ ಬೆಳೆದು ಬಂದ ಪತ್ರಿಕೆ ಪ್ರಜಾವಾಣಿ. ಇಂದಿನ ಕೆಟ್ಟ ಕಾಲಘಟ್ಟದಲ್ಲಿ ನಮ್ಮೆಲ್ಲ ನಂಬುಗೆ, ಆಶಯಗಳಿಗೆ ಉಳಿದಿರುವ (ಕೆಲವು ಸಾಹಿತ್ಯಿಕ ಪತ್ರಿಕೆಗಳನ್ನು ಬಿಟ್ಟು) ಏಕೈಕ ಪತ್ರಿಕೆ. ಪತ್ರಿಕೆ ನಮ್ಮ ನಿಜವಾದ ಒಡನಾಡಿ!

ಸತೀಶ ಕುಲಕರ್ಣಿ ಸದಸ್ಯರು, ಕನ್ನಡ ಭಾಷಾ ಸಲಹಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ (ನವದೆಹಲಿ).

ಜನವಾಣಿಗೆ ಮನ್ನಣೆ ನೀಡುವ 'ಪ್ರಜಾವಾಣಿ'

ನಾನು ಮೂವತ್ತೈದು ವರ್ಷಗಳಿಂದ 'ಪ್ರಜಾವಾಣಿ' ದಿನಪತ್ರಿಕೆಯ ಓದುಗ. ಯಾವುದೇ ಅತಿಶಯೋಕ್ತಿ, ಅತ್ಯುಕ್ತಿಗಳಿಲ್ಲದೇ ನೈಜ ವರದಿಗಳನ್ನು ಪ್ರಕಟಿಸುವ ಪತ್ರಿಕೆಯ ನಿಲುವು ನಿಷ್ಪಕ್ಷಪಾತವಾದುದು. ಯಾವುದೇ ಪಕ್ಷದ ತುತ್ತೂರಿಯಾಗದೇ ಜನವಾಣಿಗೆ ಮನ್ನಣೆ ನೀಡಿದ, ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿಹಿಡಿದ ಪತ್ರಿಕೆ 'ಪ್ರಜಾವಾಣಿ'. ಅಂಕಣ ಬರಹಗಳು ವೈಚಾರಿಕತೆ ಹಾಗೂ ವೈಜ್ಞಾನಿಕತೆಗೆ ಒತ್ತು ನೀಡುತ್ತವೆ. ನಾಡಿನ ನೆಲ, ಜಲ, ಪರಿಸರ ರಕ್ಷಣೆಗೆ ಒತ್ತುನೀಡುವ ಸಾಹಿತ್ಯ, ಸಂಗೀತ ಮತ್ತು ಕಲೆಗಳನ್ನು ಸದಾ ಪೋಷಿಸಿದ ಪತ್ರಿಕೆಗೆ ಇದೀಗ ಅಮೃತ ಸಂಭ್ರಮ. 'ಪ್ರಜಾವಾಣಿ' ಶತಮಾನೋತ್ಸವದ ಸಂಭ್ರಮವನ್ನು ಆಚರಿಸಿಕೊಳ್ಳುವಂತಾಗಲಿ ಎಂದು ಹಾರೈಸುವೆ.

ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ, ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ

'ಫ್ಯಾಕ್ಟ್ ಚೆಕ್' ಪಾತ್ರ ಮಹತ್ತರ'

'ಪ್ರಜಾವಾಣಿ'ಯನ್ನು ಇಷ್ಟ ಪಟ್ಟು ಓದುವವರಲ್ಲಿ ನಾನೂ ಒಬ್ಬಳು. ಮಾಧ್ಯಮ ಉದ್ಯಮವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಜಾತ್ಯತೀತ, ಧರ್ಮಾತೀತವಾಗಿ ಸಂವಿಧಾನದ ಮೌಲ್ಯವನ್ನು ಉಳಿಸಿಕೊಂಡಿದೆ. ಸುಳ್ಳನ್ನು ಸತ್ಯವೆಂದು ಬಿಂಬಿಸುತ್ತಿರುವ ಸಂದರ್ಭದಲ್ಲಿ ಫ್ಯಾಕ್ಟ್ ಚೆಕ್ ಬಹಳ ಮುಖ್ಯಪಾತ್ರ ನಿರ್ವಹಿಸುತ್ತಿದೆ. ವಿಶೇಷ ಲೇಖನಗಳು, ಸಂಪಾದಕೀಯ ಸರ್ಕಾರಕ್ಕೆ ಚಾಟಿ ಬೀಸುವಂತಿದೆ. 'ಪ್ರಜಾವಾಣಿ' ಪತ್ರಿಕೆಯ 75ರ ಸಂಭ್ರಮವೂ ಓದುಗರ ಸಂಭ್ರಮವೂ ಆಗಿದೆ.

ಜಬೀನಾ ಖಾನಂ, ಅಧ್ಯಕ್ಷೆ, ನೆರಳು ಬೀಡಿ ಕಾರ್ಮಿಕರ ಯೂನಿಯನ್, ದಾವಣಗೆರೆ

ಶುಕ್ರವಾರ, ಅಕ್ಟೋಬರ್ 28, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 297 | ಪುಟ 14
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಹೃದಯ ಸಂಬಂಧಿತ ಎಮರ್ಜೆನ್ಸಿ ಸೇವೆಗಾಗಿ ಸ್ಕ್ಯಾನ್ ಮಾಡಿ

ಹೊರ ರಾಜ್ಯ
ತೆಲಂಗಾಣ: ಚುನಾವಣೆಗೆ ಈಗಲೇ ಅಣಿ

ಕೇರಳದಲ್ಲಿ ಹಕ್ಕಿ ಜ್ವರ: ಕೇಂದ್ರ ತಂಡ ನಿಯೋಜನೆ 9
ಪಿಒಕೆ ಸ್ವಾಧೀನಕ್ಕೆ ಬದ್ಧ: ಸಚಿವ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,757 ▲	17,737 ▲	₹52,280 (ಬೆಂಗಳೂರು)	₹59,500 (ಬೆಂಗಳೂರು)	82.33 ▲

ಒಳ ಪುಟಗಳು

ಬಿಡುವಿನ ಬಳಿಕ ಭಾರತ ಜೋಡೊ ಯಾತ್ರೆ ಪುನರಾರಂಭ 9

'ಗಂಧದಗುಡಿ'ಯಲ್ಲಿ ಪುನೀತ ಹೆಜ್ಜೆ 2A

ಚಿನಕುರಳಿ

ಪ್ರಕಾಶ್ ಶೆಟ್ಟಿ

ತಳಿ ವಿಜ್ಞಾನಿಗಳಿಗೆ ಅನುಮತಿ ನೀಡಿದ ಕೇಂದ್ರ ಪರಿಸರ ಸಚಿವಾಲಯ

ಕುಲಾಂತರಿ ಸಾಸಿವೆಗೆ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಹಾಗೂ ಹೆಚ್ಚು ಇಳುವರಿ ನೀಡುವ ಹೈಬ್ರಿಡ್ ಕುಲಾಂತರಿ (ಡಿಎಂಎಚ್–11) ಸಾಸಿವೆ ಬೆಳೆಯಲು ಕೇಂದ್ರ ಪರಿಸರ ಸಚಿವಾಲಯ ಅನುಮತಿ ನೀಡಿದೆ. ಇದು ವಾಣಿಜ್ಯ ಬಳಕೆಯ ಮೊದಲ ಕುಲಾಂತರಿ ಆಹಾರ ಬೆಳೆಯಾಗಿದೆ. ಅಲ್ಲದೆ ಬಿ.ಟಿ ಹತ್ತಿ ನಂತರ ಪರವಾನಗಿ ಪಡೆದ ಎರಡನೇ ಬೆಳೆಯಾಗಿದೆ.

ಒಂದೆರಡು ವರ್ಷಗಳಲ್ಲಿ ಕುಲಾಂತರಿ ಸಾಸಿವೆಯನ್ನು ವಾಣಿಜ್ಯ ಬಳಕೆಗಾಗಿ ಬೆಳೆಯುವ ಅವಕಾಶ ರೈತರಿಗೆ ದೊರೆಯುವ ನಿರೀಕ್ಷೆ ಇದೆ.

ಕುಲಾಂತರಿ ಸಾಸಿವೆಯನ್ನು ದೆಹಲಿ ವಿಶ್ವವಿದ್ಯಾಲಯದ ತಳಿ ವಿಜ್ಞಾನಿಗಳ ತಂಡ ಅಭಿವೃದ್ಧಿಪಡಿಸಿದೆ. ಈ ತಂಡಕ್ಕೆ ಕುಲಾಂತರಿ ಸಾಸಿವೆಯನ್ನು ವಾಣಿಜ್ಯ ಉದ್ದೇಶಕ್ಕೆ ಬೆಳೆಯಲು ಕೇಂದ್ರ ಪರಿಸರ ಸಚಿವಾಲಯದ ವ್ಯಾಪ್ತಿಯ ಕುಲಾಂತರಿ ನಿಯಂತ್ರಕ ಜೆನೆಟಿಕ್ ಎಂಜಿನಿಯರಿಂಗ್ ಮೌಲ್ಯಮಾಪನ ಸಮಿತಿ (ಜಿಇಎಸಿ) ಅನುಮತಿ ನೀಡಿದೆ.

ಮುಖ್ಯಾಂಶಗಳು

- ಕ್ಷಿಪ್ರ ನಗರೀಕರಣ, ಹವಾಮಾನ ವೈಪರೀತ್ಯ, ಕೃಷಿ ಭೂಮಿ ಕುಗ್ಗುವಿಕೆಯಿಂದ ಕುಲಾಂತರಿ ಬೆಳೆ ಹೆಚ್ಚಿಸಲು ವಿಜ್ಞಾನಿಗಳು, ಕೃಷಿ ತಜ್ಞರ ಸಲಹೆ
- ಕುಲಾಂತರಿ ಬೆಳೆಗಳು ಆಹಾರ ಸುರಕ್ಷತೆ ಮತ್ತು ಜೀವವೈವಿಧ್ಯತೆಯಲ್ಲಿ ರಾಜಿ ಮಾಡಿಕೊಡಬಹುದು ಮತ್ತು ಆರೋಗ್ಯದ ಮೇಲೂ ಗಂಭೀರ ಪರಿಣಾಮ ಬೀರಲಿದೆ ಎಂಬುದು ವಿರೋಧಿಗಳ ಕಳವಳ

ಪರಿಸರ ಅನುಮತಿ ಸಿಕ್ಕಿರುವುದು ಒಂದು ಹೆಗ್ಗುರುತಿನ ಬೆಳವಣಿಗೆ. ಕುಲಾಂತರಿ ಸಾಸಿವೆಯ ವಾಣಿಜ್ಯ ಬಳಕೆಗೆ ಒಂದೆರಡು ವರ್ಷಗಳು ಬೇಕಾಗಲಿದೆ

ದೀಪಕ್ ಪೆಂಟಲ್, ದೆಹಲಿ ವಿಶ್ವವಿದ್ಯಾಲಯದ ತಳಿವಿಜ್ಞಾನಿ ಮತ್ತು ವಿಶ್ರಾಂತ ಕುಲಪತಿ

ಜಿಇಎಸಿಯ ನಿರ್ಧಾರದಿಂದ ಹೆಚ್ಚುತ್ತಿರುವ ಖಾದ್ಯ ತೈಲ ಆಮದಿನ ಸಮಸ್ಯೆ ಪರಿಹರಿಸಲು ದೇಶದ ಜೈವಿಕ ತಂತ್ರಜ್ಞಾನದ ಸಾಮರ್ಥ್ಯಕ್ಕೆ ಮನ್ನಣೆ ಸಿಕ್ಕಿದೆ

ಭಗೀರಥ ಚೌಧರಿ, ಎಸ್ಎಬಿಸಿ (ಲಾಭೋದ್ದೇಶವಿಲ್ಲದ ದಕ್ಷಿಣ ಏಷ್ಯಾ ಜೈವಿಕ ಕೇಂದ್ರ) ನಿರ್ದೇಶಕ

ಈ ಅನುಮತಿ ನಾಲ್ಕು ವರ್ಷಗಳವರೆಗೆ ಮಾನ್ಯವಾಗಿರುತ್ತದೆ. ಆದರೆ, ಈ ಕುಲಾಂತರಿ ಬೆಳೆಯು ಜೇನುಹುಳುಗಳು ಮತ್ತು ಇತರ ಪರಾಗಸ್ಪರ್ಶ ಕೀಟಗಳ ಮೇಲೆ ದುಷ್ಪರಿಣಾಮ ಬೀರಬಹುದು ಎಂಬ ಆತಂಕವನ್ನು ಪರಿಸರವಾದಿಗಳು ವ್ಯಕ್ತಪಡಿಸಿದ್ದಾರೆ. ಹಾಗಾಗಿ ಸಾಧಕ-ಬಾಧಕಗಳನ್ನು ಆಧರಿಸಿ ಎರಡು ವರ್ಷಗಳ ನಂತರ ಪರಾಮರ್ಶೆ ಮಾಡಬಹುದಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಹೈಬ್ರಿಡ್ ಡಿಎಂಎಚ್–11 ಅನ್ನು 2002ರಲ್ಲಿ ಅಭಿವೃದ್ಧಿಪಡಿಸಿದೆ. ಐಸಿಎಆರ್ ನಿಗಾದಲ್ಲಿ ನಡೆಸಿದ ತಾಕುಗಳ ಮಟ್ಟದ ಪ್ರಯೋಗಗಳಲ್ಲಿ ವರುಣಾ ತಳಿಗಿಂತ ಶೇ 28ರಷ್ಟು ಮತ್ತು ಪ್ರಾದೇಶಿಕ ತಳಿಗಳಿಗಿಂತ ಶೇ 37ರಷ್ಟು ಹೆಚ್ಚು ಇಳುವರಿ ನೀಡಿದೆ.

ತಳಿ ವಿಜ್ಞಾನಿ ದೀಪಕ್ ಪೆಂಟಲ್ ನೇತೃತ್ವದ ತಂಡ ಕುಲಾಂತರಿ ಸಾಸಿವೆ ಬೀಜಗಳನ್ನು ಹಲವು ವರ್ಷ ಕ್ಷೇತ್ರ ಪ್ರಯೋಗಕ್ಕೆ ಒಳಪಡಿಸಿ, ಬೆಳೆ ದತ್ತಾಂಶಗಳನ್ನು ವಿಶ್ಲೇಷಿಸಿತ್ತು. 2017ರಲ್ಲಿ ವಾಣಿಜ್ಯ ಬೆಳೆಯಾಗಿ ಬೆಳೆಯಲು ಸರ್ಕಾರದ ಅನುಮತಿ ಪಡೆಯುವುದರಲ್ಲಿತ್ತು. ಆದರೆ, ಕೃಷಿಯಲ್ಲಿ ಕುಲಾಂತರಿ ಬೆಳೆ ತಂತ್ರಜ್ಞಾನ ಬಳಕೆಗೆ ಪರಿಸರ ಹೋರಾಟಗಾರರಿಂದ ವಿರೋಧ ವ್ಯಕ್ತವಾದ ಕಾರಣ ಇದು ನನೆಗುದಿಗೆ ಬಿದ್ದಿತ್ತು.

3ನೇ ಪುಟ ನೋಡಿ

ಶಾಸಕರ ಖರೀದಿ ಯತ್ನ ಆರೋಪ ● ಮೂವರು ಪೊಲೀಸ್ ವಶಕ್ಕೆ

ಬಿಆರ್‌ಎಸ್–ಬಿಜೆಪಿ ವಾಕ್ಸಮರ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಇಲ್ಲಿ ಬುಧವಾರ ರಾತ್ರಿ ನಡೆಯಿತು ಎನ್ನಲಾದ ಶಾಸಕರ ಖರೀದಿ ಆರೋಪದ ಪ್ರಕರಣವು ಆಡಳಿತಾರೂಢ ಬಿಆರ್‌ಎಸ್ (ಭಾರತೀಯ ರಾಷ್ಟ್ರ ಸಮಿತಿ) ಮತ್ತು ಬಿಜೆಪಿ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

ಕೆ. ಚಂದ್ರಶೇಖರ ರಾವ್ (ಕೆಸಿಆರ್) ನೇತೃತ್ವದ ತೆಲಂಗಾಣ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಯತ್ನಿಸಿದೆ ಎಂದು ಬಿಆರ್‌ಎಸ್ ಆರೋಪಿಸಿದೆ. ಮುನುಗೋಡು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯ ಹೆಸರು ಕೆಡಿಸುವುದಕ್ಕಾಗಿ ಬಿಆರ್‌ಎಸ್ ಈ ಕೆಟ್ಟ ನಾಟಕ ಆಡಿದೆ ಎಂದು ಬಿಜೆಪಿ ಆಪಾದಿಸಿದೆ.

ಫರೀದಾಬಾದ್, ತಿರುಪತಿಯ ಇಬ್ಬರು 'ಸ್ವಾಮೀಜಿಗಳು' ಮತ್ತು ಹೈದರಾಬಾದ್‌ನ ಉದ್ಯಮಿಯೊಬ್ಬರನ್ನು ಸೈಬರಾಬಾದ್ ಪೊಲೀಸರು ಬುಧವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ. ಭಾರಿ ಮೊತ್ತ ನೀಡುವ ಆಮಿಷವೊಡ್ಡಿ ಬಿಆರ್‌ಎಸ್‌ನ ನಾಲ್ವರು ಶಾಸಕರನ್ನು ಬಿಜೆಪಿಗೆ ಸೆಳೆಯಲು ಈ ಮೂವರು ಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ಪ್ರತಿಕೃತಿಗಳಿಗೆ ಬಿಆರ್‌ಎಸ್ ಕಾರ್ಯಕರ್ತರು ಮುನುಗೋಡುವಿನಲ್ಲಿ ಬೆಂಕಿ ಹಚ್ಚಿದ್ದಾರೆ.

ಬಿಆರ್‌ಎಸ್ ಶಾಸಕ ರೋಹಿತ್ ರೆಡ್ಡಿ ಅವರು ನೀಡಿದ ಸುಳಿವಿನ ಆಧಾರದಲ್ಲಿ ಕಾರ್ಯಾಚರಣೆ ನಡೆಸಲಾಯಿತು. ದೆಹಲಿಯ ರಾಮಚಂದ್ರ ಭಾರತಿ ಅಲಿಯಾಸ್ ಸತೀಶ್ ಶರ್ಮಾ ಮತ್ತು ಹೈದರಾಬಾದ್‌ನ ಉದ್ಯಮಿ ನಂದಕುಮಾರ್ ಅವರು ತಮ್ಮನ್ನು ಸಂಪರ್ಕಿಸಿ, ಬಿಆರ್‌ಎಸ್ ತೊರೆದರೆ ₹100 ಕೋಟಿ ನೀಡುವುದಾಗಿ ಆಮಿಷ ಒಡ್ಡಿದ್ದರು. ಜೊತೆಗೆ, ಉತ್ತಮ ಸ್ಥಾನ, ಕೇಂದ್ರ ಸರ್ಕಾರದ ಕಾಮಗಾರಿ ಗುತ್ತಿಗೆಗಳನ್ನು ಕೊಡಿಸುವುದಾಗಿಯೂ ಹೇಳಿದ್ದರು ಎಂದು ರೋಹಿತ್ ರೆಡ್ಡಿ ಪೊಲೀಸರಿಗೆ ತಿಳಿಸಿದ್ದರು.

9ನೇ ಪುಟ ನೋಡಿ

ಕ್ರಿಕೆಟ್: ಮಹಿಳೆಯರಿಗೂ ಸಮಾನ ಸಂಭಾವನೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಲ್ಲಿ ಪುರುಷರಿಗೆ ನೀಡುವಷ್ಟೇ ಸಂಭಾವನೆಯನ್ನು ಮಹಿಳಾ ಕ್ರಿಕೆಟಿಗರಿಗೂ ನೀಡುವ ಐತಿಹಾಸಿಕ ತೀರ್ಮಾನವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಗುರುವಾರ ತೆಗೆದುಕೊಂಡಿದೆ.

ಬಿಸಿಸಿಐ ಅಪೆಕ್ಸ್ ಸಮಿತಿಯ ತುರ್ತುಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಯಿತು. ಮಂಡಳಿಯ ಕೇಂದ್ರಗುತ್ತಿಗೆಯಲ್ಲಿರುವ ಆಟಗಾರ್ತಿಯರಿಗೆ ಹೊಸ ನಿಯಮ ಅನ್ವಯವಾಗಲಿದೆ. ಮಹಿಳಾ ಕ್ರಿಕೆಟಿಗರು ಇನ್ನು ಮುಂದೆ ಏಕದಿನ ಪಂದ್ಯಕ್ಕೆ ₹ 6 ಲಕ್ಷ, ಟಿ20 ಪಂದ್ಯಕ್ಕೆ ₹ 3 ಲಕ್ಷ ಹಾಗೂ ಟೆಸ್ಟ್ ಪಂದ್ಯಕ್ಕೆ ₹ 15 ಲಕ್ಷ ಶುಲ್ಕ ಪಡೆಯಲಿದ್ದಾರೆ.

'ಲಿಂಗ ಅಸಮಾನತೆಯನ್ನು ತೊಲಗಿಸುವ ನಿಟ್ಟಿನಲ್ಲಿ ಬಿಸಿಸಿಐ ಇಟ್ಟ ಮೊದಲ ಹೆಜ್ಜೆಯಿದು' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ 'ಟ್ವೀಟ್' ಮಾಡಿದ್ದಾರೆ.

10

ಭಾರತಕ್ಕೆ ಮತ್ತೊಂದು ಜಯದ ಸಂಭ್ರಮ

ಸಿಡ್ನಿ: ಸತತ ಎರಡನೇ ಅರ್ಧಶತಕ ಗಳಿಸಿದ ವಿರಾಟ್ ಕೊಹ್ಲಿ, ಅಬ್ಬರದ ಬ್ಯಾಟಿಂಗ್ ಮಾಡಿದ ಸೂರ್ಯಕುಮಾರ್ ಯಾದವ್ ಹಾಗೂ ನಾಯಕ ರೋಹಿತ್ ಶರ್ಮಾ ಅವರ ಆಟದಿಂದ ಭಾರತ ಕ್ರಿಕೆಟ್ ತಂಡವು ಗುರುವಾರ ಇಲ್ಲಿ ನಡೆದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧ ಸುಲಭ ಜಯ ಸಾಧಿಸಿತು. ಈ ಪಂದ್ಯದಲ್ಲಿ ವಿರಾಟ್ ಎರಡು ಮಹತ್ವದ ಜೊತೆಯಾಟಗಳಲ್ಲಿ ಭಾಗಿಯಾದರು.



10

ಗುಂಡಿ ಮುಚ್ಚಲು ಬಿಬಿಎಂಪಿ ವಿಫಲ: ಹೈಕೋರ್ಟ್ ಅಸಮಾಧಾನ

ಬೆಂಗಳೂರು: 'ನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ವಿಚಾರಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ಆದೇಶ ಪಾಲನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸಂಪೂರ್ಣ ವಿಫಲವಾಗಿದೆ' ಎಂದು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕೆ ಸಂಬಂಧಿಸಿದಂತೆ ಕೋರಮಂಗಲದ ವಿಜಯನ್ ಮೆನನ್ ಸೇರಿ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, ರಸ್ತೆ ಗುಂಡಿ ಮುಚ್ಚುವುದಕ್ಕಾಗಿ ಈವರೆಗೂ ಬಿಬಿಎಂಪಿ ಕೈಗೊಂಡಿರುವ ಕುರಿತಂತೆ ವಿವರವಾದ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಅರ್ಜಿದಾರರ ಪರ ವಕೀಲರು, 'ನಗರದಲ್ಲಿ ರಸ್ತೆ ಗುಂಡಿಗಳಿಂದ ಸಂಭವಿಸುತ್ತಿರುವ ಅಪಘಾತಗಳಲ್ಲಿ ಸಾವನ್ನಪ್ಪುವವರ ಸಂಖ್ಯೆ ಹೆಚ್ಚಾಗುತ್ತಿದೆ. ರಸ್ತೆ ಗುಂಡಿಗಳನ್ನು ಮುಚ್ಚುವುದಕ್ಕಾಗಿ ಬಿಬಿಎಂಪಿ ಸಮರ್ಪಕ ತಂತ್ರಜ್ಞಾನ ಬಳಕೆ ಮಾಡಿಕೊಂಡಿಲ್ಲ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ರಸ್ತೆ ಗುಂಡಿಗಳನ್ನು ಮುಚ್ಚುವ ಪ್ರಕ್ರಿಯೆಯಲ್ಲಿ ಬಿಬಿಎಂಪಿ ಸಂಪೂರ್ಣ ವಿಫಲವಾಗಿದೆ' ಎಂದು ಅಭಿಪ್ರಾಯಪಟ್ಟಿತಲ್ಲದೆ, 'ಗುಂಡಿಗಳನ್ನು ಮುಚ್ಚಲು ಕೈಗೊಂಡಿರುವ ಕ್ರಮಗಳು ಯಾವುವು?, ಎಷ್ಟು ಗುಂಡಿ ಮುಚ್ಚಲಾಗಿದೆ ಎಂಬುದಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಮಾಣಪತ್ರ ಸಲ್ಲಿಸಿ' ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಸೂಚಿಸಿ ವಿಚಾರಣೆಯನ್ನು ನವೆಂಬರ್ 2ಕ್ಕೆ ಮುಂದೂಡಿದೆ.

ಬಾಣಸವಾಡಿ ಕೆರೆ ಒತ್ತುವರಿ ತೆರವು ಆರಂಭ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಬಾಣಸವಾಡಿ ಕೆರೆಯಲ್ಲಿ ಮತ್ತೆ ಒತ್ತುವರಿಯಾದ ಪ್ರದೇಶವನ್ನು ತೆರವು ಮಾಡುವ ಕಾರ್ಯಾಚರಣೆಯನ್ನು ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಕಚೇರಿ ಸಿಬ್ಬಂದಿ ಗುರುವಾರ ಆರಂಭಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ 'ಬಾಣಸವಾಡಿ ಕೆರೆ: ತೆರವಾದ ಸ್ಥಳದಲ್ಲೇ ಮತ್ತೆ ಒತ್ತುವರಿ' ಶೀರ್ಷಿಕೆಯಡಿ ಅ.17ರಂದು ವಿಶೇಷ ವರದಿ ಪ್ರಕಟವಾಗಿತ್ತು. ಸರ್ವಜ್ಞನಗರದ ಶಾಸಕ ಕೆ.ಜೆ. ಜಾರ್ಜ್ ಅ.19ರಂದು ಸಭೆ ನಡೆಸಿ ಎಲ್ಲ ರೀತಿಯ ಒತ್ತುವರಿಯನ್ನು ತೆರವು ಮಾಡಬೇಕು ಎಂದು ನಗರ ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಅವರಿಗೆ ಸೂಚಿಸಿದ್ದರು.

ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಅವರ ಆದೇಶದಂತೆ ಬಾಣಸವಾಡಿ ಕೆರೆ ಅಂಗಳದ ತೆರವು ಕಾರ್ಯಾಚರಣೆಯನ್ನು ಸಿಬ್ಬಂದಿ ಆರಂಭಿಸಿದ್ದಾರೆ. ಮೂರು ದಿನ ತೆರವು ಕಾರ್ಯಾಚರಣೆ ನಡೆಯಲಿದೆ.

ಗುರುವಾರ ಒತ್ತುವರಿ ತೆರವು ಕಾರ್ಯಾಚರಣೆ ಸಂದರ್ಭದಲ್ಲಿ ತಹಶೀಲ್ದಾರ್, ಸಿಬ್ಬಂದಿಯೊಂದಿಗೆ ಒತ್ತುವರಿದಾರರು ವಾಗ್ವಾದ ಮಾಡಿದರು. ಕೆಲವರು ಸಚಿವರು, ಇತರೆ ಶಾಸಕರಿಂದ ಕರೆ ಮಾಡಿಸಿ ಒತ್ತಡ ಹಾಕಲು ಪ್ರಯತ್ನಿಸಿದರು.

'ಪೂರ್ವ ತಾಲ್ಲೂಕು ಬಾಣಸವಾಡಿ ಸರ್ವೆ ನಂ. 211ರಲ್ಲಿ 42 ಎಕರೆ 38 ಗುಂಟೆ ವಿಸ್ತೀರ್ಣದ ಕೆರೆಯಲ್ಲಿ 14 ಎಕರೆ 27 ಗುಂಟೆ ಪ್ರದೇಶದಲ್ಲಿ ಬಿಡಿಎ ಬಡಾವಣೆ ನಿರ್ಮಿಸಿದೆ. ಖಾಸಗಿ ಒತ್ತುವರಿಯನ್ನು ತೆರವು ಮಾಡಲು 2015ರಲ್ಲಿ ಅಂದಿನ ತಹಶೀಲ್ದಾರ್ ಹರೀಶ್ ಎಲ್ಲ ರೀತಿಯ ನೋಟಿಸ್ ನೀಡಿ, ಆದೇಶ ಹೊರಡಿಸಿದ್ದರು. ಅದರಂತೆ ಒತ್ತುವರಿ ತೆರವು ಮಾಡಲಾಗಿತ್ತು. ಲೋಕಾಯುಕ್ತದಿಂದಲೂ ತೆರವಿಗೆ ಆದೇಶವಿತ್ತು. ಆದರೆ ಮತ್ತೆ ಈ ಪ್ರದೇಶದಲ್ಲಿ ಒತ್ತುವರಿಯಾಗಿದೆ. ವಾಣಿಜ್ಯ ಮಳಿಗೆ, ವಾಸದ ಮನೆಗಳನ್ನೂ ನಿರ್ಮಿಸಿಕೊಳ್ಳಲಾಗಿದೆ. ಈ ಎಲ್ಲ ಅನಧಿಕೃತ ಒತ್ತುವರಿಯನ್ನು ತೆರವುಗೊಳಿಸಲಾಗುತ್ತದೆ' ಎಂದು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಅಜಿತ್‌ಕುಮಾರ್ ಆದೇಶ ಹೊರಡಿಸಿದ್ದಾರೆ. ಲೋಕಾಯುಕ್ತ, ಬಿಡಿಎ, ತಹಶೀಲ್ದಾರ್ ನ್ಯಾಯಾಲಯದ ಆದೇಶ ಹಾಗೂ ಸರ್ವಜ್ಞನಗರ ಶಾಸಕರ ಸಭೆಯ ನಡಾವಳಿಯನ್ನು ಈ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

3ನೇ ಪುಟ ನೋಡಿ

ಸ್ವಾತಂತ್ರ್ಯದ ಅಮೃತ ಮಹೋತ್ಸವ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೬೭ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ
ಕೋಟಿ ಕಂಠ ಗಾಯನ
ದಿನಾಂಕ: ಅಕ್ಟೋಬರ್ ೨೮, ಶುಕ್ರವಾರ
ಸಮಯ: ಬೆಳಿಗ್ಗೆ ೧೧:೦೦ ಗಂಟೆಗೆ
ಸ್ಥಳ: ಕಂಠೀರವ ಕ್ರೀಡಾಂಗಣ, ಬೆಂಗಳೂರು.

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ವಿ. ಸುನಿಲ್ ಕುಮಾರ್ ಅವರು ಇಲಾಖೆಯ ಸಮಾರಂಭದಲ್ಲಿ ಭಾಗವಹಿಸಿರುವುದು

ಮಾತಾಡ್ ಮಾತಾಡ್ ಕನ್ನಡ

ಘನ ಉಪಸ್ಥಿತಿ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಉಪಸ್ಥಿತಿ
ಶ್ರೀ ವಿ. ಸುನಿಲ್ ಕುಮಾರ್
ಮಾನ್ಯ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಒಂದು ಕೋಟಿಗೂ ಹೆಚ್ಚು ಜನ ಏಕಕಂಠದಲ್ಲಿ ಆಯ್ದ ಆರು ಕನ್ನಡ ಗೀತೆಗಳನ್ನು ಹಾಡುವುದರ ಮೂಲಕ ಐತಿಹಾಸಿಕ ದಾಖಲೆ ಮಾಡೋಣ ಬನ್ನಿ. ಕೋಟಿ ಕಂಠಗಳ ಗಾಯನದ ಇತಿಹಾಸದ ನಿರ್ಮಾಣದಲ್ಲಿ ನೀವೆಲ್ಲ ಭಾಗಿಯಾಗಿ.
ನಾಡಿನೆಲ್ಲೆಡೆ ೧೦ ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಗಡಿನಾಡುಗಳಲ್ಲಿ, ಹೊರದೇಶಗಳಲ್ಲಿ, ಹೊರರಾಜ್ಯಗಳಲ್ಲಿ, ರಾಜ್ಯದ ಮೂಲೆ ಮೂಲೆಯಲ್ಲಿ ಮತ್ತು ಗ್ರಾಮ ಗ್ರಾಮಗಳಲ್ಲಿ ಒಂದು ಕೋಟಿಗೂ ಹೆಚ್ಚು ಕಂಠಗಳಲ್ಲಿ ಕನ್ನಡ ಗಾಯನ ಮೊಳಗಲಿದೆ.
ವಿಧಾನಸೌಧ ಸೇರಿದಂತೆ ರಾಜ್ಯದ ಸಾರ್ವಜನಿಕ ಸ್ಥಳಗಳಲ್ಲಿ ಸಮೂಹ ಗಾನ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಐವತ್ತು ಸಾವಿರ ಜನರಿಂದ ಕನ್ನಡ ಗೀತೆಗಳ ಗಾಯನದಲ್ಲಿ ರಾಜ್ಯದ ಮುಖ್ಯ ಮಂತ್ರಿಗಳು, ಸಚಿವರು, ಹಿರಿಯ ಅಧಿಕಾರಿಗಳು, ಚಲನಚಿತ್ರ ತಾರೆಯರು, ಪ್ರಸಿದ್ಧ ಗಾಯಕರು, ಸಾಂಸ್ಕೃತಿಕ ಲೋಕದ ದಿಗ್ಗಜರು ದನಿಗೂಡಿಸಲಿದ್ದಾರೆ.
ಕೋಟಿ ಕಂಠಗಳ ಗಾಯನದ ಸಂಭ್ರಮಾಚರಣೆಯಲ್ಲಿ ನಿಮ್ಮ ಕಂಠವೂ ಸೇರಲಿ.

ವಿಶೇಷ ಸೂಚನೆ:
ಅಭಿನಂದನಾ ಪತ್ರ ಬಯಸುವವರು, kkg.karnataka.gov.in ಇಲ್ಲಿ ತಾವು ಹಾಡಿದ ವಿಡಿಯೋವನ್ನು ನಿಮ್ಮ ಸಾಮಾಜಿಕ ಜಾಲತಾಣದಲ್ಲಿ ಅಳವಡಿಸಿ, ಅದರ ಕೊಂಡಿಯನ್ನು (ಲಿಂಕನ್ನು) ನಮೂದಿಸುವುದು.
ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ತಮ್ಮ ಕಾರ್ಯಕ್ರಮದ ವಿಶಿಷ್ಟತೆಯನ್ನು ಒಳಗೊಂಡ ವಿಡಿಯೋಗಳನ್ನು ಮತ್ತು ಫೋಟೋಗಳನ್ನು ನೀಡಬಯಸುವವರು, ಇಲ್ಲಿ ನೀಡಿರುವ ಮೊಬೈಲ್ ಸಂಖ್ಯೆಗಳಿಗೆ: 80222 13530 / 74119 11714 ವಾಟ್ಸಪ್ ಕಳುಹಿಸುವುದು.

ಬನ್ನಿ...
ಈ ಅಮೃತ ಘಳಿಗೆಯಲ್ಲಿ ಭಾಗಿಯಾಗೋಣ...
ಈ ಅಪರೂಪದ ಕ್ಷಣಗಳನ್ನು ನಮ್ಮದಾಗಿಸಿಕೊಳ್ಳೋಣ...
ಈ ಐತಿಹಾಸಿಕ ದಾಖಲೆಯ ಭಾಗವಾಗೋಣ...

ಗಾಯನದ ಹಾಡುಗಳ ಟ್ರ್ಯಾಕ್:
https://www.youtube.com/playlist?list=PLBCy399y7VQooCmZjzZQfJUC7L99Jlo2N

www.kanaja.karnataka.gov.in
www.kannadasiri.karnataka.gov.in
Kannada_Culture_Department
KannadaandCultureDepartment
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
KannadaCulture1

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಷನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು – 560022
ದೂ: +91 80 68951000 ಫ್ಯಾಕ್ಸ್: +91 80 68951001 ಇ–ಮೇಲ್: info@gokaldasexports.com ವೆಬ್‌ಸೈಟ್: www.gokaldasexports.com

ಸೆಪ್ಟೆಂಬರ್ 30, 2022ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ಅರ್ಧವಾರ್ಷಿಕ ಪ್ರತ್ಯೇಕ ಹಾಗೂ ಕ್ರೋಢೀಕೃತ ಐಎನ್‌ಡಿ ಎಎಸ್ ಅಪರಿಶೋಧಿತ ಆರ್ಥಿಕ ಫಲಿತಾಂಶಗಳು

(ಸೆಬಿ (ಎಲ್‌ಒಡಿಆರ್) ನಿಯಮಾವಳಿಗಳು, 2015ರ ನಿಯಮ 47(1) (ಬಿ))

(ರೂ. ಲಕ್ಷಗಳಲ್ಲಿ, ಪ್ರತಿ ಷೇರಿನ ಗಳಿಕೆ ಹೊರತುಪಡಿಸಿ)

ಕ್ರ. ಸಂ.	ವಿವರಗಳು	ಪ್ರತ್ಯೇಕ						ಕ್ರೋಢೀಕೃತ					
		ಅಂತ್ಯಗೊಂಡ ತ್ರೈಮಾಸಿಕ			ಅಂತ್ಯಗೊಂಡ ಅರ್ಧವರ್ಷ		ವರ್ಷಾಂತ್ಯ	ಅಂತ್ಯಗೊಂಡ ತ್ರೈಮಾಸಿಕ			ಅಂತ್ಯಗೊಂಡ ಅರ್ಧವರ್ಷ		ವರ್ಷಾಂತ್ಯ
		ಸೆಪ್ಟೆಂಬರ್ 30, 2022	ಜೂನ್ 30, 2022	ಸೆಪ್ಟೆಂಬರ್ 30, 2021	ಸೆಪ್ಟೆಂಬರ್ 30, 2022	ಸೆಪ್ಟೆಂಬರ್ 30, 2021	ಮಾರ್ಚ್ 31, 2022	ಸೆಪ್ಟೆಂಬರ್ 30, 2022	ಜೂನ್ 30, 2022	ಸೆಪ್ಟೆಂಬರ್ 30, 2021	ಸೆಪ್ಟೆಂಬರ್ 30, 2022	ಸೆಪ್ಟೆಂಬರ್ 30, 2021	ಮಾರ್ಚ್ 31, 2022
		ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ
1	ಒಟ್ಟು ಆದಾಯ	57,717.09	61,314.69	44,565.89	1,19,031.78	68,850.21	1,80,003.49	57,631.95	61,269.27	44,599.73	1,18,901.22	68,898.46	1,80,100.34
2	ತೆರಿಗೆ ಮತ್ತು ಅಸಾಮಾನ್ಯ ಐಟಂಗಳ ಮುನ್ನ ನಿವ್ವಳ ಲಾಭ/(ನಷ್ಟ)	4,999.74	5,150.56	2,851.78	10,150.30	2,601.68	11,672.97	4,900.82	5,081.37	2,861.15	9,982.19	2,605.93	11,703.13
3	ತೆರಿಗೆ ಮುನ್ನ ಮತ್ತು ಅಸಾಮಾನ್ಯ ಐಟಂಗಳ ನಂತರ ನಿವ್ವಳ ಲಾಭ/(ನಷ್ಟ)	5,604.77	5,150.56	2,851.78	10,755.33	2,601.68	11,672.97	5,505.85	5,081.37	2,861.15	10,587.22	2,605.93	11,703.13
4	ತೆರಿಗೆ ಮತ್ತು ಅಸಾಮಾನ್ಯ ಐಟಂಗಳ ನಂತರ ನಿವ್ವಳ ಲಾಭ/(ನಷ್ಟ)	4,678.95	4,008.45	2,851.78	8,687.40	2,601.68	11,672.97	4,580.03	3,939.26	2,861.15	8,519.29	2,605.93	11,708.13
5	ಅವಧಿ / ವಾರ್ಷಿಕ ಒಟ್ಟು ಸಮಗ್ರ ಆದಾಯ	(2,756.92)	(3,177.80)	664.98	(5,934.72)	89.80	708.90	1,823.86	762.21	3,526.88	2,586.07	2,697.23	12,416.61
6	ಪಾವತಿಸಿದ ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ. 5 ಪ್ರತಿಯೊಂದಕ್ಕೆ, ಪೂರ್ಣ ಪಾವತಿಸಲಾಗಿದೆ)	3,028.90	3,025.35	2,170.78	3,028.90	2,170.78	2,948.85	3,028.90	3,025.35	2,170.78	3,028.90	2,170.78	2,948.85
7	ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್‌ಶೀಟ್‌ನಲ್ಲಿ ತೋರಿಸಿದಂತೆ ಇತರೆ ಈಕ್ವಿಟಿ						68,014.11						67,868.70
8	ಪ್ರತಿ ಈಕ್ವಿಟಿ ಷೇರಿನ ಗಳಿಕೆ (ಇಪಿಎಸ್)												
	ಮೂಲ	7.73	6.66	6.60	14.39	6.04	23.01	7.56	6.54	6.62	14.11	6.05	23.08
	ವಿಭಜಿತ	7.34	6.60	6.29	13.69	5.75	22.07	7.19	6.49	6.31	13.43	5.76	22.14

ಸೂಚನೆ: ಮೇಲಿನ ಸಾರಸತ್ವವು 2015ರ ಸೆಬಿಯ ನಿಯಂತ್ರಣಗಳ (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ / ಅರ್ಧವಾರ್ಷಿಕ / ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಾಂಶವಾಗಿದೆ. ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ (www.bseindia.com and www.nseindia.com) ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ (www.gokaldasexports.com) ಲಭ್ಯವಿದೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿ. ಪರವಾಗಿ
ಸಹಿ/–
ಶಿವರಾಮಕೃಷ್ಣನ್ ಗಣಪತಿ
ವ್ಯವಸ್ಥಾಪಕ ನಿರ್ದೇಶಕರು
DIN: 07954560

ಸ್ಥಳ : ಬೆಂಗಳೂರು
ದಿನಾಂಕ : ಅಕ್ಟೋಬರ್ 27, 2022

ಸ್ಮರಣೀಯ ಘಟನೆಗಳ ಛಾಯಾಚಿತ್ರ ಲೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ತಂದ ಅವಾಂತರಗಳು, ಕೋವಿಡ್ ಸಂದರ್ಭದ ಕರುಣಾಜನಕ ಕಥೆಗಳು, ಹಕ್ಕಿಗಳ ಕಲರವ... ಹೀಗೆ ನಗರದಲ್ಲಿ ನಡೆದ ಸ್ಮರಣೀಯ ಘಟನೆಗಳು ಹಾಗೂ ವೈವಿಧ್ಯಗಳನ್ನು ಛಾಯಾಚಿತ್ರಗಳಲ್ಲಿ ಸೆರೆಹಿಡಿಯಲಾಗಿದ್ದು, ಅವುಗಳ ಪ್ರದರ್ಶನಕ್ಕೆ ಕರ್ನಾಟಕ ಚಿತ್ರಕಲಾ ಪರಿಷತ್ತು ವೇದಿಕೆ ಕಲ್ಪಿಸಿದೆ.

ಫೋಟೊ ಜರ್ನಲಿಸ್ಟ್ಸ್ ಅಸೋಸಿಯೇಷನ್ ಆಫ್ ಬೆಂಗಳೂರು ಹಮ್ಮಿಕೊಂಡಿರುವ ‘ಫ್ರೋಜನ್ ಮೆಮೋರಿಸ್’ ಎಂಬ ಛಾಯಾಚಿತ್ರ ಪ್ರದರ್ಶನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ ಚಾಲನೆ ನೀಡಿ, ಶುಭ ಹಾರೈಸಿದರು. ಈ ಪ್ರದರ್ಶನ ಇದೇ 29ರ ವರೆಗೂ ನಡೆಯಲಿದೆ.

ಮೂರು ದಿನಗಳ ಪ್ರದರ್ಶನದಲ್ಲಿ 70 ಛಾಯಾಗ್ರಾಹಕರ 140 ಛಾಯಾಚಿತ್ರಗಳನ್ನು ನೋಡಲು ಲಭ್ಯ. ಇಲ್ಲಿನ ಛಾಯಾಚಿತ್ರಗಾರರು ಮೈಸೂರು ಸೇರಿ ವಿವಿಧೆಡೆ ತೆರಳಿದಾಗ, ಸೆರೆಹಿಡಿದ ಛಾಯಾಚಿತ್ರಗಳೂ ಪ್ರದರ್ಶನದಲ್ಲಿವೆ. ಕೋವಿಡ್ ಸಂದರ್ಭದಲ್ಲಿ ಕೊರೊನಾ ಯೋಧರ ಸೇವೆ ಹಾಗೂ ಕಾರ್ಮಿಕರ ವಲಸೆಯನ್ನು ಛಾಯಾಚಿತ್ರದ ಮೂಲಕ ಮತ್ತೆ ನೆನಪಿಸಲಾಗಿದೆ. ಮೋಡದಿಂದ ಆವರಿಸಿದ ಆಗಸ, ಮಳೆ ತಂದ ಅವಾಂತರಗಳೂ ಛಾಯಾಚಿತ್ರಗಳಲ್ಲಿ ಅನಾವರಣಗೊಂಡಿವೆ.

ಪ್ರದರ್ಶನದಲ್ಲಿನ ಛಾಯಾಚಿತ್ರಗಳು ಸಿಹಿ, ಕಹಿ ಘಟನೆಗಳನ್ನು ನೆನಪಿಸಲಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇಲ್ಲಿಗೆ ಭೇಟಿ ನೀಡಿದ ಛಾಯಾಚಿತ್ರಗಳೂ ಪ್ರದರ್ಶನದಲ್ಲಿವೆ. ಪ್ರತಿಭಟನೆ, ಧಾರ್ಮಿಕ ಆಚರಣೆ, ಕ್ರೀಡೆಗೆ ಸಂಬಂಧಿಸಿದ ಛಾಯಾಚಿತ್ರಗಳನ್ನೂ ಪ್ರದರ್ಶನದಲ್ಲಿ ಇರಿಸಲಾಗಿದೆ.

ಕಲಾಸಕ್ತರು ಛಾಯಾಚಿತ್ರಗಳನ್ನು ಕುತೂಹಲದಿಂದ ವೀಕ್ಷಿಸುತ್ತಿರುವುದು
– ಪ್ರಜಾವಾಣಿ ಚಿತ್ರ

ಕೋಟಿ ಕಂಠ ಗಾಯನ ಇಂದು

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಂಡಿರುವ ‘ಕೋಟಿ ಕಂಠ ಗಾಯನ’ ಕಾರ್ಯಕ್ರಮಕ್ಕೆ ದೇಶ- ವಿದೇಶಗಳಿಂದ ಉತ್ತಮ ಸ್ಪಂದನ ವ್ಯಕ್ತವಾಗಿದ್ದು, 1.15 ಕೋಟಿ ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಈ ಕಾರ್ಯಕ್ರಮಕ್ಕೆ ಇಲಾಖೆ ಪ್ರತ್ಯೇಕ ಕ್ಯೂಆರ್ ಕೋಡ್ ನಿರ್ಮಿಸಿದೆ. ಇದರಿಂದಾಗಿ 29 ರಾಜ್ಯ ಹಾಗೂ 42 ರಾಷ್ಟ್ರಗಳಿಂದ ಕನ್ನಡ ಪ್ರೇಮಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. ರಾಜ್ಯ, ರಾಷ್ಟ್ರ ಹಾಗೂ ವಿದೇಶಗಳಲ್ಲಿ ಏಕಕಾಲಕ್ಕೆ ಕನ್ನಡದ ಆರು ಗೀತೆಗಳನ್ನು ಕೋಟಿ ಕಂಠಗಳಲ್ಲಿ ಹಾಡಲಾಗುತ್ತದೆ. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಗೂ ವಿಧಾನಸೌಧದ ಮುಂಭಾಗ ಬೆಳಿಗ್ಗೆ 11.30ಕ್ಕೆ ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೆಟ್ರೊ, ವಿಮಾನ, ರೈಲು ಹಾಗೂ ಬಸ್ ನಿಲ್ದಾಣಗಳಲ್ಲಿಯೂ ಈ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಆಟೋರಿಕ್ಷಾ ನಿಲ್ದಾಣಗಳು, ಕಾರಾಗೃಹಗಳು, ಐಟಿ–ಬಿಟಿ ಸಂಸ್ಥೆಗಳು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ, ಲಾಲ್‌ಬಾಗ್ ಸೇರಿ 10 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆ ‘ಜಯ ಭಾರತ ಜನನಿಯ ತನುಜಾತೆ’, ಹುಯಿಲಗೋಳ ನಾರಾಯಣರಾವ್ ವಿರಚಿತ ‘ಉದಯವಾಗಲಿ ನಮ್ಮ ಚಲುವ ಕನ್ನಡನಾಡು’, ಚನ್ನವೀರ ಕಣವಿ ಅವರ ‘ವಿಶ್ವ ವಿನೂತನ ವಿದ್ಯಾ ಚೇತನ ಸರ್ವ ಹೃದಯ ಸಂಸ್ಕಾರಿ’, ಕುವೆಂಪು ಅವರ ‘ಬಾರಿಸು ಕನ್ನಡ ಡಿಂಡಿಮವಾ’, ಡಿ.ಎಸ್.ಕರ್ಕಿಯವರ ‘ಹಚ್ಚೇವು ಕನ್ನಡದ ದೀಪ’ ಹಾಗೂ ಹಂಸಲೇಖ ಅವರ ‘ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು’ ಗೀತೆಗಳನ್ನು ಕೋಟಿ ಕಂಠಗಳಲ್ಲಿ ಹಾಡಲಾಗುತ್ತದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ.: B/SG/P/SBC/03/VRDP/2022
ದಿನಾಂಕ: 17.10.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗದಲ್ಲಿರುವ ವರದಾಪುರ ನಿಲ್ದಾಣದಲ್ಲಿ 750ಮೀ. ಸಿಎಸ್‌ಎಲ್ ನೊಂದಿಗೆ ಹೆಚ್ಚುವರಿ ಲೂಪ್‌ಲೈನ್ (ರೋಡ್–05) ನ ಪೂರೈಕೆ.	ರೂ. 3,51,74,010.71

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.11.2022, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಯೋಜನೆ/ಬೆಂಗಳೂರು
PUB/443/AAD/PRB/SWR/2022-23
S.W.Railways SWRRLY SWRRLY

ಐಸಿಎಆರ್–ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆ
ದಕ್ಷಿಣ ವಲಯ ಕೇಂದ್ರ
(ಭಾರತೀಯ ಕೃಷಿ ಸಂಶೋಧನಾ ಮಂಡಳಿ)
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ
ಕೃಷಿ ಮತ್ತು ಕೃಷಿಕರ ಕ್ಷೇಮಾಭಿವೃದ್ಧಿ ಸಚಿವಾಲಯ,
ಆಡುಗೋಡಿ ಅಂಚೆ, ಬೆಂಗಳೂರು – 560 030.
ICAR

ಎಫ್.ನಂ.7–3/ಸಿಡಿಎನ್/ಡಿಟಿ/ಮಿಲ್ಕ್ ಪಾರ್ಲರ್/ಎನ್‌ಡಿಆರ್‌ಐ/2022–23/ ದಿನಾಂಕ: 27/10/2022

ಮಿಲ್ಕ್ ಪಾರ್ಲರ್ ಆಪರೇಶನ್ಸ್ ನಡೆಸಲು ಕಾಮಗಾರಿ ಗುತ್ತಿಗೆ ನೀಡುವುದ್ಕಕಾಗಿ ಕೊಟೇಶನ್‌ಗಳ ಆಹ್ವಾನ ಪ್ರಕಟಣೆ

ಈ ಸಂಸ್ಥೆಯ ಮಿಲ್ಕ್ ಆಪರೇಶನ್ಸ್ ನಡೆಸಲು ಕಾಮಗಾರಿ ಗುತ್ತಿಗೆ ನೀಡುವುದಕ್ಕಾಗಿ ಮೊಹರಾದ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದೆ. ವಿವರವಾದ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕೊಟೇಶನ್ ನಮೂನೆಗಳನ್ನು 19.11.2022, ಮಧ್ಯಾಹ್ನ 2.00 ಗಂಟೆಯೊಳಗೆ ಈ ಕೆಳಗೆ ಸಹಿ ಹಾಕಿರುವವರ ಕಚೇರಿಯಿಂದ ಪಡೆದುಕೊಳ್ಳಬಹುದು.

ಸಹಿ/–
ಸಹಾಯಕ ಆಡಳಿತಾಧಿಕಾರಿ
ದೂರವಾಣಿ ಸಂ. 080 22631405

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ 4ನೇ ಹಂತ, ಬೆಂಗಳೂರು – 560011.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ. 17(ಕೆಡಬ್ಲ್ಯೂ–4 ಮತ್ತು 5)/2022–23 ದಿನಾಂಕ: 27.10.2022

ಪೂರ್ವ ಅರ್ಹತೆ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಂಗಳೂರು ರವರಿಂದ ಈ ಕೆಳಕಂಡ ಯೋಜನೆಗೆ DBOT ಆಧಾರದಲ್ಲಿ, ಕೆಡಬ್ಲ್ಯೂ–4 ಮತ್ತು 5ರ ಟೆಂಡರ್ ಡಾಕ್ಯೂಮೆಂಟನ್ನು ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ 27ರನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಯ ಹೆಸರು: Providing natural treatment arrangement for untreated water in Chandapura tank by construction of bund to periphery & Lagoons, desitting of tank bed, laying of 900.00 mm Dia RCC. NP3 pipes, planting of wet lands, treating plantation and allied plants for natural treatment, Clearing enchrochment of Chandapura Tank and Muthanallur tank with Concurrance of Survey and Revenue department and Construction of diversion channel to Muthanallur tank including construction of earthen canal, desitting of tank bed, construction of Embankment using Excavated suitable Earth and Operation & Maintainance of Chandapura Tank for a period of 2 years after the successful completion of work and construction of diversion wall to Muthanallur tank in Anekal Taluk, Bangalore Urban District. (On DBOT Basis)

ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ): 2,53,04,104.00
ಇಎಂಡಿ (ರೂ.ಗಳಲ್ಲಿ): 4.00.
ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಧಿ ಮಳೆಗಾಲವೂ ಸೇರಿ: 6 ತಿಂಗಳು
ಗುತ್ತಿಗೆದಾರರ ದರ್ಜೆ: ಒಂದನೇ ದರ್ಜೆ (ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ ಅಥವಾ ಸರ್ಕಾರದ ಉದ್ಯಮದಲ್ಲಿ ನೋಂದಣಿ)

(1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **27/10/2022 16:30 ಗಂಟೆಗೆ.** (2) ಪ್ರೀ ಬಿಡ್ ಸಭೆಯ ದಿನಾಂಕ: **02/11/2022 11:30 ಗಂಟೆಗೆ,** ಸ್ಥಳ: ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಬೆಂಗಳೂರು. (3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಅಪ್ಲೋಡ್ ಮಾಡುವ ಕೊನೆಯ ದಿನಾಂಕ: **05/11/2022 16:30 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **08/11/2022 11:30 ಗಂಟೆಯವರೆಗೆ.** (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ.**

ಸದರಿ ಪ್ರಕಟಣೆಯ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **080–26632884,** ಇ–ಮೇಲ್ ವಿಳಾಸ: **eemidbng@yahoo.com** ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನ **www.eproc.karnataka.gov.in** ಅನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ಅನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ
DIPR/CP/2804/2022-23

‘ಟ್ವಿಟರ್ ಬ್ಲಾಕ್ ಕಾನೂನಿಗೆ ವಿರೋಧ’

ಬೆಂಗಳೂರು: ‘ಆಕ್ಷೇಪಾರ್ಹ ಟ್ವೀಟ್‌ಗಳನ್ನು ಬ್ಲಾಕ್ ಮಾಡಲು ಸಾಧ್ಯವೇ ವಿನಃ, ಇನ್ನೂ ಮಾಡದೇ ಇರುವ ಟ್ವೀಟ್‌ಗಳಿಗೆ ಪೂರ್ವಭಾವಿಯಾಗಿಯೇ ನಿರ್ಬಂಧ ಹೇರಿ ಬ್ಲಾಕ್ ಮಾಡುವುದು ಕಾನೂನಿಗೆ ವಿರೋಧ’ ಎಂದು ಟ್ವಿಟರ್ ಪರ ವಕೀಲರು ಹೈಕೋರ್ಟ್‌ಗೆ ತಿಳಿಸಿದರು.

‘ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆ-2000ದ ಕಲಂ 69ಎ ಗೆ ವಿರುದ್ಧವಾಗಿರುವ 1,400ಕ್ಕೂ ಹೆಚ್ಚು ಟ್ವಿಟರ್ ಖಾತೆಗಳನ್ನು ಬ್ಲಾಕ್ ಮಾಡಬೇಕು’ ಎಂಬ ನೋಟಿಸ್‌ಗಳನ್ನು ಪ್ರಶ್ನಿಸಿ ‘ಟ್ವಿಟರ್’ ಕಂಪನಿ ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಮುಂದುವರಿಸಿತು.

ವಿಚಾರಣೆ ವೇಳೆ ಟ್ವಿಟರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಅವರು, ‘ಯಾರು ಟ್ವೀಟ್ ಮಾಡಿದ್ದಾರೊ ಅವರಿಗೆ ನೋಟಿಸ್ ನೀಡಿಲ್ಲ. ಬದಲಿಗೆ ಕಂಪನಿಗೆ ನೋಟಿಸ್ ನೀಡಿರುವುದು ಸರಿಯಲ್ಲ. ಯಾವ ಕಾರಣಕ್ಕಾಗಿ ಬ್ಲಾಕ್ ಮಾಡಲಾಗುತ್ತಿದೆ ಎಂಬ ಬಗ್ಗೆಯೂ ಕಾರಣಗಳನ್ನು ತಿಳಿಸಿಲ್ಲ. ಇದು ಭವಿಷ್ಯದ ಮಾಹಿತಿಯನ್ನು ನಿರ್ಬಂಧಿಸುವುದಕ್ಕೆ ಸಮಾನವಾಗಿದೆ’ ಎಂದು ಆಕ್ಷೇಪಿಸಿದರು.

ಕೇಂದ್ರ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಂ.ಬಿ.ನರಗುಂದ ಅವರು ತಮ್ಮ ವಾದ ಮಂಡನೆಗೆ ಕಾಲಾವಕಾಶ ಕೋರಿದ ಹಿನ್ನೆಲೆಯಲ್ಲಿ ನ್ಯಾಯಪೀಠ ವಿಚಾರಣೆಯನ್ನು ನವೆಂಬರ್ 16ಕ್ಕೆ ಮುಂದೂಡಿದೆ.

‘ರಾಷ್ಟ್ರೀಯತೆ, ಸಾರ್ವಜನಿಕ ಹಿತದೃಷ್ಟಿ ಕಾಪಾಡುವ, ಗುಂಪು ಘರ್ಷಣೆ ಮತ್ತು ಲಿಂಚಿಂಗ್‌ನಂತಹ (ಗುಂಪು ಹಲ್ಲೆ) ದುಷ್ಕೃತ್ಯಗಳನ್ನು ನಿಯಂತ್ರಿಸುವ ಉದ್ದೇಶದಿಂದ ಕೆಲವು ಖಾತೆಗಳನ್ನು ನಿರ್ಬಂಧಿಸಲು ಟ್ವಿಟರ್‌ಗೆ ಆದೇಶಿಸಲಾಗಿದೆ’ ಎಂದು ಕೇಂದ್ರ ಸರ್ಕಾರ ನ್ಯಾಯಪೀಠಕ್ಕೆ ಈ ಹಿಂದಿನ ವಿಚಾರಣೆ ವೇಳೆ ಸ್ಪಷ್ಟಪಡಿಸಿತ್ತು.

8 ವಲಯಗಳಲ್ಲಿ ಸ್ವಚ್ಛತೆ ಅಭಿಯಾನ

ಬೆಂಗಳೂರು: ನಗರದಲ್ಲಿ ನ.2ರಿಂದ ಮೂರು ದಿನ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ ನಡೆಯುವ ಹಿನ್ನೆಲೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ತೀವ್ರ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ದೇಶ ಹಾಗೂ ವಿದೇಶಗಳ ವಿವಿಧ ಕಡೆಗಳಿಂದ ಹೂಡಿಕೆದಾರರು ಬರುತ್ತಿರುವ ಹಿನ್ನೆಲೆಯಲ್ಲಿ ನಗರದ ಸ್ವಚ್ಛತೆ ಹಾಗೂ ಸೌಂದರ್ಯೀಕರಣಕ್ಕೆ ಹೆಚ್ಚಿನ ಒತ್ತು ನೀಡುವಂತೆ ಆಡಳಿತಾಧಿಕಾರಿ ರಾಕೇಶ್ ಸಿಂಗ್ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಅಭಿಯಾನ ನಡೆಯಲಿದೆ.

ರಸ್ತೆಗಳ ಡಾಂಬರೀಕರಣ, ರಸ್ತೆ ಗುಂಡಿಗಳನ್ನು ಮುಚ್ಚುವುದು, ಪಾದಚಾರಿ ಮಾರ್ಗಗಳ ಅಭಿವೃದ್ಧಿ, ತ್ಯಾಜ್ಯ/ಕಟ್ಟಡ ಭಗ್ನಾವಶೇಷಗಳ ತೆರವು, ರಸ್ತೆ ಬದಿಯಿರುವ ಮರಗಳ ಕೊಂಬೆಗಳ ಕಟಾವು, ಫ್ಲೆಕ್ಸ್ ತೆರವು, ಬೀದಿ ದೀಪಗಳನ್ನು ಸರಿಡಿಸುವುದು, ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳಲ್ಲಿ ವಿಭಜಕಗಳ ಅಭಿವೃದ್ಧಿ ಹಾಗೂ ಸುಂದರ ಸಸಿಗಳನ್ನು ಅಭಿಯಾನದಲ್ಲಿ ನಡೆಲಾಗುತ್ತಿದೆ.

ಪರಿಶೀಲನೆ: ಬಿಬಿಎಂಪಿಯ 8 ವಲಯ ಆಯುಕ್ತರ ನೇತೃತ್ವದಲ್ಲಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪರಿಶೀಲನೆ ನಡೆಸಿದರು.

ಪೂರ್ವ ವಲಯದ ಹೆಬ್ಬಾಳ ರಸ್ತೆ, ಮೇಖ್ರಿ ವೃತ್ತ, ಜಯಮಹಲ್ ರಸ್ತೆ, ದಕ್ಷಿಣ ವಲಯದ ಬನಶಂಕರಿ ವೃತ್ತ, ಕನಕಪುರ ರಸ್ತೆ, ಬೊಮ್ಮನಹಳ್ಳಿ ವಲಯದ ಕನಕಪುರ ಮುಖ್ಯ ರಸ್ತೆ, ಚುಂಚನಘಟ್ಟ ಮುಖ್ಯ ರಸ್ತೆ ಹಾಗೂ ಕೋಣನಕುಂಟೆ ರಸ್ತೆಯ ವಿವಿಧ ಸ್ಥಳಗಳಿಗೆ ಅನಿರೀಕ್ಷಿತ ಭೇಟಿ ನೀಡಿ ರಸ್ತೆ ಡಾಂಬರೀಕರಣ, ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ, ಪಾದಚಾರಿ ಮಾರ್ಗ ಅಭಿವೃದ್ಧಿ ಹಾಗೂ ರಸ್ತೆ ಬದಿಯ ಚರಂಡಿಗಳ ಸ್ವಚ್ಛತೆ ಮಾಡಲು ನಿರ್ದೇಶನ ನೀಡಿದರು.

ಆಯಾ ವಲಯ ವ್ಯಾಪ್ತಿಯ ವಲಯ ಆಯುಕ್ತರು ವಲಯದ ತಂಡದ ಜೊತೆ ಪ್ರತಿನಿತ್ಯ ಬೇರೆ ಬೇರೆ ಸ್ಥಳಗಳಿಗೆ ಭೇಟಿ ನೀಡಿ ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ ಬಗೆಹರಿಸಬೇಕು. ಜೊತೆಗೆ ಬೆಸ್ಕಾಂ, ಜಲಮಂಡಳಿ ಸೇರಿ ಇನ್ನಿತರೆ ಇಲಾಖೆಗಳು ರಸ್ತೆಗಳನ್ನು ಹಗೆದಿರುವ ಕಡೆ ಪಾಲಿಕೆ ಅಧಿಕಾರಿಗಳು ಸಮನ್ವಯ ಮಾಡಿಕೊಂಡು ಕೂಡಲೆ ದುರಸ್ತಿಪಡಿಸುವ ಕೆಲಸ ಮಾಡಲು ಸೂಚನೆ ನೀಡಿದರು.

ನಗರದಲ್ಲಿ ಇಂದು

ಕೋಟಿ ಕಂಠ ಗೀತ ಗಾಯನ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 11

ಕೋಟಿ ಕಂಠ ಗೀತ ಗಾಯನ: ಆಯೋಜನೆ: ಚಂದ್ರಚೇತನ ಹಿರಿಯ ನಾಗರಿಕರ ವೇದಿಕೆ, ಸ್ಥಳ: ಗಣೇಶ ವೃತ್ತ ಚಂದ್ರ ಬಡಾವಣೆ, ಬೆಳಿಗ್ಗೆ 11

ಕೋಟಿ ಕಂಠ ಗೀತ ಗಾಯನ: ಉದ್ಘಾಟನೆ: ಮನು ಬಳಿಗಾರ್, ಅತಿಥಿಗಳು: ರಾ.ನಂ. ಚಂದ್ರಶೇಖರ, ಕುವೆಂಪು ಪ್ರಕಾಶ್, ವ.ಚ. ಚನ್ನೇಗೌಡ, ಮಾಲತೇಶ ಬಡಿಗೇರ, ಆಯೋಜನೆ: ಕುವೆಂಪು ಕಲಾನಿಕೇತನ, ಸ್ಥಳ: ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆ ಎದುರು, ಟೌನ್‌ಹಾಲ್, ಜೆ.ಸಿ. ರಸ್ತೆ, ಬೆಳಿಗ್ಗೆ 11

ಕೋಟಿ ಕಂಠ ಗೀತ ಗಾಯನ: ಉದ್ಘಾಟನೆ: ಎಸ್.ಎಂ. ಜಯಕರ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿ ಮುಂಭಾಗ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಹಾಗೂ ಕೆ. ನಾಗಪ್ಪ ಆಳ್ವ, ಕಲ್ಯಾಣಿ ಆಳ್ವ ದತ್ತಿ ನಿಧಿ ಸ್ಪರ್ಧೆಗಳ: ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಅತಿಥಿಗಳು: ಕೆ.ಬಿ. ಷಣ್ಮುಖಪ್ಪ, ಎನ್. ಚಂದ್ರಶೇಖರ್, ಆಯೋಜನೆ: ಅಖಿಲ ಕರ್ನಾಟಕ ಮಕ್ಕಳ ಕೂಟ, ಸ್ಥಳ: ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಸಂಜೆ 4

ಅಜಿತ್‌ಕುಮಾರ್ ಸ್ಮಾರಕ ನಾಟ್ಯಶ್ರೀ, ಯೋಗಶ್ರೀ ಮತ್ತು ಅಜಿತಶ್ರೀ, ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಪಿ.ಜಿ.ಆರ್ ಸಿಂಧ್ಯ, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಅತಿಥಿಗಳು: ಗುರುರಾಜ ಕರಜಗಿ, ಪ್ರಶಸ್ತಿ ಪುರಸ್ಕೃತರು: ಉಲ್ಲಾಳ ಮೋಹನ ಕುಮಾರ್, ಎಂ.ಜಿ. ವೆಂಕಟರಾಘವನ್, ಚಿಂದೋಡಿ ಶ್ರೀಕಂಠೇಶ್, ಕೆ. ರಾಘವೇಂದ್ರ ಪೈ, ಮೋಜನ್ ಅಗಾಶೆ, ಆಯೋಜನೆ: ಅಜಿತ್‌ಕುಮಾರ್ ಸ್ಮಾರಕ ಸಾಂಸ್ಕೃತಿಕ ವೇದಿಕೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಆವರಣ, ಅರಮನೆ ರಸ್ತೆ, ಸಂಜೆ 6

ಅಂಜಲಿ ದೇಸಾಯಿ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅಂಜಲಿ ದೇಸಾಯಿ, ಗಾಯನ: ಬಾಲಸುಬ್ರಹ್ಮಣ್ಯ ಶರ್ಮ, ಮೃದಂಗ: ಶ್ರೀಹರಿ, ಕೊಳಲು: ವಿವೇಕ್, ಆಯೋಜನೆ: ಉತ್ಥಾಪನ, ಸ್ಥಳ: ಸೇವಾ ಸದನ ಮಲ್ಲೇಶ್ವರ, ಸಂಜೆ 6

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

Sri Rakum High School
421/I, Sri Krishna Temple Road, Indiranagar 1st stage, Bengaluru-560038
Tel: 080 - 25215705
Email: rakumrakum@yahoo.com
Wanted
Science, Maths, English and Social science Teacher, for Primary & High School Students
Female Teacher - Rs.15000- 20000

TEACHER'S WE'RE hiring Open positions 1. Science Teacher (B.Ed) 2. Math Teacher (B.Ed) 3. Computer science teacher (MCA) 4. Nursery teacher (D.Ed) 5. Physical Education (B.Ped) Walk-in interview (10 am to 2 pm) Sri Vidyaniketan School 203/1, 1 st main, 5th cross, K N Extension, Yeshwanthpur, Bangalore- 560022. Phone: 9945201342

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

Multiple Vacancy

IMMEDIATE APPOINTMENT HRD,Administration,Accounts,Manager, Supervisor, Software,Hardware,Electronics,Mechanical,Electrical Engineers 7676760299/7676760399

Walk In Interview
Aequitas
Team Leader & Telecaller
Backend Admin & Field Executive
Fresher/ Experienced DRA
Any Degree, PUC or SSLC, Basic Computer knowledge, Languages : Kannada & English
Banking Collection
SALARY, PF, ESI & INCENTIVES
Aequitas Debt Solutions Pvt. Ltd
Wilson Garden: Near Police Station
South End Circle: Near Metro Station, Bangalore
9880882233 | 9880806810

Accounts & Finance

ACCOUONTS & ADMINISTRATION Required Female Graduate with experience & drafting knowledge with good English. Address- Sunkadakatte, Bangalore-560091. Call: 8884275786/ 9620000615

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Marketing & Sales

WANTED MARKETING EXECUTIVES for Fast Moving Consumer Products all over Karnataka. Contact: 9448041257.

WANTED EXPERIENCED BEARING SALES MARKETING from Karnataka to get Ball Bearings Orders from Govt. Railway, Cement, Sugar, Paper, Power Engg on Salary cum Commission basis. Contact Accurate Bearing Centre, Bangalore. Whatsapp: 9341211791 or Email: accuratebearing@yahoo.co.in

WANTED IMMEDIATELY TELECALLERS (Female) with Good Communication Skills For Banking Sector Near Kumaraswamy Layout Salary + Incentive Call: 9963222228

REAL ESTATE SELLING

Commerical

BTM Layout

BTM 2ND Stage 60' Main Road near Udupi Hotel, Commercial building 40x60 BDA 6,72,00,000/- -9980761200.

Jayanagar

JAYANAGAR 9TH 30x55 Commercial Rental Income building near Central`Mall 6,00,00,000/-, 30x40 Semi-Commerical 3,25,00,000/- -9980761200.

House

J P Nagar

J.P.NAGAR_2ND 40x60, 3 unit 3 BHK House near`Thirumala Temple 5,76,00,000/-, 3rd Phase near`Mini forest 45x57`BDA 5,81,00,000/- -9740292904.

Sites

Hosur Road

SALE 1575 Sqft Site at Begur. North Facing. 1km from Hosur Road Metro Station. Bank Loans: 7022645835

Intl Airport Road

BIAAPA APPROVED SITES SALE TELECOM LAYOUT PHASE-1 500 METRES FROM STONE HILL INTERNATIONAL SCHOOL 7337616557.

Jayanagar

OWNER LISTED premium 45x90 plot with house Jayanagar 4th T block for sale 9845154982

Vishweshwariah Layout

BHARATHNAGAR ATTACH 40x40 BBMP A Katha SE Corner and SMV BDA Site 7th Block 30x40 East: 9964971895

RENTAL PROPERTIES

Accommodation Available

Commercial

AVAILABLE COMMERCIAL Building 10000 sqft for Rent at Banashankari 2nd Stage, K.R.Road. Contact: 9341234288/ 9663224353.

COMMERCIALPROPERTY for Rent Factory/ Shed measuring 20,000 sqft. 10HP powersupply, 40HP generator, 2 cabin with AC along with lobby, situated at Shankanipura Village, Hoskote to Sulibele main road, NH-648 Hoskote Taluk, Bangalore Rural, Contact: 9449559786

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted & Agriculture Lands Call:7411265189

Business to Business

Shares

EARN REGULAR daily income through online trading in a disciplined way. We give ONE TO ONE, personal training from basics to advanced level in FOREX, EQUITY and F&O segments.Call 8105303232

PERSONAL

Change of Name

I, VASANTHI SINGH. K R/a, #.110/18, Poornapragna Layout, Near Kathriguppe Water Tank, BSK 3rd Stage, Bengaluru- 560085. I here by declare that in some of the documents my name is mentioned as VASANTHI SINGH. K and in some other documents K. VASANTHI BALAJI, Both the names belongs to me only. I further state to Use My Name as VASANTHI SINGH .K for all the Future correspondence Vide Affidavit Dated 21/10/2022 before Notary T. Venkategowda, Bengaluru

I, VALLIKKATT MUHAMMED THAMEEM, residing at #302, Surya Darshan Apartment 17th cross 15th main Rose Garden Road JPNagar 5th phase, Bangalore- 560078, have changed my name to VALLIKAT MOHAMMED THAMEEM, vide affidavit dated 27.10.2022 before Notary N. Kanchivaradaraju, Bangalore. Henceforth I shall be known as VALLIKAT MOHAMMED THAMEEM only.

I, ROJA C.H., residing at No. A-21, Sreeramanagari, Murugeshpalya, Old Airport Road, Bengaluru- 560017, have changed my name to ROJA NAIDU CHALAMALASETTY, vide affidavit dated 27.10.2022 before Notary K. Venkateshan, Bangalore. Henceforth I shall be known as ROJA NAIDU CHALAMALASETTY only.

I, GANGADHAR S/o. Ningaiah, Residing at No. 15, 4th Main, 5th Cross, Kaveripura, Kamakshipalya, Bangalore-560079, declaring that GANGADHAR and PATELA both are my names only but my correct name is GANGADHAR, vide affidavit dated 20.09.2022, sworn before Addl. Chief Metropolitan Magistrate, Bangalore.

I, SUNITHA GEETHAKUMARI, W/o. Richard Mathew, have changed my name to SUNITHA GEETHA vide affidavit dated 26-10-2022 sworn before Notary Rajanna S.M., Bengaluru.

I, CHANDRASHEKARA. G.S residing at Bengaluru Rural-561203 have changed my name as CHANDRASHEKAR, G.S vide affidavit dated 27/10/2022 before Notary P.C.Ramaiah, Bengaluru

MAMANI BERA W/o 14845138Y SEP Amal Bera R/a Dakshin Harkuli Purba Medinipur, WB, my name MAMANI BERA to MAMANI SAMANTA BERA, Notary KV Mani

JC669480X SUB/MAJ B. Santosh Kumar, 2ATC son's name Records SIDHRTH S instead of SIDHARTH S, Notary BM Chandrashekar, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA + PRAJAVANI BENGALURU
ON FRIDAY + SATURDAY + SUNDAY
@ 1070/-* Per Sqcm Single Column
conditions apply*
For More Details Contact:
9886213331 | 9845114560 | 9731810277 | 9901641752
080- 45557163 | 45557164
dhclassifieds@deccanherald.co.in www.dhclassifieds.com

ಇಂದಿನಿಂದ 250ಕ್ಕೂ ಅಧಿಕ ಪರದೆಗಳಲ್ಲಿ ಚಿತ್ರ ಬಿಡುಗಡೆ

‘ಗಂಧದಗುಡಿ’ಯಲ್ಲಿ ಪುನೀತ ಹೆಜ್ಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಂಧದಗುಡಿ’ ಚಿತ್ರದ ಮೂಲಕ ಕೊನೆಯ ಬಾರಿಗೆ ಬೆಳ್ಳಿ ಪರದೆಯ ಮೇಲೆ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಕಾಣಿಸಿಕೊಳ್ಳಲಿದ್ದಾರೆ. ನೆಚ್ಚಿನ ನಟನನ್ನು ಅದ್ದೂರಿಯಾಗಿ ಬರಮಾಡಿಕೊಳ್ಳಲು ಅಭಿಮಾನಿಗಳೂ ಸಜ್ಜಾಗಿದ್ದಾರೆ. ‘ಗಂಧದಗುಡಿ’ ಶುಕ್ರವಾರ (ಅ.28) ರಾಜ್ಯದಲ್ಲಿ 250ಕ್ಕೂ ಅಧಿಕ ಪರದೆಗಳಲ್ಲಿ ತೆರೆಕಂಡಿದೆ.

ಪಿಆರ್‌ಕೆ ಪ್ರೊಡಕ್ಷನ್ಸ್‌ನಡಿ ನಿರ್ಮಾಣಗೊಂಡಿರುವ ಈ ಡಾಕ್ಯೂಫಿಲ್ಮ್ ಅನ್ನು ಅಮೋಘವರ್ಷ ನಿರ್ದೇಶಿಸಿದ್ದಾರೆ. ಕರುನಾಡಿನ ವನ್ಯಲೋಕ, ಪ್ರಕೃತಿ ಸೌಂದರ್ಯವನ್ನು ಸೆರೆಹಿಡಿದಿರುವ ಈ ಚಿತ್ರದಲ್ಲಿ ‘ಪವರ್‌ಸ್ಟಾರ್’ ಎಂಬ ಪಟ್ಟವನ್ನು ಕೆಳಗಿಟ್ಟು ನೈಜವಾಗಿ ಹೆಜ್ಜೆ ಹಾಕಿದ್ದಾರೆ ಪುನೀತ್. ಭಾರತವಷ್ಟೇ ಅಲ್ಲದೆ ಅಮೆರಿಕ, ಯುಎಇ, ಸಿಂಗಪುರ ಹೀಗೆ ವಿದೇಶದ ನೂರಾರು ಪರದೆಗಳಲ್ಲೂ ಗಂಧದ ಘಮಲು ಹರಡಿದೆ. ಪುನೀತ್ ಅವರ ಅಕಾಲಿಕ ನಿಧನದ ಬಳಿಕ ತೆರೆಕಂಡಿದ್ದ ‘ಜೇಮ್ಸ್’ ಹಾಗೂ ‘ಲಕ್ಕಿಮ್ಯಾನ್’ ಸಿನಿಮಾವನ್ನು ಅಭಿಮಾನಿಗಳು ಅದ್ದೂರಿಯಾಗಿ ಬರಮಾಡಿಕೊಂಡಿದ್ದರು. ‘ಜೇಮ್ಸ್’ ಬಾಕ್ಸ್ ಆಫೀಸ್‌ನಲ್ಲಿ ನೂರು ಕೋಟಿ ಕ್ಲಬ್ ಕೂಡ ಸೇರಿತ್ತು. ಇದೇ ವಾತಾವರಣ ‘ಗಂಧದಗುಡಿ’ ಬಿಡುಗಡೆ ವೇಳೆಯೂ ಇದೆ. ಸಾಮಾಜಿಕ ಮಾಧ್ಯಮಗಳಲ್ಲೂ ‘ಗಂಧದಗುಡಿ’ ಟ್ರೆಂಡಿಂಗ್‌ನಲ್ಲಿದೆ.

ಗುರುವಾರ ರಾಜ್ಯದಾದ್ಯಂತ ನಡೆದ ಸಿನಿಮಾದ 30ಕ್ಕೂ ಅಧಿಕ ಪ್ರೀಮಿಯರ್ ಪ್ರದರ್ಶನ ಸಂಪೂರ್ಣ ಭರ್ತಿಯಾಗಿತ್ತು. ಪುಣ್ಯಸ್ಮರಣೆ ಅಂಗವಾಗಿ ಕಂಠೀರವ ಸ್ಟುಡಿಯೊ ಸುತ್ತಲೂ ಪುನೀತ್ ಅವರ 75 ಕಟೌಟ್‌ಗಳನ್ನು ಅಭಿಮಾನಿಗಳು ನಿಲ್ಲಿಸಿದ್ದಾರೆ.

ಗೀತನಮನ: ಪುನೀತ್ ಅವರ ಮೊದಲ ಪುಣ್ಯಸ್ಮರಣೆ ಅಂಗವಾಗಿ ಕಂಠೀರವ ಸ್ಟುಡಿಯೊದಲ್ಲಿ 24 ಗಂಟೆ ಸಂಗೀತ ನಮನ ಕಾರ್ಯಕ್ರಮ ನಡೆಯಲಿದೆ. ಅ.28ರಂದು ರಾತ್ರಿ 12ರಿಂದ ಅ.29ರ ರಾತ್ರಿ 12 ಗಂಟೆಯವರೆಗೂ ಈ ಕಾರ್ಯಕ್ರಮ ನಡೆಯಲಿದ್ದು, ನಟರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಅವರೂ ಇಲ್ಲಿ ಗೀತನಮನ ಸಲ್ಲಿಸಲಿದ್ದಾರೆ.

ನಗರದ ಎಂಜಿ ರಸ್ತೆಯ ಬಾರ್ಟನ್ ಸೆಂಟರ್ ಕಟ್ಟಡದಲ್ಲಿ ಗುರುವಾರ ಕಂಡುಬಂದ ಪುನೀತ್ ರಾಜ್‌ಕುಮಾರ್ ಅವರ ಸಾಕ್ಷ್ಯಚಿತ್ರ ‘ಗಂಧದಗುಡಿ’ಯ ಎಲ್‌ಇಡಿ ಪೋಸ್ಟರ್ –ಪ್ರಜಾವಾಣಿ ಚಿತ್ರ

ಆಹಾರೋತ್ಸವದ ಮೂಲಕ ಶ್ರದ್ಧಾಂಜಲಿ

• ಸ್ನೇಹಾ ರಮೇಶ್

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅಗಲಿ ಒಂದು ವರ್ಷವಾದ ಸಂದರ್ಭದಲ್ಲಿ ಅವರ ಸ್ಮರಣೆಯಲ್ಲಿ ‘ಫ್ಲೇವರ್ಸ್ ಆಫ್ ಗಂಧದ ಗುಡಿ’ (ಗಂಧದ ಗುಡಿಯ ಸ್ವಾದಗಳು) ಎನ್ನುವ ವಿಶೇಷ ಆಹಾರೋತ್ಸವವನ್ನು ನಗರದ 100ಕ್ಕೂ ಹೆಚ್ಚು ರೆಸ್ಟೋರೆಂಟ್‌ಗಳು ಹಮ್ಮಿಕೊಂಡಿವೆ. ಪುನೀತ್ ಅಭಿನಯದ ಸಾಕ್ಷ್ಯಚಿತ್ರ ‘ಗಂಧದ ಗುಡಿ’ಯನ್ನು ನೋಡಿ ಎಂದು ಗ್ರಾಹಕರನ್ನು ಪ್ರೀತಿಪೂರ್ವಕವಾಗಿ ಒತ್ತಾಯಿಸುವ ಅಭಿಯಾನವೂ ಈ ಆಹಾರೋತ್ಸವದ ಭಾಗವಾಗಿದೆ.

ಜಯನಗರದ ಬಸವೇಶ್ವರ ಖಾನಾವಳಿಯಲ್ಲಿ ಪುನೀತ್ ಕಟ್‌ಔಟ್

ರ್‍ಯಾಡಿಸನ್ ಹೋಟೆಲ್‌ನಲ್ಲಿ ‘ಪುನೀತ ನಮನ’

ಪ್ರಜಾವಾಣಿ ವಿಶೇಷ

‘ಪುನೀತ್ ಖುದ್ದು ಆಹಾರ ಪ್ರಿಯರಾಗಿದ್ದರು. ಪದೇ ಪದೇ ನಗರದ ವಿವಿಧ ರೆಸ್ಟೋರೆಂಟ್‌ಗಳಿಗೆ ಭೇಟಿ ನೀಡುತ್ತಿದ್ದರು. ತಾವು ಭೇಟಿ ನೀಡುತ್ತಿದ್ದ ರೆಸ್ಟೋರೆಂಟ್‌ಗಳ ಮಾಲೀಕರು ಹಾಗೂ ಅಡುಗೆಯವರ ಜತೆಗೆ ಸೌಹಾರ್ದಯುತ ಸಂಬಂಧವೂ ಅವರಿಗೆ ಇತ್ತು. ಹೀಗಾಗಿ ಅವರ ಅಭಿಮಾನಿಗಳ ಸಲಹೆಯ ಮೇರೆಗೆ ಗಂಧದ ಗುಡಿಯ ಸ್ವಾದಗಳು’ ಎನ್ನುವ ಆಹಾರೋತ್ಸವ ಹಮ್ಮಿಕೊಂಡೆವು’ ಎಂದು ಬೃಹತ್ ಬೆಂಗಳೂರು ಹೋಟೆಲಿಯರ್ಸ್ ಒಕ್ಕೂಟದ (ಬಿಬಿಎಚ್‌ಎ) ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದರು.

ಕೆಲವು ರೆಸ್ಟೋರೆಂಟ್‌ಗಳು ಕಳೆದ ವಾರಾಂತ್ಯದಲ್ಲಿ ಎರಡು ದಿನ ಅಪ್ಪು ಹೆಸರಿನಲ್ಲಿ ಆಹಾರೋತ್ಸವವನ್ನು ಆಯೋಜಿಸಿದ್ದವು. ಇನ್ನು ಕೆಲವು ರೆಸ್ಟೋರೆಂಟ್‌ಗಳು ಅಭಿಮಾನಿಗಳಿಂದ ಬಂದ ಉತ್ತಮ ಪ್ರತಿಕ್ರಿಯೆ ಕಂಡು ಆಹಾರೋತ್ಸವವನ್ನು ನವೆಂಬರ್ 5ರ ವರೆಗೆ ವಿಸ್ತರಿಸಿವೆ.

ಪುನೀತ್ ಇಷ್ಟದ ದೊನ್ನೆ ಬಿರಿಯಾನಿ, ಅಕ್ಕಿ ರೊಟ್ಟಿ, ಹುರಿದ ಮೀನು, ನಳ್ಳಿ ಮೂಳೆ, ತಟ್ಟೆ ಇಡ್ಲಿ, ಹೂಕೋಸು ಪಲ್ಯ, ತರಕಾರಿ ಫ್ರೈ, ಮಸಾಲ ಉದ್ದಿನ ವಡೆ ಹಾಗೂ ಮಲ್ಲಿಗೆ ಜಾಮೂನನ್ನು ಒಳಗೊಂಡ ಖಾದ್ಯಗಳನ್ನು ಬಾಣಸಿಗ ಚೆಲುವ ನಾರಾಯಣ ಅವರು ಹೊರ ವರ್ತುಲ ರಸ್ತೆಯ ‘ರ್‍ಯಾಡಿಸನ್ ಬ್ಲೂ’ ರೆಸ್ಟೋರೆಂಟ್‌ನಲ್ಲಿ ಸಿದ್ಧಪಡಿಸಿ ಅಭಿಮಾನಿಗಳಿಗೆ ಉಣಬಡಿಸುತ್ತಿದ್ದಾರೆ. ಈ ಖಾದ್ಯಗಳೆಲ್ಲ ಪುನೀತ್ ಮೆಚ್ಚಿದಂಥವು. ‘ಪುನೀತ್‌ಗೆ ಇದು ಖಾದ್ಯಗಳ ಮೂಲಕ ಸಲ್ಲಿಸುತ್ತಿರುವ ಶ್ರದ್ಧಾಂಜಲಿ’ ಎಂದೇ ಅವರು ಭಾವಿಸಿದ್ದಾರೆ.

ಅನೇಕ ರೆಸ್ಟೋರೆಂಟ್‌ಗಳು ಪುನೀತ್ ಇಷ್ಟಪಡುತ್ತಿದ್ದ ತಿನಿಸುಗಳನ್ನೇ ಅವರ ನೆನಪಿನ ಆಹಾರೋತ್ಸವದಲ್ಲಿ ಗ್ರಾಹಕರಿಗೆ ನೀಡುತ್ತಿವೆ. ಕೆಲವರು ಹೊಸ ಖಾದ್ಯಗಳನ್ನೂ ಸೇರಿಸಿದ್ದಾರೆ ಎಂದು ಪಿ.ಸಿ. ರಾವ್ ಮಾಹಿತಿ ನೀಡಿದರು.

ವಿಶೇಷ ಮೆನು ಅಷ್ಟೇ ಅಲ್ಲದೆ ಪುನೀತ್ ರಾಜ್‌ಕುಮಾರ್ ಕಟ್‌ಔಟ್‌ಗಳನ್ನು, ಫೋಟೊ ಬೂತ್‌ಗಳನ್ನು ಕೆಲವು ರೆಸ್ಟೋರೆಂಟ್‌ಗಳಲ್ಲಿ ಇರಿಸಲಾಗಿದೆ. ವಿಶೇಷ ರಿಯಾಯಿತಿಯೂ ಕೆಲವು ಕಡೆ ಇರುವುದರಿಂದ ಗ್ರಾಹಕರನ್ನು ಆಕರ್ಷಿಸಿದೆ. ‘ಪುನೀತ್ ಅವರ ಪೋಸ್ಟರ್‌ಗಳನ್ನು ಹಾಗೂ ಕಟ್‌ಔಟ್‌ಗಳನ್ನು ಹಾಕಿದ್ದೇವೆ. ಅವುಗಳೊಟ್ಟಿಗೆ ಫೋಟೊ ತೆಗೆಸಿಕೊಂಡೇ ಎಷ್ಟೋ ಅಭಿಮಾನಿಗಳು ಖುಷಿ ಪಡುತ್ತಾರೆ’ ಎಂದು ಜಯನಗರದ ಬಸವೇಶ್ವರ ಖಾನಾವಳಿಯ ಮಾಲೀಕ ಅಶೋಕ್ ಪೈ ತಿಳಿಸಿದರು.

ಮಹಾಲಕ್ಷ್ಮಿ ಲೇಔಟ್‌ನ ‘ರಗೂಸ್ ಕಿಚನ್’ನ ರಘು ಪೂಜಾರಿ ಹೇಳುವಂತೆ, ಕಳೆದ ವಾರದಿಂದ ಒಂದು ದಿನಕ್ಕೆ ಕನಿಷ್ಠ ಸಾವಿರ ಬಿರಿಯಾನಿಗಳು ಖರ್ಚಾಗುತ್ತಿವೆ. ‘ಮುಂದಿನ ದಿನಗಳಲ್ಲಿ ಇನ್ನಷ್ಟು ಬೇಡಿಕೆ ಕುದುರುವ ನಿರೀಕ್ಷೆಯೂ ಅವರಿಗಿದೆ. ವಾರದ ಅವಧಿಯಲ್ಲಿ ಸುಮಾರು 8 ಸಾವಿರ ಬಿರಿಯಾನಿಗಳನ್ನು ಜನರು ಇಲ್ಲಿ ಖರೀದಿಸಿದ್ದಾರೆ. ಜನರ ಉತ್ಸಾಹ ಅದ್ಭುತವಾಗಿದೆ’ ಎಂದು ಅವರು ಖುಷಿಪಟ್ಟರು.

ಪುನೀತ್ ಅವರ ಕುಟುಂಬದ ಸದಸ್ಯರೂ ಕೆಲವು ಹೋಟೆಲ್‌ಗಳಿಗೆ ಭೇಟಿ ನೀಡಿ, ಆಹಾರೋತ್ಸವವನ್ನು ವೀಕ್ಷಿಸಿದ್ದಾರೆ.

ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಿ ವರದಿ ಸಲ್ಲಿಕೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೊಡಿಗೇಹಳ್ಳಿ ಮತ್ತು ಕೋತಿಹೊಸಹಳ್ಳಿಯಲ್ಲಿನ ಸರ್ಕಾರಿ ಜಾಗದಲ್ಲಿ ಖಾಸಗಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ ನೀಡಿರುವ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಿ ವರದಿ ಸಲ್ಲಿಸಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ನಿರ್ದೇಶಿಸಿದೆ.

‘ಒತ್ತುವರಿ ತೆರವುಗೊಳಿಸಲು ಸರ್ಕಾರ ಮತ್ತು ಬಿಬಿಎಂಪಿಗೆ ನಿರ್ದೇಶಿಸಬೇಕು’ ಎಂದು ಕೋರಿ ಕೊಡಿಗೆಹಳ್ಳಿಯ ಅಶ್ವತ್ಥ ನಾರಾಯಣ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಕಟ್ಟಡ ನಿರ್ಮಾಣವಾಗಿ ಹಲವು ವರ್ಷಗಳೇ ಕಳೆದಿವೆ. ಇದು ಈತನಕ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೇ’ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, ‘ಕಟ್ಟಡ ರಾತ್ರೋರಾತ್ರಿ ನಿರ್ಮಾಣವಾಯಿತೇ? ಕಟ್ಟಡ ನಿರ್ಮಾಣಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದರೆ ಆಗ ಜಾಗ ಅಥವಾ ನಿವೇಶನದ ಕುರಿತ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸುವುದಿಲ್ಲವೇ? ನಗರದಲ್ಲಿ ಕಟ್ಟಡ ನಿರ್ಮಾಣದ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ನಡೆಸುವುದಿಲ್ಲವೇ? ಅಧಿಕಾರಿಗಳು ಕಚೇರಿಯಲ್ಲಿ ಮೂಕ ಪ್ರೇಕ್ಷರಾಗಿಯೇ ಕುಳಿತಿರುತ್ತಾರೆಯೇ’ ಎಂದು ಪ್ರಶ್ನೆಗಳ ಮಳೆಗರೆಯಿತು.

‘ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ಎನ್‌ಟಿಐ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ವಸತಿ ಕಟ್ಟಡ ನಿರ್ಮಿಸಿದೆ. ಬಿಬಿಎಂಪಿ ಅಧಿಕಾರಿಗಳೇ ಇದಕ್ಕೆ ನಕ್ಷೆ ಮಂಜೂರು ಮಾಡಿದ್ದಾರೆ ಎಂಬುದು ಆಶ್ಚರ್ಯ. ಕಟ್ಟಡಕ್ಕೆ ವಿದ್ಯುತ್ ಸಂಪರ್ಕವನ್ನೂ ಕಲ್ಪಿಸಲಾಗಿದ್ದು, ಇದು ಅಧಿಕಾರಗಳ ದಿವ್ಯ ನಿರ್ಲಕ್ಷ್ಯ ಹಾಗೂ ಸರ್ಕಾರಿ ಪ್ರಾಧಿಕಾರಿಗಳ ನಡುವೆ ಸೂಕ್ತ ಹೊಂದಾಣಿಕೆ ಇಲ್ಲದಿರುವುದರ ಪ್ರತಿಬಿಂಬ’ ಎಂದು ಕಿಡಿಕಾರಿತು.

‘ಬೆಂಗಳೂರು ನಗರ ಜಿಲ್ಲಾಧಿಕಾರಿಯು ನಕ್ಷೆ ಮಂಜೂ ರಾತಿ ನೀಡಿರುವ ಅಧಿಕಾರಿಗಳ ವಿಚಾರಣೆ ನಡೆಸಬೇಕು. ತಪ್ಪು ಎಸಗಿರುವುದು ಯಾರು ಎಂಬುದನ್ನು ಪತ್ತೆಹಚ್ಚಿ ನಾಲ್ಕು ವಾರಗಳಲ್ಲಿ ವರದಿ ಸಲ್ಲಿಸಬೇಕು‘ ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಇದೇ ವೇಳೆ ಯಲಹಂಕ ತಹಶೀಲ್ದಾರ್ ನ್ಯಾಯಪೀಠಕ್ಕೆ ವರದಿ ಸಲ್ಲಿಸಿ, ‘ಒತ್ತುವರಿ ತೆರವುಗೊಳಿಸಲು ನೋಟಿಸ್ ಜಾರಿಗೊಳಿಸಿದ್ದು, ಕೆಲ ಒತ್ತುವರಿಯನ್ನು ಈಗಾಗಲೇ ತೆರವುಗೊಳಿಸಲಾಗಿದೆ’ ಎಂದು ತಿಳಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ‘ಒತ್ತುವರಿದಾರರ ಅಹವಾಲು ಆಲಿಸಿದ ನಂತರ ಮುಂದಿನ ತೀರ್ಮಾನ ಕೈಗೊಳ್ಳಬೇಕು’ ಎಂದು ತಹಶೀಲ್ದಾರ್ ಅವರಿಗೆ ನಿರ್ದೇಶಿಸಿತು.

‘ಸುಳ್ಳು ಭಾಷಣ ಬಿಜೆಪಿ ಸಾಧನೆ’

ಬೆಂಗಳೂರು: ‘ಜನರ ಹೊಟ್ಟೆಗೆ ಸಮರ್ಪಕವಾಗಿ ಅನ್ನ ನೀಡದ ಬಿಜೆಪಿಯವರಿಂದ ದೇಶವನ್ನು ವಿಶ್ವ ಗುರು ಮಾಡಲು ಸಾಧ್ಯವೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

‘ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಎಲ್ಲ ರಂಗಗಳಲ್ಲೂ ವಿಫಲವಾಗಿದೆ. ಸುಳ್ಳು ಭಾಷಣಗಳನ್ನು ಬಿಟ್ಟರೆ ಯಾವ ಸಾಧನೆಯೂ ಇಲ್ಲ. ಭಾರತವನ್ನು ಹಿಂದೆ ತಳ್ಳಿ ಅಕ್ಕಪಕ್ಕದ ದೇಶಗಳು ಮುಂದಕ್ಕೆ ಹೋಗುತ್ತಿರುವ ವಿಚಾರವನ್ನು ಮರೆಮಾಚಲು ಧರ್ಮ, ಜಾತಿ, ಕೋಮು ದ್ವೇಷಗಳನ್ನು ಮುಂದೆ ಮಾಡಿಕೊಂಡು ಜನರನ್ನು ದಾರಿ ತಪ್ಪಿಸಲಾಗುತ್ತಿದೆ’ ಎಂದು ಅವರು ಟೀಕಿಸಿದ್ದಾರೆ.

‘ಜಗತ್ತಿನ ಜನರ ಮುಂದೆ ಹಸಿವು, ಸ್ವಾತಂತ್ರ್ಯ, ಮಹಿಳೆಯರ ದುಡಿಮೆ ಮುಂತಾದ ವಿಷಯಗಳಲ್ಲಿ ಭಾರತದ ಮರ್ಯಾದೆ ಹರಾಜಾಗುತ್ತಿದೆ. ಇದನ್ನು ಅರಿತುಕೊಳ್ಳದಿದ್ದರೆ ಈ ದೇಶದ ಬಡವರು, ಮಧ್ಯಮವರ್ಗದವರು, ದಲಿತರು, ರೈತರು, ಹಿಂದುಳಿದವರು, ಪಶುಪಾಲಕರು, ಆದಿವಾಸಿಗಳು, ಮಹಿಳೆಯರು, ಕಾರ್ಮಿ ಕರು, ಕುಶಲಕರ್ಮಿಗಳಾದಿಯಾಗಿ ಯಾರಿಗೂ ಉಳಿಗಾಲವಿಲ್ಲ’ ಎಂದರು.

ಪಿ.ರಾಮಯ್ಯ ಅವರ ‘ನಾನು ಹಿಂದೂ ರಾಮಯ್ಯ’ ಪುಸ್ತಕ ಬಿಡುಗಡೆ

‘ಆತ್ಮಸಾಕ್ಷಿಯಂತೆ ನಡೆಯುವುದು ಕಷ್ಟದ ಕೆಲಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯುವುದು ಬಹಳ ಕಷ್ಟದ ಕೆಲಸ. ಅದಕ್ಕೆ ವಿಘ್ನಗಳು ಎದುರಾಗುತ್ತಲೇ ಇರುತ್ತವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅಭಿಮಾನಿ ಪ್ರಕಾಶನ ಪ್ರಕಟಿಸಿರುವ ಪತ್ರಕರ್ತ ಪಿ.ರಾಮಯ್ಯ ಅವರ 60 ವರ್ಷಗಳ ಅನುಭವ ಕಥನ ‘ನಾನು ಹಿಂದೂ ರಾಮಯ್ಯ’ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ‘ಆತ್ಮಸಾಕ್ಷಿಯಂತೆ ನಡೆದುಕೊಳ್ಳಲು ಒಂದಿಲ್ಲೊಂದು ಒತ್ತಡಗಳು ಅಡ್ಡಿಯಾಗುತ್ತಲೇ ಇರುತ್ತವೆ. ಆತ್ಮಸಾಕ್ಷಿಯಂತೆ ನಡೆದುಕೊಳ್ಳಲಿಲ್ಲ ಎಂಬ ಸಂಕಟ ಕಾಡುತ್ತಲೇ ಇರುತ್ತವೆ’ ಎಂದರು.


ಪುಸ್ತಕವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. ಹುಣಸವಾಡಿ ರಾಜನ್, ಅಭಿಮಾನಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಟಿ.ವೆಂಕಟೇಶ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ, ಪಿ.ರಾಮಯ್ಯ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್ ಇದ್ದರು –ಪ್ರಜಾವಾಣಿ ಚಿತ್ರ

‘ಪಿ.ರಾಮಯ್ಯ ಅವರು ಆತ್ಮಸಾಕ್ಷಿಗೆ ವಂಚನೆ ಮಾಡಿಕೊಳ್ಳದೆ ನೈಜ ಪತ್ರಕರ್ತನಾಗಿ ಕೆಲಸ ಮಾಡಿದ್ದಾರೆ. ರಾಮಯ್ಯ ಅವರನ್ನು ಬಾಲ್ಯದಿಂದ ನೋಡಿ ಬೆಳೆದಿದ್ದೇನೆ. ಅವರಿಂದ ಬಹಳಷ್ಟು ಕಲಿತಿದ್ದೇನೆ. ನನ್ನ ತಂದೆ ಜತೆಗೂ ಸಾಕಷ್ಟು ಒಡನಾಟ ಇಟ್ಟುಕೊಂಡಿದ್ದರು. ರಾಮಕೃಷ್ಣ ಹೆಗಡೆ, ಎಚ್.ಡಿ.ದೇವೇಗೌಡ, ಜೆ.ಎಚ್.ಪಟೇಲ್ ಸೇರಿ ಎರಡು ತಲೆಮಾರಿನ ರಾಜಕಾರಣ ಮತ್ತು ಮೂರು ತಲೆಮಾರಿನ ಪತ್ರಿಕೋದ್ಯಮವನ್ನು ಅವರು ನೋಡಿದ್ದಾರೆ. ಅವರ ಬದುಕು ಇತರರಿಗೆ ಸ್ಫೂರ್ತಿ’ ಎಂದು ಹೇಳಿದರು.

ಕೃತಿ ಕುರಿತು ಮಾತನಾಡಿದ ‘ಸಂಯುಕ್ತ ಕರ್ನಾಟಕ’ ಪತ್ರಿಕೆ ಪ್ರಧಾನ ಸಂಪಾದಕ ಹುಣಸವಾಡಿ ರಾಜನ್ ಮಾತನಾಡಿ, ‘ದೇವರಾಜ ಅರಸು ಅವರೊಂದಿಗಿನ ಅನುಭವವನ್ನು ಪಿ.ರಾಮಯ್ಯ ಅವರು ಸಮಗ್ರ ದೃಷ್ಟಿಯಿಂದ ಚಿತ್ರಿಸಿದ್ದಾರೆ. ಎಚ್.ಡಿ. ದೇವೇಗೌಡರ ಜೊತೆಗಿನ ಒಡನಾಟವನ್ನೂ ಸುದೀರ್ಘವಾಗಿ ಉಲ್ಲೇಖಿಸಿದ್ದಾರೆ’ ಎಂದರು.

ಪಿ.ರಾಮಯ್ಯ ಮಾತನಾಡಿ, ‘ಪತ್ರಕರ್ತನಾಗಿ ಕೆಲಸ ಮಾಡಿದ 45 ವರ್ಷಗಳ ಅವಧಿಯಲ್ಲಿ ಎಲ್ಲಾ ವರ್ಗದವರ ಪ್ರೀತಿ ಗಳಿಸಿರುವುದೇ ನನ್ನ ದೊಡ್ಡ ಆಸ್ತಿ’ ಎಂದು ಭಾವುಕರಾದರು.

ನಗರದ ವಿವಿಧ ಆಸ್ಪತ್ರೆಗಳಲ್ಲಿ 100ಕ್ಕೂ ಅಧಿಕ ಪ್ರಕರಣಗಳು ವರದಿ

ನಿಲ್ಲದ ಪಟಾಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬ ಮುಗಿದರೂ ನಗರದಲ್ಲಿ ಪಟಾಕಿ ಅವಘಡಗಳು ನಿಂತಿಲ್ಲ. ಮಕ್ಕಳು ಸೇರಿ ವಿವಿಧ ವಯೋಮಾನದ 100ಕ್ಕೂ ಅಧಿಕ ಮಂದಿಯ ಕಣ್ಣಿಗೆ ಪಟಾಕಿ ಕಿಡಿ ಹಾನಿ ಮಾಡಿದೆ.

ಪಟಾಕಿಯಿಂದ ಸಂಭವಿಸುವ ಅವಘಡದ ಬಗ್ಗೆ ವೈದ್ಯರು ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಹಬ್ಬಕ್ಕೂ ಮುನ್ನ ಜಾಗೃತಿ ಮೂಡಿಸಿದ್ದರು. ಇಷ್ಟಾಗಿಯೂ ಐದು ದಿನಗಳಿಂದ ಪಟಾಕಿ ಅವಘಡಗಳು ನಗರದ ವಿವಿಧೆಡೆ ವರದಿಯಾಗುತ್ತಿವೆ. ಕೆಲವರ ಕಣ್ಣಿಗೆ ಗಂಭೀರ ಹಾನಿಯಾಗಿದ್ದು, ದೃಷ್ಟಿ ನಷ್ಟದ ಬಗ್ಗೆ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.



ಹಸಿರು ಪಟಾಕಿಗಳಲ್ಲಿಯೂ ರಾಸಾಯನಿಕಗಳು ಇರುತ್ತವೆ. ಅವುಗಳಿಂದಲೂ ಕಣ್ಣಿಗೆ ಅಪಾಯವಿದೆ. ಆದ್ದರಿಂದ ಪಟಾಕಿ ಸಿಡಿಸುವಾಗ ಎಚ್ಚರ ಅಗತ್ಯ.

ಡಾ. ಭುಜಂಗ ಶೆಟ್ಟಿ
ನಾರಾಯಣ ನೇತ್ರಾಲಯದ ಅಧ್ಯಕ್ಷ

ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ 30ಕ್ಕೂ ಅಧಿಕ ಹಾಗೂ ನಾರಾಯಣ ನೇತ್ರಾಲಯದಲ್ಲಿ 50ಕ್ಕೂ ಅಧಿಕ ಪ್ರಕರಣಗಳು ವರದಿಯಾಗಿವೆ.

ನೇತ್ರಧಾಮ, ಶಂಕರ ಕಣ್ಣಿನ ಆಸ್ಪತ್ರೆ, ಆಸ್ಟರ್ ಸಿಎಂಐ, ಶಂಕರ ಕಣ್ಣಿನ ಆಸ್ಪತ್ರೆ, ಮೋದಿ ಕಣ್ಣಿನ ಆಸ್ಪತ್ರೆ ಸೇರಿ ವಿವಿಧ ಆಸ್ಪತ್ರೆಗಳಲ್ಲಿ ಪಟಾಕಿ ಗಾಯ ಪ್ರಕರಣಗಳು ವರದಿಯಾಗಿವೆ. ಗಾಯಗೊಂಡವರಲ್ಲಿ ಹೆಚ್ಚಿನವರು ಲಕ್ಷ್ಮೀ ಬಾಂಬ್, ಬಿಜ್ಲಿ ಪಟಾಕಿ ಹಾಗೂ ಫ್ಲವರ್ ಪಾಟ್ ಸಿಡಿಸಿದವರಾಗಿದ್ದಾರೆ.

ಮಾಗಡಿಯ ತ್ಯಾಗರೆಪಾಳ್ಯದಲ್ಲಿ ವಾಹನಗಳಿಗೆ ಪೂಜೆ ಮಾಡುತ್ತಿದ್ದ 50 ವರ್ಷದ ಮಹಿಳೆಗೆ ಪಟಾಕಿ ಕಿಡಿ ತಾಕಿ, ಕಣ್ಣಿಗೆ ಗಾಯವಾಗಿದೆ. ಅವರು ನಾರಾಯಣ ನೇತ್ರಾಲಯಕ್ಕೆ ದಾಖಲಾಗಿದ್ದಾರೆ. ಮೂಡಲಪಾಳ್ಯದ 17 ವರ್ಷದ ವ್ಯಕ್ತಿ, ಹೂಕುಂಡಕ್ಕೆ ಬೆಂಕಿ ಹೊತ್ತಿರುವ ಬಗ್ಗೆ ಪರಿಶೀಲಿಸುವಾಗ ಸ್ಫೋಟಗೊಂಡಿದೆ. ಇದರಿಂದಾಗಿ ಕಣ್ಣಿಗೆ ಗಂಭೀರ ಹಾನಿಯಾಗಿದೆ.

ಪ್ರಕರಣ ಹೆಚ್ಚಳ: 'ಪಟಾಕಿ ಸಿಡಿತದಿಂದ ಕಣ್ಣಿಗೆ ಗಾಯ ಮಾಡಿಕೊಂಡವರಲ್ಲಿ 13 ಮಂದಿಗೆ ಶಸ್ತ್ರ ಚಿಕಿತ್ಸೆ ಅಗತ್ಯವಿದೆ. 7 ಮಂದಿಗೆ ಗಂಭೀರ ಸ್ವರೂಪದ ಹಾನಿಯಾಗಿದ್ದು, ದೃಷ್ಟಿ ಬರುವ ಸಾಧ್ಯತೆ ಕಡಿಮೆಯಿದೆ. ಪಟಾಕಿ ಅವಘಡ ಪ್ರಕರಣಗಳು ಈ ವರ್ಷ ಹೆಚ್ಚಳವಾಗಿದೆ' ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ಭುಜಂಗ ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'2019ರಲ್ಲಿ 35 ಮಂದಿ, 2020ರಲ್ಲಿ 24 ಮಂದಿ ಹಾಗೂ 2021ರಲ್ಲಿ 17 ಮಂದಿ ಪಟಾಕಿ ಅವಘಡಗಳ ಗಾಯಕ್ಕೆ ಚಿಕಿತ್ಸೆ ಪಡೆದಿದ್ದರು. ಪಟಾಕಿ ಬಗ್ಗೆ ಜನರಲ್ಲಿ ಇನ್ನಷ್ಟು ಜಾಗೃತಿ ಮೂಡಬೇಕು' ಎಂದು ಹೇಳಿದರು.

ಹಬ್ಬದ ಅವಧಿಯಲ್ಲಿ ಮಾಲಿನ್ಯಕಾರಕ ಕಣಗಳು ದುಪ್ಪಟ್ಟು

ನಗರದ ಮಾಲಿನ್ಯ ಹೆಚ್ಚಿಸಿದ ಪಟಾಕಿ

● ವರುಣ ಹೆಗಡೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಿಡಿಸಿದ ಪಟಾಕಿ ಹೊಗೆಯಿಂದ ನಗರದ ವಿವಿಧೆಡೆ ಹೆಚ್ಚಿನ ಪ್ರಮಾಣದಲ್ಲಿ ಮಾಲಿನ್ಯಕಾರಕ ಕಣಗಳು (ಪಿಎಂ 2.5 ಮತ್ತು ಪಿಎಂ 10) ಕಾಣಿಸಿಕೊಂಡಿವೆ. ಇದರಿಂದಾಗಿ 'ಉತ್ತಮ' ಸ್ಥಿತಿಯಲ್ಲಿದ್ದ ಗಾಳಿಯ ಗುಣಮಟ್ಟ 'ಕಳಪೆ' ಸ್ಥಿತಿ ತಲುಪಿದೆ.

ಹಬ್ಬಕ್ಕೂ ಮುನ್ನ ಸರ್ಕಾರೇತರ ಸಂಸ್ಥೆಗಳು ಪಟಾಕಿ ಅವಘಡಗಳು ಹಾಗೂ ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸಿದ್ದವು. ಕೋವಿಡ್ ಕಾರಣ ಕಳೆದ ವರ್ಷ ಕಳೆಗುಂದಿದ್ದ ದೀಪಾವಳಿ, ಈ ಬಾರಿ ಜನರ ಸಂಭ್ರಮವನ್ನು ಹೆಚ್ಚಿಸಿತ್ತು. ಇದರಿಂದಾಗಿ ನಗರದ ಎಲ್ಲೆಡೆ ಹಬ್ಬದ ಮೂರೂ ದಿನಗಳು ಪಟಾಕಿಯ ಸದ್ದು ಜೋರಾಗಿ ಮೊಳಗಿತ್ತು. ಪಟಾಕಿಯ ಹೊಗೆಯಿಂದಾಗಿ ನಗರದ ಬಹುತೇಕ ಕಡೆ ಮಾಲಿನ್ಯಕಾರಕ ಕಣಗಳು ದುಪ್ಪಟ್ಟಾಗಿವೆ. ಶಬ್ದ ಮಾಲಿನ್ಯ ಪ್ರಮಾಣದಲ್ಲೂ ಹೆಚ್ಚಳವಾಗಿದೆ.

ಸಾಣೆಗುರುವನಹಳ್ಳಿ, ಹೆಬ್ಬಾಳ, ಜಯನಗರ, ಸೆಂಟ್ರಲ್ ಸಿಲ್ಕ್ ಬೋರ್ಡ್, ಕವಿಕಾ ಲೇಔಟ್, ನಗರ ರೈಲು ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ಹಬ್ಬಕ್ಕೂ ಮೊದಲು ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯೂಐ) 100ರ ಮಿತಿಯೊಳಗಿತ್ತು.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಿಡಿಸಿದ ಪಟಾಕಿಗಳ ಮಾಲಿನ್ಯಕಾರಕ ಹೊಗೆಯಿಂದ ಗಾಳಿಯ ಗುಣಮಟ್ಟದ ಸೂಚ್ಯಂಕದಲ್ಲಿ ದಿಢೀರ್ ಏರಿಕೆ ಆಗಿದೆ. ಪಿಎಂ 10 ಹಾಗೂ ಪಿಎಂ 2.5 ಕಣಗಳಲ್ಲಿ ವ್ಯತ್ಯಾಸ ಉಂಟಾಗಿದೆ. ನಗರದ ಬಹುತೇಕ ಕಡೆ ಒಂದು ಸಾವಿರ ಲೀಟರ್ ಗಾಳಿಯಲ್ಲಿ ಪಿಎಂ 10ರ ಪ್ರಮಾಣ 100 ಮೈಕ್ರೊ ಗ್ರಾಂ ಹಾಗೂ ಪಿಎಂ 2.5ರ ಪ್ರಮಾಣ 60 ಮೈಕ್ರೊ ಗ್ರಾಂ ಮೀರಿದೆ.

ಕಳಪೆ ಹಂತ: ನರಕ ಚತುರ್ದಶಿ ದಿನವಾದ ಸೋಮವಾರ, ಹಬ್ಬದ ಮುನ್ನಾದಿನವಾದ ಮಂಗಳವಾರ ಹಾಗೂ ಹಬ್ಬದ ದಿನವಾದ ಬುಧವಾರ ರಾತ್ರಿ ವೇಳೆ ಹೆಚ್ಚಿನ ಪ್ರಮಾಣದಲ್ಲಿ ಮಾಲಿನ್ಯಕಾರಕ ಕಣಗಳು ಕಾಣಿಸಿಕೊಂಡಿವೆ. ಸೆಂಟ್ರಲ್ ಸಿಲ್ಕ್ ಬೋರ್ಡ್, ಜಯನಗರ, ಬಿಟಿಎಂ ಬಡಾವಣೆ ಸೇರಿ ವಿವಿಧ ಕೇಂದ್ರಗಳ ಸುತ್ತಮುತ್ತ ಎಕ್ಯೂಐ 200ರ ಗಡಿ ದಾಟಿ, ಕಳಪೆ ಹಂತಕ್ಕೆ ತಲುಪಿದೆ. ಉಳಿದ ಕಡೆಯೂ ಈ ಪ್ರಮಾಣ ಸಾಮಾನ್ಯ ದಿನಗಳಿಗಿಂತ ಎರಡು ಪಟ್ಟು ಹೆಚ್ಚಳವಾಗಿತ್ತು.

'ವಾತಾವರಣದಲ್ಲಿ ತೇವಾಂಶ ಹೆಚ್ಚಾದರೆ ದೂಳಿನ ಕಣಗಳು ಆಕಾಶಕ್ಕೆ ಹೋಗದೆ, ತಳಮಟ್ಟದಲ್ಲಿಯೇ ಗಾಳಿಯಲ್ಲಿ ತೇಲಾಡುತ್ತಿರುತ್ತವೆ. ಪಟಾಕಿಯ ವಿಷಕಾರಿ ಹೊಗೆ ಈ ಗಾಳಿಯನ್ನು ಸೇರಿದಾಗ ಮಲಿನಕಾರಕ ಕಣಗಳು ಗಾಳಿಯಲ್ಲಿ ಉಳಿಯುತ್ತವೆ. ಮೋಡದ ವಾತಾವರಣದಲ್ಲಿಯೂ ಪಟಾಕಿಗಳನ್ನು ಸಿಡಿಸಿದ್ದರಿಂದ ಕೆಲವೆಡೆ ಗಾಳಿಯ ಗುಣಮಟ್ಟದ ಸೂಚ್ಯಂಕ ಏರಿಕೆ ಕಂಡಿದೆ' ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಪರಿಸರ ಅಧಿಕಾರಿಯೊಬ್ಬರು ತಿಳಿಸಿದರು.

ನಗರದ ಗಾಳಿಯ ಗುಣಮಟ್ಟ ಸೂಚ್ಯಂಕ

ಕೇಂದ್ರಗಳು	2022 ಅ.17	ಅ.24	ಅ.25	ಅ.26
ನಗರದ ರೈಲು ನಿಲ್ದಾಣ	92	97	109	109
ಸಾಣೆಗುರುವನಹಳ್ಳಿ	28	72	98	105
ಹೆಬ್ಬಾಳ	46	154	210	105
ಜಯನಗರ	37	254	312	204
ಕವಿಕಾ ಲೇಔಟ್	77	312	312	316
ನಿಮ್ಹಾನ್ಸ್	41	83	109	110
ಸೆಂಟ್ರಲ್ ಸಿಲ್ಕ್ ಬೋರ್ಡ್	45	320	301	168

ದೀಪಾವಳಿ ಹಬ್ಬದ ಮೂರು ದಿನಗಳ ಸರಾಸರಿ

ಕೇಂದ್ರಗಳು	ಎಕ್ಯುಐ
ಹೆಬ್ಬಾಳ	156
ಸಿಟಿ ರೈಲ್ವೆ ನಿಲ್ದಾಣ	105
ಜಯನಗರ	257
ಮೈಸೂರು ರಸ್ತೆ	313
ನಿಮ್ಹಾನ್ಸ್	101
ಸೆಂಟ್ರಲ್ ಸಿಲ್ಕ್ ಬೋರ್ಡ್	263
ಸಾಣೆಗುರುವನಹಳ್ಳಿ	92

ಗಾಳಿಯ ಗುಣಮಟ್ಟದ ಸೂಚ್ಯಂಕದ (ಎಕ್ಯುಐ) ಮಾಪನ

00-50	ಉತ್ತಮ
51-100	ಸಮಾಧಾನಕರ
101-200	ಮಧ್ಯಮ
201-300	ಕಳಪೆ
301-400	ತುಂಬಾ ಕಳಪೆ
401 ಮೇಲ್ಪಟ್ಟು	ತೀವ್ರ

ಶಬ್ದದ ಪ್ರಮಾಣವೂ ಹೆಚ್ಚಳ

ಸಾಮಾನ್ಯ ದಿನಗಳಿಗೆ ಹೋಲಿಸಿದಲ್ಲಿ ಹಬ್ಬದ ಮೂರು ದಿನಗಳ ಅವಧಿಯಲ್ಲಿ ಶಬ್ದ ಮಾಲಿನ್ಯ ಪ್ರಮಾಣವೂ ಗಣನೀಯ ಹೆಚ್ಚಳವಾಗಿದೆ. ಬಿಟಿಎಂ ಲೇಔಟ್, ಬಸವೇಶ್ವರ ನಗರ, ಚರ್ಚ್ ಸ್ಟ್ರೀಟ್, ವಿಜಯನಗರ, ಜಯನಗರ, ಇಂದಿರಾನಗರ ಸೇರಿ ನಗರದ ವಿವಿಧೆಡೆ 14 ಮಾಪನ ಕೇಂದ್ರಗಳಿವೆ. ಸಾಮಾನ್ಯ ದಿನಗಳಲ್ಲಿ ಶಬ್ದದ ಡೆಸಿಬಲ್ಸ್ ಪ್ರಮಾಣ 60ರ ಆಸುಪಾಸಿನಲ್ಲಿ ಇದ್ದರೆ, ಹಬ್ಬದ ದಿನಗಳಲ್ಲಿ ಬಹುತೇಕ ಕಡೆ 70ರ ಗಡಿ ದಾಟಿದೆ.

ಶಬ್ದ ಮಾಲಿನ್ಯಕ್ಕೆ 125 ಡೆಸಿಬಲ್ಸ್ ಪ್ರಮಾಣವನ್ನು ನಿಗದಿಪಡಿಸಲಾಗಿದ್ದು, ಈ ಪ್ರಮಾಣವನ್ನು ದಾಟಿದರೆ ಅದನ್ನು ಅತಿ ಹೆಚ್ಚು ಶಬ್ದ ಮಾಲಿನ್ಯ ಎಂದು ಗುರುತಿಸಲಾಗುತ್ತದೆ.

ಪಿ.ಎಫ್ ಪ್ರಾದೇಶಿಕ ಕಚೇರಿಯಲ್ಲಿ ವಿಶೇಷ ಸ್ವಚ್ಛತಾ ಅಭಿಯಾನ

ಪ್ರಜಾವಾಣಿ ವಾರ್ತೆ

ಯಲಹಂಕ: ಕೇಂದ್ರ ಸರ್ಕಾರದ ಆದೇಶದ ಮೇರೆಗೆ 'ವಿಶೇಷ ಸ್ವಚ್ಛತಾ ಅಭಿಯಾನ- 2.0' ಕಾರ್ಯಕ್ರಮದಡಿಯಲ್ಲಿ ಇಲ್ಲಿನ ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ ಪ್ರಾದೇಶಿಕ ಕಚೇರಿಯಲ್ಲಿ ಅಕ್ಟೋಬರ್ 2ರಿಂದ 31ರ ವರೆಗೆ ಸ್ವಚ್ಛತಾ ಕಾರ್ಯವನ್ನು ನಡೆಸಲಾಗುತ್ತಿದೆ.

ಈ ಅವಧಿಯಲ್ಲಿ ಯಲಹಂಕದ ಪ್ರಾದೇಶಿಕ ಕಚೇರಿಯ ಆಯುಕ್ತ ಯಶೋವರ್ಧನ್ ಶ್ರೀವಾಸ್ತವ ಅವರ ಮಾರ್ಗದರ್ಶನ ಮತ್ತು ಮೇಲುಸ್ತುವಾರಿಯಲ್ಲಿ ಕಚೇರಿಯ ಆವರಣ, ಅನುಪಯುಕ್ತ ವಸ್ತುಗಳ ಕೊಠಡಿ, ದಾಖಲೆಗಳ ಕೊಠಡಿ, ಹಸಿ- ಒಣಕಸ ವಿಂಗಡಣೆ ಸೇರಿ 10 ಸ್ಥಳಗಳನ್ನು ಗುರುತಿಸಿ, ಸ್ವಚ್ಛತಾಕಾರ್ಯ ಕೈಗೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ 2 ಸಾವಿರ ಕಡತಗಳನ್ನು ವಿಂಗಡಿಸಿ, ಬೇಕಾಗಿರುವ ಕಡತಗಳನ್ನು ಸಂಗ್ರಹಿಸಿಡುವುದರ ಜೊತೆಗೆ ಅನುಪಯುಕ್ತ ಕಡತಗಳನ್ನು ತೆರವುಗೊಳಿಸಲಾಯಿತು. ಇದರಿಂದ ಕಚೇರಿಯ 532 ಚದರಡಿ ವಿಸ್ತೀರ್ಣದ ಜಾಗವನ್ನು ಸಾರ್ವಜನಿಕರ ಸೇವೆಗೆ ಬಳಸಿಕೊಳ್ಳಲು ಅನುಕೂಲವಾಯಿತು.

ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದ ಸಿಬ್ಬಂದಿ

ಅನವಶ್ಯಕ ಕಡತಗಳನ್ನು ವಿಲೇವಾರಿ ಮಾಡುವುದರ ಮೂಲಕ ಬಾಕಿ ಕೆಲಸವನ್ನು ಕಡಿಮೆ ಮಾಡುವುದು, ಆಂತರಿಕ ಮೇಲ್ವಿಚಾರಣೆ ಕಾರ್ಯವಿಧಾನಗಳನ್ನು ಉನ್ನತೀಕರಣಗೊಳಿಸುವುದು ಹಾಗೂ ಸ್ವಚ್ಛತೆಯ ಕುರಿತು ಸಿಬ್ಬಂದಿಗೆ ಜಾಗೃತಿ ಮೂಡಿಸುವುದರ ಜೊತೆಗೆ ತರಬೇತಿ ನೀಡಲಾಗುವುದು. ಆ ಮೂಲಕ ಸಾರ್ವಜನಿಕರಿಗೆ ಕಡಿಮೆ ಸಮಯದಲ್ಲಿ ಉತ್ತಮ ಸೇವೆ ಒದಗಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಯಶೋವರ್ಧನ್ ಶ್ರೀ ವಾಸ್ತವ ತಿಳಿಸಿದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಇದೇ 29ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಬಿಟಿಎಂ ವಿದ್ಯುತ್ ವಿತರಣಾ ಕೇಂದ್ರದ ಸ್ಥಳಗಳು: ಕಾವೇರಿನಗರ, ಹುಳಿಮಾವು, ಅಕ್ಷಯನಗರ, ಹೊಂಗಸಂದ್ರ, ಬಿಟಿಎಸ್ ಲೇಔಟ್, ವಿರಾಟ್ ನಗರ, ಕಾಳೇನ ಅಗ್ರಹಾರ, ವೇಗ ಸಿಟಿ, ಅರೆಕೆರೆ ಬಿಡಿಎ, ನ್ಯಾನಪ್ಪನಹಳ್ಳಿ, ಸತ್ಯಸಾಯಿ ಬಿಡಿಎ, ಕೋಡಿಚಿಕ್ಕನಹಳ್ಳಿ, ವಿಜಯ ಬ್ಯಾಂಕ್ ಲೇಔಟ್, ವಿಶ್ವಪ್ರಿಯ ಲೇಔಟ್, ಮತ್ತು ಸುತ್ತಮುತ್ತಲಿನ ಸ್ಥಳಗಳು.

ಸೌದೇಲ ಎಂ.ಯು.ಎಸ್.ಎಸ್ ವಿತರಣಾ ಕೇಂದ್ರ ಸ್ಥಳಗಳು: ವಿಶ್ವಪ್ರಿಯ ಲೇಔಟ್, ಬೇಗೂರು ಕೊಪ್ಪ ರಸ್ತೆ, ದೇವರಚಿಕ್ಕನಹಳ್ಳಿ, ಅಕ್ಷಯನಗರ, ದಕ್ಷಿಣದ ಪ್ರೆಸ್ಟೀಜ್ ಸಾಂಗ್, ತೇಜಸ್ವಿನಿ ನಗರ, ಹಿರ್ನಾದಾನಿ ಅಪಾರ್ಟ್‌ಮೆಂಟ್.

ಡಿ.ಎಲ್.ಎಫ್ (ಅನ್ನಾಬೆಲ್) ವಿತರಣಾ ಕೇಂದ್ರದ ಸ್ಥಳಗಳು: ಡಿ.ಎಲ್.ಎಫ್ ಅಪಾರ್ಟ್‌ಮೆಂಟ್, ಬೇಗೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ದೇವಾಂಗ ಸಂಘದಿಂದ 2021-22ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇಕಡ 90ರಷ್ಟು ಅಂಕ ಗಳಿಸಿದ, ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ರ‍್ಯಾಂಕ್ ಅಥವಾ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು, ಪಿಎಚ್.ಡಿ. ಪಡೆದವರು, ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳಲ್ಲಿ ಆಯ್ಕೆಯಾದ ಅರ್ಹ ದೇವಾಂಗ ಸಮಾಜದ ಅಭ್ಯರ್ಥಿಗಳು ನ. 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 080–22221608, 080–41245064 ಸಂಪರ್ಕಿಸಿ.

'ಜಿ. ನಾರಾಯಣ ಶತಮಾನೋತ್ಸವ ರಾಜ್ಯಮಟ್ಟದಲ್ಲಿ ಆಯೋಜಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡಾ ಜಿ. ನಾರಾಯಣ ಶತಮಾನೋತ್ಸವವನ್ನು ರಾಜ್ಯಮಟ್ಟದಲ್ಲಿ ಆಯೋಜಿಸಬೇಕು. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ನಗರ ಕಲ್ಯಾಣ ವಿಷಯದಲ್ಲಿ ಜಿ.ನಾರಾಯಣ ಅವರ ಅಧ್ಯಯನ ಪೀಠ ಸ್ಥಾಪಿಸಬೇಕು' ಎಂದು ಸಮಿತಿಯ ಅಧ್ಯಕ್ಷ ಎಂ. ನರಸಿಂಹ ಮತ್ತು ಗೌರವಾಧ್ಯಕ್ಷರಾದ ಹಂ.ಪ. ನಾಗರಾಜಯ್ಯ ಒತ್ತಾಯಿಸಿದರು.

'ಬಿಬಿಎಂಪಿ ಕಚೇರಿಯ ಮುಂಭಾಗದಲ್ಲಿ ಜಿ. ನಾರಾಯಣ ಅವರ ಕಂಚಿನ ಪ್ರತಿಮೆ ಸ್ಥಾಪಿಸಬೇಕು. ಪ್ರತಿವರ್ಷ ನಾಗರಿಕ ಅಭಿವೃದ್ಧಿ ಕಾರ್ಯಗಳಲ್ಲಿ ಸಾಧನೆ ಮಾಡಿದ ಬಿಬಿಎಂಪಿ ಸದಸ್ಯರಿಗೆ ಜಿ.ನಾರಾಯಣ ಸ್ಮಾರಕ ಪ್ರಶಸ್ತಿ ಮತ್ತು ದೊಡ್ಡ ಮೊತ್ತದ ಗೌರವಧನ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಈಗಾಗಲೇ ಬಿಬಿಎಂಪಿ ಕೈಗೊಂಡಿರುವ ನಿರ್ಣಯದಂತೆ ಕಲಾಸಿಪಾಳ್ಯ ಬಸ್ ನಿಲ್ದಾಣಕ್ಕೆ ಜಿ. ನಾರಾಯಣ ಅವರ ಹೆಸರನ್ನು ನಾಮಕಾರಣ ಮಾಡಿ ಅವರ ಪ್ರತಿಮೆ ಸ್ಥಾಪಿಸಬೇಕು. ಇದನ್ನು ನವೆಂಬರ್ ತಿಂಗಳಲ್ಲೇ ಅನುಷ್ಠಾನಗೊಳಿಸಬೇಕು' ಎಂದು ಆಗ್ರಹಿಸಿದರು.

'ಬೆಂಗಳೂರು ನಗರದ ಮಹಾಪೌರರಾಗಿ ಬಿಬಿಎಂಪಿಯಿಂದ ಶಾಲಾ– ಕಾಲೇಜುಗಳನ್ನು ತೆರೆದರು, ಆಸ್ಪತ್ರೆಗಳನ್ನು ನವೀಕರಿಸಿದರು. ಬೆಟರ್ ರೋಡ್ ಸ್ಕೀಮ್ ಜಾರಿಗೊಳಿಸಿ ನಗರದ ರಸ್ತೆಗಳನ್ನು ಸಂಚಾರಯೋಗ್ಯವನ್ನಾಗಿಸಿದರು. ಕಾವೇರಿ ನೀರು ನಗರಕ್ಕೆ ಹರಿಸಿದ ಯಶಸ್ಸು ಜಿ. ನಾರಾಯಣ ಅವರಿಗೆ ಸಲ್ಲುತ್ತದೆ' ಎಂದು ಮಾಹಿತಿ ನೀಡಿದರು.

ಸಮಿತಿಯ ಅಧ್ಯಕ್ಷ ಎಂ. ನರಸಿಂಹ ಮಾತನಾಡಿ, 'ನಾಡೋಜ ಡಾ.ಜಿ. ನಾರಾಯಣ ಪ್ರತಿಷ್ಠಾನ, ಭಾರತೀಯ ಕನ್ನಡ ಪ್ರತಿಷ್ಠಾನ ಮತ್ತು ಸುವರ್ಣಜ್ಯೋತಿ ಟ್ರಸ್ಟ್ ಸಹಯೋಗದಲ್ಲಿ ಜಿ. ನಾರಾಯಣ ಶತಮಾನೋತ್ಸವ ಸಮಿತಿ ರಚಿಸಲಾಗಿದೆ. ಸಾಹಿತಿ ಹಂ.ಪ ನಾಗರಾಜಯ್ಯ ಅವರನ್ನು ಸಮಿತಿಯ ಗೌರವಾಧ್ಯಕ್ಷರನ್ನಾಗಿ ಮಾಡಲಾಗಿದೆ' ಎಂದು ಹೇಳಿದರು.

ಜಿ. ನಾರಾಯಣ ಅವರ ತವರು ಜಿಲ್ಲೆಯಾದ ಮಂಡ್ಯದಲ್ಲಿ ಅ. 30ರಂದು ಜನ್ಮಶತಮಾನೋತ್ಸವ ಅಂಗವಾಗಿ ವರ್ಷದ ಮೊದಲ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು ಸಚಿವ ಕೆ. ಗೋಪಾಲಯ್ಯ ಉದ್ಘಾಟನೆ ಮಾಡಲಿದ್ದು, ಶಾಸಕ ಡಿ.ಸಿ. ತಮ್ಮಣ್ಣ, ಎಂ. ಶ್ರೀನಿವಾಸ್, ಭಾಗವಹಿಸಲಿದ್ದಾರೆ ಎಂದರು.

ಕುಲಾಂತರಿ ಸಾಸಿವೆಗೆ ಅಸ್ತು

ಒಂದನೇ ಪುಟದಿಂದ...

ಭಾರತ ಶೇ 70ರಷ್ಟು ಖಾದ್ಯತೈಲವನ್ನು ರಷ್ಯಾ, ಉಕ್ರೇನ್, ಇಂಡೊನೇಷ್ಯಾ ಸೇರಿದಂತೆ ವಿವಿಧ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ.

ಖಾದ್ಯ ತೈಲದಲ್ಲಿ ಸ್ವಾವಲಂಬನೆ ಸಾಧಿಸಲು ದೇಶೀಯವಾಗಿ ಎಣ್ಣೆಬೀಜ ಉತ್ಪಾದನೆ ಹೆಚ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅವರು ರೈತರಿಗೆ ಪದೇ ಪದೇ ಕರೆ ನೀಡುತ್ತಿದ್ದು, 2014ರಿಂದಲೂ ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಆದ್ಯತೆ ನೀಡಿತ್ತು.

ಎರಡು ದಶಕಗಳ ಹಿಂದೆ ವಾಜಪೇಯಿ ನೇತೃತ್ವದ ಸರ್ಕಾರ ಬಿ.ಟಿ ಹತ್ತಿ ಬೆಳೆಯಲು ಅನುಮತಿ ನೀಡಿತ್ತು. ಇದರ ಪರಿಣಾಮ ಇಂದು ದೇಶದಲ್ಲಿ ಬೆಳೆಯುತ್ತಿರುವ ಹತ್ತಿಯಲ್ಲಿ ಬಿ.ಟಿ ಹತ್ತಿಯ ಪಾಲು ಶೇ 95ರಷ್ಟಿದೆ. 2002ರಲ್ಲಿ 13 ದಶಲಕ್ಷ ಬೇಲ್ ಹತ್ತಿ ಉತ್ಪಾದಿಸಲಾಗುತ್ತಿತ್ತು. 2021ರ ವೇಳೆಗೆ 35 ದಶಲಕ್ಷ ಬೇಲ್‌ಗೆ ಇದು ಏರಿದೆ.

ಬಾಣಸವಾಡಿ ಕೆರೆ ಒತ್ತುವರಿ ತೆರವು ಆರಂಭ

ಒಂದನೇ ಪುಟದಿಂದ...

'ದೇವಸ್ಥಾನ– 6.12 ಗುಂಟೆ, ಪೆಟ್ರೋಲ್ ಬಂಕ್, ಸರ್ವೀಸ್ ಸ್ಟೇಷನ್, ವಾಣಿಜ್ಯ ಮಳಿಗೆಗಳು ಮತ್ತು ಕಟ್ಟಡಗಳು ಸೇರಿ 1 ಎಕರೆ 28.9 ಗುಂಟೆ ಒತ್ತುವರಿಯಾಗಿದೆ ಎಂದು ಬಿಬಿಎಂಪಿ ವರದಿ ಮಾಡಿದೆ. ಸುಮಾರು 79 ಪ್ರಕರಣಗಳಲ್ಲಿ ಒತ್ತುವರಿಯಾಗಿದೆ. ಇದನ್ನೆಲ್ಲ ತೆರವು ಮಾಡಲಾಗುತ್ತದೆ' ಎಂದು ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ತಿಳಿಸಿದರು.

ಒಂದು ಭಾಗದಲ್ಲಿ ನರ್ಸರಿ ಹಾಗೂ ನಿರ್ಮಾಣವಾಗುತ್ತಿದ್ದ ಮೂರು ವಾಣಿಜ್ಯ ಮಳಿಗೆಗಳನ್ನು ಗುರುವಾರ ತೆರವು ಮಾಡಲಾಗಿದೆ. ಉಳಿದ ಒತ್ತುವರಿಯನ್ನು ಗುರುತು ಮಾಡಲಾಗಿದೆ.

ವಾಣಿಜ್ಯ ಮಳಿಗೆಗಳನ್ನು ಗುರುವಾರ ಜೆಸಿಬಿ ಮೂಲಕ ತೆರವುಗೊಳಿಸಲಾಯಿತು

ಶುಕ್ರವಾರದಿಂದ ಎಲ್ಲವನ್ನೂ ತೆರವು ಮಾಡಲಾಗುತ್ತದೆ ಎಂದು ಅವರು ಹೇಳಿದರು.

'ಕಾಣದ ಕೈಗಳಿಂದ ತಡೆ...'

'ಬಾಣಸವಾಡಿ ಕೆರೆ ಅಂಗಳದಲ್ಲಿ ಒತ್ತುವರಿಯಾಗಿರುವ ಎಲ್ಲ ರೀತಿಯ ಕಟ್ಟಡವನ್ನೂ ತೆರವು ಮಾಡಬೇಕು ಎಂದು ಶಾಸಕ ಕೆ.ಜೆ. ಜಾರ್ಜ್ ಸೂಚಿಸಿದ್ದಾರೆ. ಆದರೆ, ಅವರದ್ದೇ ಕಚೇರಿಯ ಕೆಲವರು ಎಲ್ಲ ಒತ್ತುವರಿ ತೆರವು ಮಾಡದಂತೆ ಅಧಿಕಾರಿಗಳ ಮೇಲೆ ಒತ್ತಡ ಹಾಕುತ್ತಿದ್ದಾರೆ. ಹೀಗಾಗಿ, ಕೆಲವು ಒತ್ತುವರಿಯನ್ನು ಮಾತ್ರ ತೆರವು ಮಾಡಿ, ಅಧಿಕಾರಿಗಳು ಸುಮ್ಮನಾಗುವ ಹಂತದಲ್ಲಿದ್ದಾರೆ. 79 ಕಟ್ಟಡ ತೆರವು ಮಾಡುತ್ತೇವೆ ಎಂದು ಹೇಳುವ ಅಧಿಕಾರಿಗಳು ಒಂದೇಒಂದು ಜೆಸಿಬಿ ತಂದಿದ್ದಾರೆ. ತೆರವು ಕಾರ್ಯಾಚರಣೆಯಲ್ಲಿ ಸಾಕಷ್ಟು ವಿಳಂಬ ಮಾಡುತ್ತಿದ್ದಾರೆ. ದೇವಸ್ಥಾನ, ಪೆಟ್ರೋಲ್ ಬಂಕ್ ಹಾಗೂ ದೊಡ್ಡ ಕಟ್ಟಡಗಳನ್ನು ತೆರವು ಮಾಡುತ್ತಿಲ್ಲ' ಎಂದು ಸ್ಥಳೀಯರಾದ ಲೋಕೇಶ್ ಹಾಗೂ ಸತೀಶ್ ರೆಡ್ಡಿ ದೂರಿದರು.

ವಿ.ವಿಯಲ್ಲಿ ತ್ಯಾಜ್ಯ ಸಂಸ್ಕರಣೆ ಘಟಕ ಸ್ಥಾಪನೆಗೆ ಹಿಂದೇಟು • ಸ್ಯಾನಿಟರಿ ಪ್ಯಾಡ್‌ಗಳ ನಿರ್ವಹಣೆಗೆ ಇಲ್ಲದ ಯಂತ್ರ

ಜ್ಞಾನಭಾರತಿ ಆವರಣದಲ್ಲಿ ಕಸಕ್ಕೆ ಬೆಂಕಿ

• ಆರ್. ಮಂಜುನಾಥ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಎಲ್ಲೆಂದರೆ ಅಲ್ಲಿ ಕಸವನ್ನು ಸುಡಲಾಗುತ್ತಿದೆ. ತ್ಯಾಜ್ಯ ಸಂಗ್ರಹಕ್ಕಾಗಿ ನಿರ್ಮಿಸಿರುವ ತೊಟ್ಟಿಯಲ್ಲಿ ವಿಂಗಡಿಸಲಾಗದ ಕಸಕ್ಕೆ ಬೆಂಕಿ ಹಚ್ಚಲಾಗುತ್ತಿದೆ.

ಜ್ಞಾನಭಾರತಿ ಆವರಣದಲ್ಲಿ ನಿತ್ಯ ನೂರಾರು ಪ್ರಾಧ್ಯಾಪಕರು ಬೋಧಿಸಲು, ಸಾವಿರಾರು ವಿದ್ಯಾರ್ಥಿಗಳು ಕಲಿಯಲು ದಿನಪೂರ್ತಿ ಈ ಪರಿಸರದಲ್ಲಿರುತ್ತಾರೆ. ಆದರೆ, ಕಸ ಹರಡಿರುವ ಬಗ್ಗೆ, ಎಲ್ಲೆಂದರಲ್ಲಿ ಚೆಲ್ಲಿರುವ ಬಗ್ಗೆ, ಬೆಂಕಿ ಹಚ್ಚುತ್ತಿರುವ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಅಷ್ಟೇ ಅಲ್ಲ, ತ್ಯಾಜ್ಯ ಸಂಸ್ಕರಣೆ ವ್ಯವಸ್ಥೆ ಅಳವಡಿಸಿಕೊಳ್ಳಲು ಬಿಬಿಎಂಪಿ ಒಂದೂವರೆ ವರ್ಷದಿಂದ ನೋಟಿಸ್ ನೀಡಿದ್ದರೂ ವಿವಿ ಆಡಳಿತ ವ್ಯವಸ್ಥೆ ಪ್ರತಿಕ್ರಿಯಿಸಿಲ್ಲ.

ವಿವಿ ಆವರಣದಲ್ಲಿ ಒಂಬತ್ತು ವಿದ್ಯಾರ್ಥಿನಿಲಯಗಳಿವೆ. ಇದಲ್ಲದೆ, ಆಡಳಿತ ಘಟಕ ಸೇರಿ ಬೋಧನೆಯ ಹಲವು ವಿಭಾಗಗಳಿವೆ. ಇಲ್ಲೆಲ್ಲ ಸಾಕಷ್ಟು ತ್ಯಾಜ್ಯ ಸಂಗ್ರಹಣೆಯಾಗುತ್ತದೆ. ಇದನ್ನು ವಿಂಗಡಣೆ ಮಾಡುತ್ತಿಲ್ಲ. ವಿದ್ಯಾರ್ಥಿನಿಯರ ಹಾಸ್ಟೆಲ್‌ಗಳಲ್ಲಿ ಸ್ಯಾನಿಟರಿ ಪ್ಯಾಡ್‌ಗಳ ನಿರ್ವಹಣೆಗೆ ಒಂದು ಯಂತ್ರವನ್ನೂ ಅಳವಡಿಸಿಲ್ಲ. ಹಲವು ವಿಭಾಗಗಳಲ್ಲಿ ತ್ಯಾಜ್ಯವನ್ನು ಹಾಕಲು ಒಂದು ಬುಟ್ಟಿಯನ್ನೂ ಪ್ರಾಧ್ಯಾಪಕರೇ ಇಟ್ಟುಕೊಂಡಿಲ್ಲ. ಇನ್ನು ವಿದ್ಯಾರ್ಥಿಗಳಿಗೆ ಕಸ ವಿಂಗಡಣೆ, ಅದರ ನಿರ್ವಹಣೆ ಬಗ್ಗೆ ಹೇಳಿಕೊಡುವವರು ಯಾರು ಎಂಬ ಪ್ರಶ್ನೆ ಸ್ಥಳೀಯರದ್ದಾಗಿದೆ.

ಬೆಂಗಳೂರು ವಿ.ವಿ ಆವರಣದಲ್ಲಿ ನಿರ್ಮಿಸಿರುವ ತೊಟ್ಟಿಯಲ್ಲಿ ಸುಟ್ಟಿರುವ ಕಸ

'ಅಜ್ಞಾನ ಭಾರತಿ' ಎನ್ನುತ್ತೇವೆ...

'ವಿದ್ಯಾರ್ಥಿನಿಲಯಗಳ ಬಳಿ ಕಸ ಚೆಲ್ಲುತ್ತಿದ್ದಾರೆ. ಎಲ್ಲೆಂದರಲ್ಲಿ ಕಸ ಎಸೆಯಲಾಗುತ್ತಿದೆ. ವಿದ್ಯಾರ್ಥಿಗಳಿಗೆ ತ್ಯಾಜ್ಯದ ಅರಿವು ಇಲ್ಲ. ಪ್ರಾಧ್ಯಾಪಕರೂ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಿಲ್ಲ. ಮದ್ಯದ ಬಾಟಲಿಗಳು, ಅದರ ಪ್ಯಾಕೆಟ್‌ಗಳು ಎಲ್ಲವೂ ಇಲ್ಲಿವೆ. ಅಲ್ಲಲ್ಲೇ ಬೆಂಕಿ ಹಚ್ಚುತ್ತಿದ್ದಾರೆ. ಈ ಆವರಣದಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ವಿಂಗಡಿಸುತ್ತಿಲ್ಲ. ಸಂಸ್ಕರಣೆ ಮಾಡುತ್ತಿಲ್ಲ. ತ್ಯಾಜ್ಯ ಎನ್ನುವುದು ಯಾವುದೂ ಇಲ್ಲ. ನಮ್ಮ ತಲೆಯಲ್ಲಿ ಇರುವ ತ್ಯಾಜ್ಯವನ್ನು ಹೊರಹಾಕಬೇಕು. ಮಕ್ಕಳಿಗೆ ಇವರು ಏನು ಜ್ಞಾನ ನೀಡುತ್ತಿದ್ದಾರೆ, ಕಸದ ಆವರಣದಲ್ಲಿ ಯಾವ ರೀತಿಯ ಶಿಕ್ಷಣವನ್ನು ಸಿಗುತ್ತಿದೆ ಎಂಬ ಪ್ರಶ್ನೆ ಮೂಡುತ್ತದೆ. ಇದನ್ನು 'ಅಜ್ಞಾನ ಭಾರತಿ' ಎಂದೇ ನಾವು ಕರೆಯುತ್ತೇವೆ. ಅಷ್ಟು ಅವ್ಯವಸ್ಥೆ ಇಲ್ಲಿದೆ. ಕಸ ಇದೆ ಎಂದು ಚಿತ್ರ ಕಳುಹಿಸಿದರೆ ಬೆಂಕಿ ಹಚ್ಚಿ ಸುಟ್ಟು ಅದರ ಫೋಟೊ ಕಳುಹಿಸುತ್ತಾರೆ' ಎಂದು ಜ್ಞಾನಭಾರತಿ ವಾಯುವಿಹಾರಿಗಳ ಸಂಘದ ಕಾರ್ಯದರ್ಶಿ ಗೌಡಯ್ಯ ಆಕ್ರೋಶ ವ್ಯಕ್ತಪಡಿಸಿದರು.

'ಚರ್ಚಿಸಿ ಕ್ರಮ'

'ತ್ಯಾಜ್ಯ ಸಂಸ್ಕರಣೆ ಘಟಕದ ಸಂಬಂಧ ಬಿಬಿಎಂಪಿ ನೋಟಿಸ್ ಕೊಟ್ಟಿರುವುದು ನಿಜ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಆಗಿಲ್ಲ. ಕುಲಪತಿಯವರೊಂದಿಗೆ ಚರ್ಚೆ ನಡೆಸಿ ಕ್ರಮ ಕೈಗೊಳ್ಳುತ್ತೇವೆ. ಆವರಣದಲ್ಲಿ ತ್ಯಾಜ್ಯಕ್ಕೆ ಬೆಂಕಿ ಹಚ್ಚುತ್ತಿಲ್ಲ. ಬಿಬಿಎಂಪಿಯವರು ಒಂದು ಗಾಡಿ ಕೊಟ್ಟಿದ್ದರು. ಇನ್ನೊಂದು ಕೊಡಿ ಎಂದು ಕೇಳಿದ್ದೇವೆ. ಸಾರ್ವಜನಿಕ ರಸ್ತೆಯಲ್ಲಿ ಸಂಗ್ರಹವಾಗುವ ಕಸಕ್ಕೆ ನಾವು ಜವಾಬ್ದಾರಿ ಅಲ್ಲ' ಎಂದು ಬೆಂಗಳೂರು ವಿವಿ ಕುಲಸಚಿವ ಕೊಟ್ರೇಶ್ ಪ್ರತಿಕ್ರಿಯಿಸಿದರು.

'ಬೋಧನೆಗಷ್ಟೇ ಸೀಮಿತ...'

'ವಿವಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಸ್ನಾತಕೋತ್ತರ ಪದವಿ ಕೋರ್ಸ್ ಇದೆ. ಆವರಣವನ್ನು ಕಸಮಯವಾಗಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಏನು ಪಾಠ ಮಾಡುತ್ತಾರೆ? ಆವರಣದಲ್ಲೇ ಒಂದು ಘಟಕ ಸ್ಥಾಪಿಸಿ, ತ್ಯಾಜ್ಯವನ್ನು ಸಂಪನ್ಮೂಲವಾಗಿ ಪರಿವರ್ತಿಸಿ, ಎಲ್ಲವೂ ಸಾಧ್ಯ ಎಂಬುದನ್ನು ಮಾದರಿಯಾಗಿ ಎಲ್ಲರಿಗೂ ತೋರಿಸಬಹುದು ಅಲ್ಲವೇ? ಪುಸ್ತಕದಲ್ಲಿ ಮಾತ್ರ ಓದಿ, ಪರೀಕ್ಷೆಯಲ್ಲಿ ಅದನ್ನು ಬರೆದು, ಪದವಿ ಪಡೆಯಿರಿ ಎಂಬುದಕ್ಕೆ ಸೀಮಿತವಾದರೆ, ಆ ಪದವಿ ಪ್ರಯೋಜನಕ್ಕೆ ಬರುವುದಿಲ್ಲ. ಸ್ವಚ್ಛತೆ ಮನೆ, ಶಾಲೆಯಲ್ಲಿ ಮೊದಲು ಆರಂಭವಾಗಬೇಕು. ನನ್ನ ಕಸ ನನ್ನ ಜವಾಬ್ದಾರಿ ಎಂಬ ಅರಿವು ಪ್ರತಿಯೊಬ್ಬನಲ್ಲಿ ಬರಬೇಕು' ಎಂದು ಉಸಿರು ಫೌಂಡೇಷನ್ ಶೋಭಾ ಭಟ್ ಅಭಿಪ್ರಾಯಪಟ್ಟರು.

ಬೆಂಗಳೂರು ವಿವಿಯ ಪರಿಸರ ವಿಜ್ಞಾನ ವಿಭಾಗದ ಫಲಕದ ಕೆಳಗೇ ತ್ಯಾಜ್ಯದ ರಾಶಿ

ಪ್ರಜಾವಾಣಿ ವಿಶೇಷ

ಒಣತ್ಯಾಜ್ಯವನ್ನು ಸಂಸ್ಕರಿಸಿ ಮರುಬಳಕೆ ಮಾಡಬೇಕು. ಹಸಿ ಕಸವನ್ನು ಗೊಬ್ಬರವನ್ನಾಗಿಸಬೇಕು. ಸರ್ಕಾರದ ಆದೇಶದಂತೆ ಇದಕ್ಕಾಗಿ ಘಟಕವನ್ನು ವಿವಿ ಆವರಣದಲ್ಲಿ ಸ್ಥಾಪಿಸಿಕೊಳ್ಳಬೇಕು' ಎಂದು ರಾಜ್ಯ ಸರ್ಕಾರ, ಪರಿಸರ ಇಲಾಖೆಯ ಆದೇಶಗಳನ್ನು ಉಲ್ಲೇಖಿಸಿ ವಿವಿ ಕುಲಸಚಿವರಿಗೆ 2021ರ ಏಪ್ರಿಲ್‌ನಿಂದ 2022ರ ಸೆ.9ರವರೆಗೆ ಹಲವು ನೋಟಿಸ್‌ಗಳನ್ನು ಬಿಬಿಎಂಪಿ ನೀಡಿದೆ. ಆದರೂ ವಿವಿ ಕುಲಸಚಿವರು ಪ್ರತಿಕ್ರಿಯಿಸಿಲ್ಲ.

'ಬೆಂಗಳೂರಿನಲ್ಲಿ ತ್ಯಾಜ್ಯ ವಿಂಗಡಣೆ, ಸಂಸ್ಕರಣೆ, ರಾಜಕಾಲುವೆ ನಿರ್ವಹಣೆ ಸೇರಿ ಹಲವು ನಾಗರಿಕ ಸೌಲಭ್ಯಗಳ ಅಭಿವೃದ್ಧಿಗೆ ಬೆಂಗಳೂರು ವಿಶ್ವವಿದ್ಯಾಲಯದ ಹಲವು ಅಧ್ಯಾಪಕರು ಸಮಿತಿಗಳಲ್ಲಿ ಸಲಹೆ ನೀಡುತ್ತಾರೆ. ಸಾಕಷ್ಟು ಕಾರ್ಯಕ್ರಮಗಳಲ್ಲಿ ಭಾಷಣ ಮಾಡುತ್ತಾರೆ. ಆದರೆ, ವಿವಿ ಆವರಣವೇ ಕಸಮಯವಾಗಿದೆ. ತ್ಯಾಜ್ಯಕ್ಕೆ ಬೆಂಕಿ ಹಚ್ಚುತ್ತಿದ್ದಾರೆ. ಈ ಬಗ್ಗೆ ಯಾರೂ ಚಕಾರ ಎತ್ತುತ್ತಿಲ್ಲ. ಹತ್ತಾರು ಪದವಿ, ಡಾಕ್ಟರೇಟ್ ಪಡೆದರೇನು ಪ್ರಯೋಜನ? ವಿದ್ಯಾರ್ಥಿಗಳಿಗೆ ಮಾದರಿ ಶಿಕ್ಷಣ ನೀಡಬೇಕು. ವಿವಿ ಆವರಣದಲ್ಲಿ ಅದನ್ನು ಪಾಲಿಸಬೇಕು' ಎಂದು ವಾಯುವಿಹಾರಿಗಳ ಸಂಘದ ಸದಸ್ಯರು ಆಗ್ರಹಿಸಿದರು.

ದಂಡ: 'ಹೆಚ್ಚು ತ್ಯಾಜ್ಯ ಉತ್ಪಾದನೆಯಾಗುವ ಸಂಸ್ಥೆಗಳಲ್ಲಿ ಸಂಸ್ಕರಣೆ ಘಟಕ ಸ್ಥಾಪಿಸಬೇಕು ಎಂಬ ಕಾನೂನು ಇದೆ. ಈ ಬಗ್ಗೆ ಸರ್ಕಾರದ ಆದೇಶದಂತೆ ಬೆಂಗಳೂರು ವಿವಿಗೆ ನೋಟಿಸ್ ನೀಡಿದ್ದೇವೆ. ಮುಖ್ಯ ಆಯುಕ್ತರೂ ನೋಟಿಸ್ ನೀಡಿದ್ದಾರೆ. ಅವರು ಏನೂ ಕ್ರಮ ಕೈಗೊಂಡಿಲ್ಲ. ಕಾನೂನು ಪ್ರಕಾರ ಮುಂದುವರಿಯಲಾಗುತ್ತದೆ. ಆವರಣದಲ್ಲಿ ಕಸಕ್ಕೆ ಬೆಂಕಿ ಹಚ್ಚಿರುವುದು ಗಮನಕ್ಕೆ ಬಂದಿದೆ. ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ರಾಜರಾಜೇಶ್ವರಿನಗರ ವಲಯದ ಜಂಟಿ ಆಯುಕ್ತ ನಾಗರಾಜ್ ತಿಳಿಸಿದರು.

ಆರೇಳು ತಿಂಗಳಿನಲ್ಲಿ ಥೀಮ್ ಪಾರ್ಕ್ ಕಾಮಗಾರಿಗಳು ಪೂರ್ಣ: ಸಚಿವ ಅಶ್ವತ್ಥನಾರಾಯಣ

'ಕೆಂಪೇಗೌಡರ ಪ್ರತಿಮೆ ರಾಜ್ಯದ ಹೆಗ್ಗುರುತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಪ್ರಗತಿ ಪ್ರತಿಮೆಯು ರಾಜ್ಯದ ಹೆಗ್ಗುರುತಾಗಲಿದೆ ಎಂದು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿನ 23 ಎಕರೆ ವಿಸ್ತೀರ್ಣದಲ್ಲಿ ಕೆಂಪೇಗೌಡ ಥೀಮ್ ಪಾರ್ಕ್ ಹಾಗೂ ₹64 ಕೋಟಿ ವೆಚ್ಚದಲ್ಲಿ 108 ಅಡಿ ಎತ್ತರದ ಕೆಂಪೇಗೌಡರ ಪ್ರತಿಮೆಯು ಮುಂದಿನ ದಿನಗಳಲ್ಲಿ ವಿಶೇಷ ಆಕರ್ಷಣೆಯ ಕೇಂದ್ರವಾಗಲಿದೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದರು.

'ಪ್ರಜಾವಾಣಿ' ಕಚೇರಿಗೆ ಗುರುವಾರ ಭೇಟಿ ನೀಡಿದ್ದ ಅವರು, ಈ ಯೋಜನೆಯ ವಿವರಗಳನ್ನು ಹಂಚಿಕೊಂಡರು.

'ಕೆಂಪೇಗೌಡರ ಪ್ರತಿಮೆಯನ್ನು ಸ್ಥಾಪಿಸಬೇಕು ಎಂಬ ಉದ್ದೇಶ ಹಿಂದಿನ ಸರ್ಕಾರಗಳಿಗೆ ಇದ್ದರೂ ಎಲ್ಲಿ ನಿರ್ಮಿಸಬೇಕು ಎಂಬುದು ತೀರ್ಮಾನವಾಗಿರಲಿಲ್ಲ. ನಮ್ಮ ಸರ್ಕಾರದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಬಳಿ ಈ ಪ್ರಸ್ತಾವನೆ ಮುಂದಿಟ್ಟಾಗ, ಒಪ್ಪಿಗೆ ಕೊಟ್ಟ ಅವರು ಜವಾಬ್ದಾರಿಯನ್ನೂ ವಹಿಸಿದರು. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಥೀಮ್ ಪಾರ್ಕ್ ನಿರ್ಮಿಸುವುದಕ್ಕೆ ಅನುಮೋದನೆ ಕೊಟ್ಟರು' ಎಂದರು.

'ನಿರ್ಮಾಣಗೊಂಡಿರುವ ಕೆಂಪೇಗೌಡರ ಪ್ರತಿಮೆಯಲ್ಲಿ ಖಡ್ಗವು ಒರೆಯಿಂದ ಹೊರಗೆ ಬಂದ ಸ್ಥಿತಿಯಲ್ಲಿ ಇದೆ. ಎತ್ತಿನ ಬಂಡಿಯ ಪರಿಕಲ್ಪನೆಯನ್ನೂ ಅಲ್ಲಿ ಅಳವಡಿಸಿದ್ದೇವೆ. ಭೂದೃಶ್ಯಗಳಲ್ಲಿ ಕೆಂಪೇಗೌಡರು ಕೆರೆ ಕಟ್ಟೆಗಳನ್ನು ನಿರ್ಮಿಸಿರುವುದಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದೇವೆ. ಆರೇಳು ತಿಂಗಳಿನಲ್ಲಿ ಥೀಮ್ ಪಾರ್ಕ್ ಕಾಮಗಾರಿಗಳು ಮುಗಿಯಲಿವೆ' ಎಂದರು.

'ಆಧುನಿಕ ತಂತ್ರಜ್ಞಾನದ ಆವಿಷ್ಕಾರವಾಗಿರುವ ಮೆಟಾವರ್ಸ್ ಅನ್ನೂ ಈ ಯೋಜನೆಯಡಿ ಅಳವಡಿಸಲಿದ್ದೇವೆ. ಅದು ವರ್ಚುಯಲ್ ಅನುಭವವನ್ನು ನೀಡುತ್ತದೆ. ಆ ತಂತ್ರಜ್ಞಾನದ ಮೂಲಕ ಕೆಂಪೇಗೌಡರನ್ನು ನಿಜರೂಪದಲ್ಲಿಯೇ ಕಾಣಬಹುದು. ವಿಮಾನಗಳು ಗಗನಕ್ಕೆ ಚಿಮ್ಮುವಾಗ ಹಾಗೂ ಭೂಮಿಗೆ ಇಳಿಯುವಾಗ ಈ ಬೃಹತ್ ಪ್ರತಿಮೆಯು ಕಾಣುತ್ತದೆ' ಎಂದು ಅವರು ವಿವರಿಸಿದರು.

'ದೆಹಲಿ, ಮುಂಬೈಗಳನ್ನು ಹಿಂದಿಕ್ಕಿ ಬೆಂಗಳೂರು ಬೆಳೆದಿದೆ. 2047ಕ್ಕೆ ನಾವು ಏನು ಸಾಧನೆ ಮಾಡಬೇಕಿದೆ ಎಂದು ಪ್ರಧಾನಿ ನರೇಂದ್ರ ಮೋದಿಯವರ ಸೂಚನೆಯನ್ನು ಸಾಧಿಸುವ ದಾರಿಯಲ್ಲಿ ನಾವಿದ್ದೇವೆ. ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಸಂಸ್ಥೆಗಳು ಇಲ್ಲಿವೆ. ನಾವು ಇನ್ನಷ್ಟು ಪ್ರಯತ್ನಿಸಿದರೆ, ಕರ್ನಾಟಕ ಮಹತ್ವದ ಮೈಲಿಗಲ್ಲು ಸಾಧಿಸಲಿದೆ. ಈ ಕಾರಣಕ್ಕಾಗಿ ಕೆಂಪೇಗೌಡರ ಪ್ರತಿಮೆಗೆ ಪ್ರಗತಿಯ ಪ್ರತಿಮೆ ಎಂಬ ಹೆಸರು ಇಡಲಾಗಿದೆ' ಎಂದರು.

ಮುಖ್ಯಾಂಶಗಳು

- ಪ್ರಗತಿಯ ಪ್ರತಿಮೆ ಇದೇ 11ಕ್ಕೆ ಉದ್ಘಾಟನೆ
- ಆರೇಳು ತಿಂಗಳಿನಲ್ಲಿ ಥೀಮ್ ಪಾರ್ಕ್ ಪೂರ್ಣ
- ವಿಶೇಷ ಆಕರ್ಷಣೆಯ ಕೇಂದ್ರವಾಗುವ ವಿಶ್ವಾಸ

ಪ್ರಧಾನಿ ಜತೆ ಬೊಮ್ಮಾಯಿ ಚರ್ಚೆ

ನವೆಂಬರ್ 11 ರಂದು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡ ಅವರ ಪ್ರತಿಮೆ ಅನಾವರಣಗೊಳಿಸುವ ಕಾರ್ಯಕ್ರಮದ ಸಿದ್ಧತೆ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜತೆ ಗುರುವಾರ ವಿಡಿಯೊ ಸಂವಾದ ನಡೆಸಿದರು.

ಕಾರ್ಯಕ್ರಮದ ಪೂರ್ಣ ಮಾಹಿತಿ ಪಡೆದ ಮೋದಿ, ತಮ್ಮ ಭೇಟಿ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ಸಿದ್ಧತೆಗಳನ್ನು ನಡೆಸಿಕೊಳ್ಳುವಂತೆಯೂ ಸೂಚಿಸಿದರು ಎಂದು ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಅದೇ ಕಾರ್ಯಕ್ರಮದಲ್ಲಿ ಚೆನ್ನೈ– ಮೈಸೂರು ನಡುವೆ, ದಕ್ಷಿಣ ಭಾರತದ ಮೊದಲ ಮತ್ತು ಭಾರತದ ಐದನೇ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡಲಿದ್ದಾರೆ ಎಂದು ಅವರು ಹೇಳಿದರು.

ಪ್ರತಿಮೆ ಅನಾವರಣದ ಜತೆಗೆ ₹5,000 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಟರ್ಮಿನಲ್ 2 ರ ಉದ್ಘಾಟನೆಯೂ ನೆರವೇರಲಿದೆ. ಇದು 2.5 ಕೋಟಿ ಪ್ರಯಾಣಿಕರ ನಿರ್ವಹಣೆ ಸಾಮರ್ಥ್ಯವನ್ನು ಹೊಂದಿದೆ. ಈ ಟರ್ಮಿನಲ್‌ನಲ್ಲಿ ಉದ್ಯಾನವನವನ್ನು ಸುಂದರವಾಗಿ ವಿನ್ಯಾಸಗೊಳಿಸಲಾಗಿದೆ. ರಾಮಾಯಣ ಮತ್ತು ಮಹಾಭಾರತದಲ್ಲಿ ಉಲ್ಲೇಖಿತವಾಗಿರುವ ಸಸ್ಯಗಳನ್ನು ಗುರುತಿಸಿ ನೆಡಲಾಗಿದೆ. ನೀರಿನ ಮರುಬಳಕೆ, ವಿದ್ಯುತ್ ಬಳಕೆಯಲ್ಲಿ ಸುಸ್ಥಿರತೆಯನ್ನು ಈ ಟರ್ಮಿನಲ್ ಹೊಂದಿದೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ಈ ಸಭೆಯಲ್ಲಿ ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮ, ಐಟಿ– ಬಿಟಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣರೆಡ್ಡಿ ಮತ್ತು ಇತರ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಹಣ ಜಪ್ತಿ ಮುಚ್ಚಿಟ್ಟಿದ್ದ ಪ್ರಕರಣ ನಾಲ್ವರು ಪೊಲೀಸರ ಬಂಧನ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಜೂಜು ಅಡ್ಡೆ ಮೇಲೆ ದಾಳಿ ನಡೆಸಿ ಹಣ ವಶಪಡಿಸಿಕೊಂಡಿದ್ದ ಮಾಹಿತಿ ಮುಚ್ಚಿಟ್ಟಿದ್ದ ನಾಲ್ವರು ಪೊಲೀಸರನ್ನು ಬಂಧಿಸಲಾಗಿದೆ.

ಪಟ್ಟಣ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್‌ಗಳಾದ ಮಹೇಶ್, ಅಭಿಷೇಕ್, ಮಂಜುನಾಥ ಹಾಗೂ ಶ್ರೀಕಾಂತ ಅವರನ್ನು ಕೋರ್ಟ್‌ಗೆ ಹಾಜರುಪಡಿಸಿದ್ದು, ಅವರೀಗ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ ತಿಳಿಸಿದ್ದಾರೆ.

ಅಭಿಷೇಕ್

ಮಹೇಶ್

ಶ್ರೀಕಾಂತ

ಮಂಜುನಾಥ

ಆಗಿದ್ದೇನು?: 'ದೀಪಾವಳಿ ಹಬ್ಬದ ಅಂಗವಾಗಿ ಅ. 23ರಂದು ತಡರಾತ್ರಿ ನಗರದ ಚಲುವಾದಿ ಕೇರಿಯಲ್ಲಿ ಕೆಲವರು ಜೂಜು ಆಡುತ್ತಿದ್ದರು.

ಆಗ ದಾಳಿ ನಡೆಸಿದ್ದ ಕಾನ್‌ಸ್ಟೆಬಲ್‌ಗಳು ಅವರಿಂದ ₹20 ಸಾವಿರ ನಗದು, ₹3 ಸಾವಿರ ಮೌಲ್ಯದ ಮೊಬೈಲ್ ಫೋನ್ ವಶಪಡಿಸಿಕೊಂಡಿದ್ದರು. ಆದರೆ, ಈ ಕುರಿತು ಠಾಣೆಯ ಅಧಿಕಾರಿಗಳಿಗೆ ಮಾಹಿತಿ ನೀಡಿರಲಿಲ್ಲ. ಪ್ರಕರಣವನ್ನು ದಾಖಲಿಸಿರಲಿಲ್ಲ' ಎಂದು ತಿಳಿಸಿದ್ದಾರೆ.

ಪ್ರಿಯಕರನ ಜತೆ ಸೇರಿ ಪತಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಚಂದ್ರಶೇಖರ್ (33) ಎಂಬುವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಪತ್ನಿ ಶ್ವೇತಾ (23), ಆಕೆಯ ಪ್ರಿಯಕರ ಸುರೇಶ್ ಅಲಿಯಾಸ್ ಮೂಲಿ ಸೂರಿ (26) ಎಂಬುವವರನ್ನು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಚಂದ್ರಶೇಖರ್, ಮಗ್ಗಗಳನ್ನು ಇಟ್ಟುಕೊಂಡು ನೇಕಾರಿಕೆ ಕೆಲಸ ಮಾಡುತ್ತಿದ್ದರು. ಕೊಂಡಪ್ಪ ಬಡಾವಣೆಯಲ್ಲಿ ನೆಲೆಸಿದ್ದರು. ಅ. 21 ರಂದು ರಾತ್ರಿ ಮನೆಯ ಚಾವಣಿಯಲ್ಲಿ ಚಂದ್ರಶೇಖರ್ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಕೊಲೆ ಸಂಬಂಧ ಮಾವ ಶಿವಪ್ಪ ದೂರು ನೀಡಿದ್ದರು. ಅನುಮಾನದ ಮೇರೆಗೆ ಪತ್ನಿ ಶ್ವೇತಾ ಅವರನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಪ್ರಿಯಕರನ ಜೊತೆ ಸೇರಿ ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾರೆ. ಶ್ವೇತಾ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದು, ಸುರೇಶ್‌ನನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ' ಎಂದು ತಿಳಿಸಿದರು.

ಚಂದ್ರಶೇಖರ್

ಶ್ವೇತಾ

ಸುರೇಶ್

ಇಷ್ಟವಿಲ್ಲದ ಮದುವೆಯಿಂದ ಕೋಪ: 'ಆರೋಪಿ ಶ್ವೇತಾ, ಕೊಲೆಯಾದ ಚಂದ್ರಶೇಖರ್ ಅವರ ಅಕ್ಕನ ಮಗಳು. ಎಂ.ಎಸ್ಸಿ ಪದವೀಧರೆ. ತಮ್ಮದೇ ಊರಿನ ಆರೋಪಿ ಖಾಸಗಿ ಕಂಪನಿ ಉದ್ಯೋಗಿ ಸುರೇಶ್‌ನನ್ನು ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದರು. ಈ ನಡುವೆ ಶ್ವೇತಾ ಅವರನ್ನು ವಯಸ್ಸಿನಲ್ಲಿ 10 ವರ್ಷ ಹಿರಿಯರಾದ ಚಂದ್ರಶೇಖರ್ ಜೊತೆ ಮದುವೆ ಮಾಡಲಾಗಿತ್ತು. ಇದರಿಂದ ಶ್ವೇತಾ ಕೋಪಗೊಂಡಿದ್ದರು' ಎಂದು ಪೊಲೀಸರು ಹೇಳಿದರು.

ಕಟ್ಟಿಗೆಯಿಂದ ಹೊಡೆದು ಕೊಲೆ: 'ಅ. 21ರಂದು ರಾತ್ರಿ ಶ್ವೇತಾ ಸೂಚನೆಯಂತೆ ಮನೆಗೆ ಬಂದಿದ್ದ ಸುರೇಶ್, ಮಾತನಾಡ ಬೇಕೆಂದು ಹೇಳಿ ಚಂದ್ರಶೇಖರ್ ಅವರನ್ನು ಚಾವಣಿಗೆ ಕರೆದೊಯ್ದಿದ್ದ. ಅಲ್ಲಿಯೇ ಜಗಳ ತೆಗೆದು, ಕಟ್ಟಿಗೆಯಿಂದ ತಲೆ ಹಾಗೂ ಮರ್ಮಾಂಗಕ್ಕೆ ಹೊಡೆದು ಆರೋಪಿ ಪರಾರಿಯಾಗಿದ್ದ. ತಲೆಗೆ ತೀವ್ರ ಪೆಟ್ಟು ಬಿದ್ದಿದ್ದರಿಂದ ಚಂದ್ರಶೇಖರ್ ಮೃತಪಟ್ಟಿದ್ದರು' ಎಂದು ಪೊಲೀಸರು ತಿಳಿಸಿದರು.

'ನಾನು ಎಂ.ಎಸ್ಸಿ ಪದವೀಧರೆ. ಸಂಬಂಧಿಕನೆಂಬ ಕಾರಣಕ್ಕೆ ಇಷ್ಟವಿಲ್ಲದಿದ್ದರೂ ಮದುವೆ ಮಾಡಿದರು. ಪತಿ ಜತೆ ಬಾಳಲು ಕಷ್ಟವಾಗುತ್ತಿತ್ತು. ಹೀಗಾಗಿ, ಪ್ರಿಯಕರನ ಜೊತೆ ಸೇರಿ ಕೊಲೆ ಮಾಡಿದೆ' ಎಂಬುದಾಗಿ ಶ್ವೇತಾ ವಿಚಾರಣೆ ವೇಳೆ ಹೇಳಿಕೆ ನೀಡಿರುವುದಾಗಿ ಗೊತ್ತಾಗಿದೆ.

ಅಪರಾಧ ಸುದ್ದಿ

ನಗರದಲ್ಲಿ ಪ್ರತ್ಯೇಕ ಘಟನೆ: ಇಬ್ಬರ ಸಾವು

ಬೆಂಗಳೂರು: ನಗರದ ಎರಡು ಕಡೆ ಬುಧವಾರ ರಾತ್ರಿ ಮಹಡಿಯಿಂದ ಬಿದ್ದು ಇಬ್ಬರು ಮೃತಪಟ್ಟಿದ್ದು, ಈ ಸಂಬಂಧ ಕೋಣನಕುಂಟೆ ಹಾಗೂ ಯಲಹಂಕ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಪ್ರಶಾಂತ್ ಸಿಂಗ್ (28) ಹಾಗೂ ಪ್ರೇಮಾ (48) ಮೃತರು.

'ಪಶ್ಚಿಮ ಬಂಗಾಳದ ಪ್ರಶಾಂತ್ ಸಿಂಗ್, ಸಾಫ್ಟ್‌ವೇರ್ ಕಂಪನಿ ಉದ್ಯೋಗಿ. ಪತ್ನಿ ಹಾಗೂ ಮಕ್ಕಳ ಜೊತೆ ಬನ್ನೇರುಘಟ್ಟ ರಸ್ತೆಯ ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ನೆಲೆಸಿದ್ದರು. ಪ್ರಶಾಂತ್ ನಿತ್ಯವೂ ಮದ್ಯ ಕುಡಿಯುತ್ತಿದ್ದರು. ಇದೇ ವಿಚಾರಕ್ಕಾಗಿ ದಂಪತಿ ನಡುವೆ ಜಗಳ ನಡೆಯುತ್ತಿತ್ತು' ಎಂದು ಕೋಣನಕುಂಟೆ ಪೊಲೀಸರು ಹೇಳಿದರು.

'ಇತ್ತೀಚೆಗೆ ಕೆಲಸ ಬಿಟ್ಟಿದ್ದ ಪ್ರಶಾಂತ್, ಮನೆಯಲ್ಲೇ ಇರುತ್ತಿದ್ದರು. ಬುಧವಾರ ರಾತ್ರಿ ವಿಪರೀತ ಮದ್ಯ ಕುಡಿದಿದ್ದರು. ಅದರ ಅಮಲಿನಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯದ 25ನೇ ಮಹಡಿಯಿಂದು ಬಿದ್ದು ಮೃತಪಟ್ಟಿದ್ದಾರೆ. ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಕುಟುಂಬಸ್ಥರಿಂದ ದೂರು ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಅವರು ತಿಳಿಸಿದರು.

ಎರಡನೇ ಮಹಡಿಯಿಂದ ಬಿದ್ದು ಸಾವು: 'ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಪ್ರೇಮಾ, ಯಲಹಂಕದ ಗಾಂಧಿನಗರ 2ನೇ ಮುಖ್ಯರಸ್ತೆಯ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಬುಧವಾರ ರಾತ್ರಿ ಎರಡನೇ ಮಹಡಿಯಿಂದ ಬಿದ್ದು ಮೃತಪಟ್ಟಿದ್ದಾರೆ' ಎಂದು ಯಲಹಂಕ ಪೊಲೀಸರು ಹೇಳಿದರು.

'ಪತಿಯಿಂದ ದೂರವಾಗಿದ್ದ ಪ್ರೇಮಾ, ಒಂಟಿಯಾಗಿ ವಾಸವಿದ್ದರು. ಅಕ್ಕ–ಪಕ್ಕದವರ ಜೊತೆ ಹೆಚ್ಚು ಮಾತನಾಡುತ್ತಿರಲಿಲ್ಲ. ಅವರ ಸಾವು ಆಕಸ್ಮಿಕವೋ ಅಥವಾ ಆತ್ಮಹತ್ಯೆಯೋ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ತಿಳಿಸಿದರು.

ಅಮಾನತಾಗಿದ್ದ ಇನ್‌ಸ್ಪೆಕ್ಟರ್ ಸಾವು

ಎಚ್‌.ಎಲ್. ನಂದೀಶ್

ಬೆಂಗಳೂರು: ಕರ್ತವ್ಯ ಲೋಪ ಎಸಗಿದ್ದ ಆರೋಪದಡಿ ಇತ್ತೀಚೆಗಷ್ಟೇ ಸೇವೆಯಿಂದ ಅಮಾನತಾಗಿದ್ದ ಕೆ.ಆರ್.ಪುರ ಠಾಣೆ ಇನ್‌ಸ್ಪೆಕ್ಟರ್ ಎಚ್.ಎಲ್. ನಂದೀಶ್ ಅವರು ಹೃದಯಾಘಾತದಿಂದಾಗಿ ಗುರುವಾರ ಮೃತಪಟ್ಟರು.

ಠಾಣೆ ವ್ಯಾಪ್ತಿಯಲ್ಲಿದ್ದ ಟಾನಿಕ್ ಬಾರ್ ಆ್ಯಂಡ್ ರೆಸ್ಟೋರೆಂಟ್ ತಡರಾತ್ರಿ 2 ಗಂಟೆಯವರೆಗೂ ತೆರೆದಿತ್ತು. ಸಿಸಿಬಿ ದಾಳಿ ಮಾಡಿ, ಮಾಲೀಕರು ಹಾಗೂ ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಿತ್ತು. ಅವಧಿ ಮೀರಿ ವಹಿವಾಟು ನಡೆಸುತ್ತಿದ್ದರೂ ಕ್ರಮ ಕೈಗೊಳ್ಳದೇ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಅವರನ್ನು ಕಮಿಷನರ್ ಪ್ರತಾಪ್ ರೆಡ್ಡಿ ಅವರು ಸೇವೆಯಿಂದ ಅಮಾನತು ಮಾಡಿದ್ದರು.

ಅಮಾನತು ಅವಧಿಯಲ್ಲಿ ನಂದೀಶ್ ಅವರು ಮನೆಯಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದರು. ಗುರುವಾರ ಎದೆನೋವು ಕಾಣಿಸಿಕೊಂಡಿತ್ತು. ಕೂಡಲೇ ಅವರನ್ನು ಕುಟುಂಬಸ್ಥರು ಲಕ್ಷ್ಮಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಹೃದಯಾಘಾತದಿಂದ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರೆಂದು ಪೊಲೀಸ್ ಮೂಲಗಳು ತಿಳಿಸಿವೆ. ಗುಂಡ್ಲುಪೇಟೆಯ ನಂದೀಶ್ 2003ರಲ್ಲಿ ಪಿಎಸ್‌ಐ ಆಗಿ ವೃತ್ತಿ ಆರಂಭಿಸಿದ್ದರು. ಇನ್‌ಸ್ಪೆಕ್ಟರ್ ಹುದ್ದೆಗೆ ಬಡ್ತಿ ಪಡೆದು ಪರಪ್ಪನ ಅಗ್ರಹಾರ, ಆರ್.ಟಿ.ನಗರ ಹಾಗೂ ಇತರೆ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ.

ಜೂಜಾಟ: ಕೊಲೆ

ಬೆಂಗಳೂರು: ಪರಪ್ಪನ ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ರಾಜು (36) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೂವರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಕೂಡ್ಲು ನಿವಾಸಿ ರಾಜು, ಆಟೊ ಚಾಲಕ. ದೀಪಾವಳಿ ಹಬ್ಬವಿದ್ದಿದ್ದರಿಂದ ಬುಧವಾರ ರಾತ್ರಿ ಕೂಡ್ಲು ಬಳಿಯ ಎಸಿಎಸ್ ಬಡಾವಣೆಯಲ್ಲಿ ಜೂಜು ಆಡಲು ಹೋಗಿದ್ದರು. ಇದೇ ಸಂದರ್ಭದಲ್ಲೇ ಅವರ ಕೊಲೆ ನಡೆದಿದ್ದು, ಪ್ರತ್ಯಕ್ಷದರ್ಶಿಗಳು ಹಾಗೂ ಇತರರ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಟಿ–20 ವಿಶ್ವಕಪ್: ಬೆಟ್ಟಿಂಗ್ ನಡೆಸುತ್ತಿದ್ದವರ ಬಂಧನ

ಬೆಂಗಳೂರು: ಟಿ– 20 ವಿಶ್ವಕಪ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಅವರಿಂದ ₹ 50 ಸಾವಿರ ನಗದು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ.

'ಆರ್.ಎಂ.ಸಿ ಯಾರ್ಡ್ ಹಾಗೂ ಯಶವಂತಪುರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಕಾರ್ಯಾಚರಣೆ ನಡೆಸಲಾಗಿದೆ. ಬೆಟ್ಟಿಂಗ್ ನಡೆಸುತ್ತಿದ್ದ ಇಬ್ಬರನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಪ್ರಯಾಣಿಕರ ನಗದು ಕಳ್ಳತನ: ಚಾಲಕ ಬಂಧನ

ಬೆಂಗಳೂರು: ₹ 1.65 ಲಕ್ಷ ನಗದು ಇದ್ದ ಪ್ರಯಾಣಿಕರ ಬ್ಯಾಗ್ ಕಳ್ಳತನ ಮಾಡಿದ್ದ ಆರೋಪದಡಿ ಆಟೊ ಚಾಲಕ ಪವನ್ ಎಂಬುವವರನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿಜಯನಗರದ ಮೂಡಲಪಾಳ್ಯ ನಿವಾಸಿ ಪವನ್, ಸೇನೆ ಅಧಿಕಾರಿಯೊಬ್ಬರ ಬ್ಯಾಗ್ ಕದ್ದಿದ್ದರು. ಈ ಸಂಬಂಧ ಪ್ರಕರಣ ದಾಖಲಾಗಿತ್ತು. ಆಟೊ ನೋಂದಣಿ ಸಂಖ್ಯೆ ಆಧರಿಸಿ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ. ₹ 1.65 ಲಕ್ಷ ನಗದು ಹಾಗೂ ಬಟ್ಟೆಗಳ ಸಮೇತ ಎರಡು ಬ್ಯಾಗ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಪೀಣ್ಯ: ದಾವಣಗೆರೆ ಯುವಕ ಆತ್ಮಹತ್ಯೆ

ಬೆಂಗಳೂರು: ಪೀಣ್ಯ ಠಾಣೆ ವ್ಯಾಪ್ತಿಯ ಶಿವಪುರದ ಕೊಠಡಿಯೊಂದರಲ್ಲಿ ದುಶ್ಯಂತ್ (27) ಎಂಬುವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ದಾವಣಗೆರೆಯ ಚನ್ನಗಿರಿ ತಾಲ್ಲೂಕಿನ ಮಲ್ಲಿಗೇನಹಳ್ಳಿಯ ದುಶ್ಯಂತ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದರು' ಎಂದು ಪೊಲೀಸರು ಹೇಳಿದರು.

ಅಮೆರಿಕ: ಮೂವರು ಭಾರತೀಯರ ಸಾವು

ಶೆಫೀಲ್ಡ್ (ಮಸಾಚುಸೆಟ್ಸ್): ಅಮೆರಿಕದ ಕನೆಕ್ಟಿಕಟ್‌ನ ವಿಶ್ವವಿದ್ಯಾಲಯಗಳಿಗೆ ತೆರಳುತ್ತಿದ್ದ ವೇಳೆ ಎರಡು ವಾಹನಗಳು ಪರಸ್ಪರ ಡಿಕ್ಕಿಯಾಗಿ ಭಾರತೀಯ ಸಂಜಾತ ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಪ್ರೇಮ್‌ಕುಮಾರ್ ರೆಡ್ಡಿ (27), ಪಾವನಿ ಗುಲ್ಲಪಲ್ಲಿ (22), ಸಾಯಿ ನರಸಿಂಹ ಪಟಮಶೆಟ್ಟಿ (22) ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ ಪರಿಷ್ಕರಿಸಲು ಸರ್ಕಾರಕ್ಕೆ ಕೋರಿಕೆ

ಕನ್ನಡ ಮಸೂದೆ: ಕಸಾಪ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ 2022'ರ ತಿದ್ದುಪಡಿಗೆ ಸಂಬಂಧಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಶಿಫಾರಸುಗಳು ಸರ್ಕಾರಕ್ಕೆ ಸಲ್ಲಿಕೆಯಾಗಿವೆ. ಮಸೂದೆ ಜಾರಿ ಸಮಿತಿಯಲ್ಲಿ ಕಸಾಪ ಅಧ್ಯಕ್ಷರಿಗೆ ಸ್ಥಾನ, ವಿವಿಧ ಸಂಸ್ಥೆಗಳು ಹಾಗೂ ಕೇಂದ್ರಗಳ ಮೇಲಿನ ಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಕೆ ಸೇರಿ ವಿವಿಧ ಶಿಫಾರಸುಗಳನ್ನು ಮಾಡಲಾಗಿದೆ.

ಮಸೂದೆ ಬಗ್ಗೆ ಇತ್ತೀಚೆಗೆ ಪರಿಷತ್ತು ಆಯೋಜಿಸಿದ ಚಿಂತನಾ ಗೋಷ್ಠಿಯಲ್ಲಿ ಸ್ವಾಮೀಜಿಗಳು, ಕಾನೂನು ತಜ್ಞರು, ಸಾಹಿತಿಗಳು, ಚಿಂತಕರು, ಕನ್ನಡಪರ ಹೋರಾಟಗಾರರು ಹಾಗೂ ಕನ್ನಡ ಪರ ಸಂಘ–ಸಂಸ್ಥೆಗಳ ಮುಖ್ಯಸ್ಥರ ಅಭಿಪ್ರಾಯ ಸಂಗ್ರಹಿಸಲಾಗಿತ್ತು. ಕೆಲ ಅಂಶಗಳ ಬಗ್ಗೆ ಹಲವರು ಆಕ್ಷೇಪಿಸಿದ್ದರು. ಈ ಅಭಿಪ್ರಾಯಗಳ ಅನುಸಾರ ಶಿಫಾರಸನ್ನು ಕಸಾಪ ಮಾಡಿದೆ.

ಪ್ರಮುಖ ಶಿಫಾರಸುಗಳು

- **ಕನ್ನಡಿಗ ಎಂದರೆ:** ಕರ್ನಾಟಕ ರಾಜ್ಯದಲ್ಲಿ 15 ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿವರೆಗೆ ವಾಸವಾದ ವ್ಯಕ್ತಿ ಅಥವಾ ಆತನ ಸಂತಾನ ಅಥವಾ ಅಂಥ ವ್ಯಕ್ತಿಯ ಕಾನೂನು ಸಮ್ಮತ ಪಾಲನೆ ಪೋಷಣೆಯಲ್ಲಿರುವ ವ್ಯಕ್ತಿ. ಕರ್ನಾಟಕದಲ್ಲಿ ವಾಸವಾಗಿರದೇ ಗಡಿರಾಜ್ಯ, ಹೊರರಾಜ್ಯ ಮತ್ತು ಹೊರದೇಶಗಳನ್ನು ಒಳಗೊಂಡಂತೆ ಎಲ್ಲಿಯೇ ವಾಸವಾಗಿದ್ದರೂ ಕನ್ನಡದಲ್ಲಿ ಓದಬಲ್ಲ ಮತ್ತು ಮಾತನಾಡಬಲ್ಲ ವ್ಯಕ್ತಿ.
- **ಭಾಷಾ ಅಲ್ಪಸಂಖ್ಯಾತರು:** ಸರ್ಕಾರ ಮತ್ತು ಇಲಾಖೆಯ ಮುಖ್ಯಸ್ಥರೊಂದಿಗೆ ಮತ್ತು ಇತರೆ ಸರ್ಕಾರಿ ಕಚೇರಿಗಳೊಂದಿಗೆ ಪತ್ರ ವ್ಯವಹಾರಕ್ಕಾಗಿ ಕನ್ನಡ ಭಾಷೆಯನ್ನು ಬಳಸಬೇಕು.
- ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯಗಳಿಗೆ ಸಂಬಂಧಿಸಿದಂತೆ ವ್ಯವಹರಿಸುವಾಗ ಕನ್ನಡ ಭಾಷಾ ಬಳಕೆಯನ್ನು ಉತ್ತೇಜಿಸಬೇಕು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಆಂಗ್ಲ ಭಾಷೆ ಬಳಸಬಹುದು.
- ರಾಜಭಾಷಾ ಆಯೋಗವು ಅಧಿನಿಯಮಗಳನ್ನು ಕನ್ನಡಕ್ಕೆ ಭಾಷಾಂತರಿಸುವುದಕ್ಕೆ ಜವಾಬ್ದಾರವಾಗಿರಬೇಕು.
- ಮಸೂದೆಯ ಜಾರಿ ಪ್ರಾಧಿಕಾರಗಳಾಗಿ ರಚಿಸಲಾದ ಸಮಿತಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಉಪಾಧ್ಯಕ್ಷರಾಗಿ ಇರಬೇಕು.
- ಕರ್ನಾಟಕ ವಕೀಲರ ಪರಿಷತ್ತು, ಕನ್ನಡ ವಿಶ್ವವಿದ್ಯಾಲಯದ ಕುಲಪತಿ, ಕನ್ನಡ ದಿನಪತ್ರಿಕೆಯ ಸಂಪಾದಕರೊಬ್ಬರು ಮಸೂದೆಯ ಜಾರಿ ಪ್ರಾಧಿಕಾರಗಳಾಗಿ ರಚಿಸಲಾದ ಸಮಿತಿಯಲ್ಲಿ ಸದಸ್ಯರಾಗಿರಬೇಕು.
- ಕನ್ನಡ ಶಾಲೆಗಳ ಪುನಶ್ಚೇತನಕ್ಕೆ ಕ್ರಮ ವಹಿಸಬೇಕು. ಕನ್ನಡ ಮಾಧ್ಯಮದಲ್ಲಿ ಒಂದನೇ ತರಗತಿಯಿಂದ 10ನೇ ತರಗತಿವರೆಗೆ ಓದಿದ ವಿದ್ಯಾರ್ಥಿಗಳಿಗೆ ಉನ್ನತ, ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣದಲ್ಲಿ ಶೇಕಡಾವಾರು ಮೀಸಲಾತಿ ಕಲ್ಪಿಸಬೇಕು.
- ಜಿಲ್ಲಾ ನ್ಯಾಯಾಲಯಗಳು ತಮ್ಮ ಕಲಾಪಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ನಡೆಸಬೇಕು.
- ಹೈಕೋರ್ಟ್‌ನಲ್ಲಿ ತೀರ್ಪು ಹಾಗೂ ಆದೇಶಗಳನ್ನು ರಾಜ್ಯದ ಅಧಿಕೃತ ಭಾಷೆ ಕನ್ನಡದಲ್ಲಿ ನೀಡಲು ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿದಂತೆ ಸರ್ಕಾರ ಕ್ರಮಕೈಗೊಳ್ಳಬೇಕು.
- ಬ್ಯಾಂಕುಗಳು, ಎಲ್ಲ ಸರ್ಕಾರಿ ಹಾಗೂ ಖಾಸಗಿ ಕಚೇರಿಗಳಲ್ಲಿ ಕನ್ನಡದಲ್ಲಿ ಸೇವೆ ನೀಡಬೇಕು.

ಅರ್ಚನಾ ಕೊಟ್ಟಿಗೆ

'ಸಭ್ಯ' ಗೌರವಯುತ ಪಾತ್ರ ನನಗಿಷ್ಟ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮೊದಲು ಒಳ್ಳೆಯ ನಟಿ ಅನ್ನಿಸಿಕೊಳ್ಳಬೇಕು. ಗೌರವಯುತವಾದ ಪ್ರಸ್ತುತಿ ಇರಬೇಕು. ಹಾಗಿದ್ದರೆ ಮಾತ್ರ ನಟನೆಗೆ ಒಪ್ಪಿಕೊಳ್ಳುವೆ. ನಿಧಾನವಾದರೂ ಸರಿ ಒಳ್ಳೆಯ ಅವಕಾಶಗಳಷ್ಟೇ ಸಿಗಲಿ ಎಂದು ಆಶಿಸುತ್ತಾ ಸಾಗಿದ ಅರ್ಚನಾ ಕೊಟ್ಟಿಗೆ ಅವರಿಗೆ ಕೊನೆಗೂ ನಾಯಕಿ ಪಟ್ಟ ಒಲಿದಿದೆ. ಅಭಿನಯಿಸಿದ ಚಿತ್ರಗಳು ಸುಮಾರು 18ರಷ್ಟಾಗಿವೆ. ಈಗಲೂ ಕಲಿಕೆ ಸಾಗಿದೆ ಎನ್ನುತ್ತಾರೆ ಅರ್ಚನಾ.

ಶರತ್ ಹೆಗ್ಡೆ

- **ಸಿನಿಮಾ ಯಾನ ಹೇಗೆ ಸಾಗಿದೆ?**

ಕಲಿಕೆಯಂತೆ ಸಾಗಿದೆ. ನಾನು ಓದಿದ್ದು ಡಿಜಿಟಲ್ ಫಿಲ್ಮ್ ಮೇಕಿಂಗ್ ಕೋರ್ಸ್. ಆಗಲೇ ಆಡಿಷನ್‌ಗಳಿಗೆ ಹೋಗುತ್ತಿದ್ದೆ. ಕೋರ್ಸ್ ಕೊನೆಯ ಹಂತದಲ್ಲಿದ್ದಾಗ 'ಡಿಯರ್ ಸತ್ಯ' ಅವಕಾಶ ಬಂದಿತು. ಮೊದಲು 'ನಮ್ದುಕೆ' ತಂಡದ ಹಾಸ್ಯ ವಿಡಿಯೊಗಳಲ್ಲಿ ಕಾಣಿಸಿಕೊಂಡಿದ್ದ ನಾನು ಈಗ ದೊಡ್ಡ ಕ್ಯಾಮೆರಾ ಎದುರಿಸುವವರೆಗೆ ಬಂದಿದ್ದೇನೆ. ಈಗಲೂ ಆಡಿಷನ್‌ಗಳಲ್ಲಿ ಭಾಗವಹಿಸುತ್ತಲೇ ಇದ್ದೇನೆ. ಧಾರಾವಾಹಿಗಳ ಆಡಿಷನ್‌ಗಳಲ್ಲೂ ಭಾಗವಹಿಸಿದ್ದೇನೆ. ಇನ್ನು ಒಂದಿಷ್ಟು ಚಿತ್ರಗಳು ಬಿಡುಗಡೆಯಾಗಿ ಜನ ನನ್ನನ್ನು ಗುರುತಿಸಬೇಕು. ಆಮೇಲೆ ಮುಂದಿನ ಹಾದಿ ಇದ್ದೇ ಇದೆ.

- **ಈ ಕ್ಷೇತ್ರ ಆಕರ್ಷಿಸಿದ್ದು ಹೇಗೆ?**

ಕಾಲೇಜು ದಿನಗಳಲ್ಲಿ ಸಿನಿಮಾ ಆಸಕ್ತಿಯಿತ್ತು. ಆದರೆ, ಮನೆಯಲ್ಲಿ ಆ ಕ್ಷೇತ್ರ ಆಯ್ಕೆ ಮಾಡಿಕೊಳ್ಳುವುದು ಇಷ್ಟವಿರಲಿಲ್ಲ. ಒಮ್ಮೆ ಮಯ್ಯಾಸ್‌ನ ಮೈಸೂರ್ ಪಾಕ್ ಜಾಹೀರಾತಿನಲ್ಲಿ ಕಾಣಿಸಿಕೊಂಡೆ. ಕಾಲೇಜಿನಲ್ಲಿ ಎಲ್ಲರೂ ನನ್ನನ್ನು ಮೈಸೂರು ಪಾಕ್ ಹುಡುಗಿ ಎಂದೇ ಕರೆಯಲು ಆರಂಭಿಸಿದರು. ಗುರುತಿಸುವಿಕೆ, ಸ್ವಲ್ಪ ಹಣ ಇದನ್ನೆಲ್ಲಾ ನೋಡಿದಾಗ ಇದು ಒಳ್ಳೆಯ ಆಯ್ಕೆ ಎಂದು ಅನಿಸಿತು. ಹಾಗೇ ಮುಂದುವರಿದೆ. ಆಗ ಅಮ್ಮ ನನಗೆ ನಿರೂಪಕಿಯಾಗು, ನಟನೆ ಬೇಡ ಎಂದು ಹೇಳಿದ್ದರು. ಕಸ್ತೂರಿ ಟಿವಿ ವಾಹಿನಿಯಲ್ಲಿ ಹಾಸ್ಯ ಕಾರ್ಯಕ್ರಮ ನಿರೂಪಿಸುತ್ತಿದ್ದೆ. ಮುಂದೆ ಕಿರುತೆರೆ ಸಮಾರಂಭಗಳಲ್ಲಿಯೂ ನಿರೂಪಣೆ ಮಾಡುತ್ತಿದ್ದೆ. ಆದರೆ, ದೊಡ್ಡ ಕಾರ್ಯಕ್ರಮಗಳಲ್ಲಿ ನಿರೂಪಕರನ್ನು ಅಷ್ಟಕ್ಕಷ್ಟೇ ಎಂದು ಪರಿಗಣಿಸುವ ರೀತಿ ಬೇಸರವೆನಿಸಿತು. ಈಗ ಎಲ್ಲ ಶೋಗಳನ್ನು ಬಿಟ್ಟು ನಟನೆಯತ್ತ ಮಾತ್ರ ಗಮನ ಹರಿಸಿದ್ದೇನೆ.

- **ಬ್ರೇಕ್ ಕೊಟ್ಟ ಸಿನಿಮಾಗಳು?**

ಎಲ್ಲರ ಕಾಲೆಳೆಯುತ್ತ ಕಾಲ... ಅದ್ಭುತ ಅನುಭವ ಕೊಟ್ಟ ಚಿತ್ರ. ಸಾಕಷ್ಟು ಕಲಿಕೆ ಅಲ್ಲಿ ಆಯಿತು. 'ಅರಣ್ಯಕಾಂಡ', 'ಡಿಯರ್ ಸತ್ಯ' ಇವೆಲ್ಲಾ ಆರಂಭಿಕ ಹೆಜ್ಜೆಗಳು. 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಚಿತ್ರ ಕೂಡಾ ಬಿಡುಗಡೆಗೆ ಸಿದ್ಧವಾಗಿದೆ. ಎಲ್ಲವೂ ಒಂದಕ್ಕಿಂತ ಒಂದು ಕಲಿಕೆಗೆ ನೆರವಾಗಿವೆ. ಪೋಷಕ ಪಾತ್ರ ಮಾಡುವಾಗಲೇ ಶೂಟಿಂಗ್ ಸೆಟ್‌ನಲ್ಲಿ ಎಲ್ಲರೂ ನನ್ನ ಅಭಿನಯವನ್ನು ಶ್ಲಾಘಿಸುತ್ತಿದ್ದರು. ನಾಯಕಿಯಾಗುವ ಅರ್ಹತೆ ಇದೆ ಎಂದಿದ್ದರು. ಹಾಗೆಂದು ನಾಯಕಿ ಪಾತ್ರವೇ ಬೇಕು ಎಂದು ಪ್ರಯತ್ನಿಸಿದವಳಲ್ಲ. ಆದರೆ, ಯಾವುದಕ್ಕೂ ಕಾಲ ಕೂಡಿ ಬರಬೇಕಲ್ಲಾ.

- **ಬೇಸರವೆನಿಸಿದ್ದು?**

ಕೆಲವೆಡೆ ಪೋಷಕ ಪಾತ್ರ ಎಂದು ತಾತ್ಸಾರ ಮಾಡುವುದು, ಪ್ರತ್ಯೇಕವಾಗಿ ನೋಡುವುದನ್ನು ಗಮನಿಸಿದಾಗ ಬೇಸರವೆನಿಸುತ್ತದೆ. ಪೋಷಕ ಪಾತ್ರಕ್ಕೆ ಮಹತ್ವ ಇಲ್ಲವೇ? ಆದರೆ ನಾನು ಅದನ್ನು ಸಕಾರಾತ್ಮಕವಾಗಿಯೇ ತೆಗೆದುಕೊಂಡು ಕಲಿಯುತ್ತಾ ಹೋಗುತ್ತೇನೆ. ಇಂದು ನಾಯಕ–ನಾಯಕಿ ಸ್ಥಾನದಲ್ಲಿರುವವರೆಲ್ಲಾ ಅಷ್ಟೇ ಕಷ್ಟಪಟ್ಟವರಲ್ಲವೇ ಎಂದು ಭಾವಿಸುತ್ತೇನೆ. ನನ್ನ ಸಾಮರ್ಥ್ಯ ಮತ್ತು ಇತಿಮಿತಿಗಳು ಚೆನ್ನಾಗಿ ಗೊತ್ತಿವೆ. ನಾನು ಹೇಗಿದ್ದೇನೋ ಹಾಗೆಯೇ ಪ್ರಸ್ತುತಗೊಳ್ಳುವುದು ನನಗಿಷ್ಟ.

- **'ಯೆಲ್ಲೋ ಗ್ಯಾಂಗ್ಸ್'ನಲ್ಲಿ ತಾವು ಯಾರು?**

'ಯೆಲ್ಲೋ ಗ್ಯಾಂಗ್ಸ್' 2019ರಲ್ಲಿ ಸಿದ್ಧವಾದ ಚಿತ್ರ. ಅದರಲ್ಲಿ ನನ್ನದು ಪತ್ರಕರ್ತೆಯ ಪಾತ್ರ. ಈ ಪಾತ್ರಕ್ಕೆ ಹೇರ್ ಸ್ಟೈಲಿಸ್ಟ್ ಆಗಲಿ, ಮೇಕಪ್ ಕಲಾವಿದರಾಗಲಿ ಇರಲಿಲ್ಲ. ನನ್ನಲ್ಲೇ ಇರುವ ಕನಿಷ್ಠ ಪರಿಕರಗಳಿಂದ ಮೇಕಪ್ ಮಾಡಿಕೊಂಡಿದ್ದೆ. ಅದೇ ತರಹದ ಲುಕ್‌ನ್ನು ಪಾತ್ರ ಬಯಸುತ್ತಿತ್ತು. ನಿರ್ದೇಶಕ ರವೀಂದ್ರ ಅವರಂತೂ ಸಿಡಿಮಿಡಿ ಅನ್ನುತ್ತಲೇ ಎಲ್ಲವನ್ನೂ ಕಲಿಸಿದರು. ಸೆಟ್‌ನಲ್ಲಿ ಬಹಳ ಗಂಭೀರ ವ್ಯಕ್ತಿ ಅವರು. ಚಿತ್ರ ನೋಡಿದಾಗ ಆ ಪರಿಶ್ರಮ ಸಾರ್ಥಕ ಅನಿಸುತ್ತದೆ. ಅವರೆಲ್ಲರಿಗೆ ಕೃತಜ್ಞಳಾಗಿದ್ದೇನೆ.

- **ಎಂತಹ ಸಿನಿಮಾ ನಿಮಗಿಷ್ಟ?**

ತುಂಡುಡುಗೆ ಧರಿಸಲು ಅಥವಾ ಇಂಟಿಮೇಟ್ ಅನ್ನಿಸುವ ದೃಶ್ಯಗಳಲ್ಲಿ ಕಾಣಿಸಿಕೊಳ್ಳಲು ನಾನು ಬಯಸುವುದಿಲ್ಲ. ಉಳಿದಂತೆ ಪಾತ್ರ ಗಟ್ಟಿತನದಿಂದ ಕೂಡಿದ್ದರೆ ಒಪ್ಪಿಕೊಳ್ಳುತ್ತೇನೆ. ನೋಡಿ ಊರ್ವಶಿ, ಉಮಾಶ್ರೀ ಅವರಂಥ ನಟಿಯರು ಒಳ್ಳೆಯ ಕಲಾವಿದರಾಗಿ ಗುರುತಿಸಿಕೊಂಡರು. ಅವರನ್ನು ಮಾದರಿಯಾಗಿ ನೋಡುತ್ತೇನೆ.

'ಗಂಧದಗುಡಿ' ಹೆಮ್ಮೆಯ ಪ್ರಾಜೆಕ್ಟ್

ಅಮೋಘವರ್ಷ ಸಂದರ್ಶನ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಪಿಆರ್‌ಕೆ ಪ್ರೊಡಕ್ಷನ್ಸ್‌ನಡಿ, 'ವೈಲ್ಡ್ ಕರ್ನಾಟಕ' ಖ್ಯಾತಿಯ ಅಮೋಘವರ್ಷ ಅವರ ಜೊತೆಗೂಡಿ ನಟ ದಿವಂಗತ ಪುನೀತ್ ರಾಜ್‌ಕುಮಾರ್ ತಯಾರಿಸಿದ್ದ ಡಾಕ್ಯೂಫಿಲಂ 'ಗಂಧದಗುಡಿ' ಅ.28ರಂದು ತೆರೆಕಾಣುತ್ತಿದೆ. ತಮ್ಮ ಪಿಆರ್‌ಕೆ ಯೂಟ್ಯೂಬ್ ಚಾನೆಲ್‌ನಲ್ಲಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಈ ಪ್ರಾಜೆಕ್ಟ್‌ನ ನೆನಪುಗಳ ಬುತ್ತಿ ಬಿಚ್ಚಿಟ್ಟಿದ್ದಾರೆ.

ಇತ್ತೀಚೆಗೆ ನಡೆದಿದ್ದ, 'ಪುನೀತಪರ್ವ' ಪ್ರಿರಿಲೀಸ್ ಕಾರ್ಯಕ್ರಮದ ಯಶಸ್ಸಿನಿಂದಲೇ ಮಾತು ಆರಂಭಿಸಿದ ಅಶ್ವಿನಿ ಅವರು, 'ಪುನೀತಪರ್ವ ಮಾಡಿದ್ದೇ ಅಭಿಮಾನಿಗಳಿಗಾಗಿ. ಒಂದು ಲಕ್ಷಕ್ಕೂ ಅಧಿಕ ಜನರು ಇಲ್ಲಿ ಭಾಗವಹಿಸಿದ್ದು ತೃಪ್ತಿ ನೀಡಿತು. ಕನ್ನಡ ಚಿತ್ರರಂಗ ಹಾಗೂ ದಕ್ಷಿಣ ಭಾರತದ ಚಿತ್ರರಂಗದ ಕಲಾವಿದರೂ ಪಾಲ್ಗೊಂಡಿದ್ದು ಸಂತೋಷ ನೀಡಿತು. ಅಭಿಮಾನಿಗಳಿಗೆ ನಮ್ಮ ಇಡೀ ಕುಟುಂಬ ಚಿರಋಣಿಯಾಗಿರಲಿದೆ' ಎಂದರು.

'ಗಂಧದಗುಡಿ ಅಪ್ಪಾಜಿ ಹಾಗೂ ಶಿವರಾಜ್‌ಕುಮಾರ್ ಅವರು ಮಾಡಿದ ಸಿನಿಮಾ. ಪುನೀತ್ ಹಾಗೂ ಅಮೋಘವರ್ಷ ಪರಸ್ಪರ ಚರ್ಚಿಸುತ್ತಿರುವಾಗ ಹೊಳೆದ ಶೀರ್ಷಿಕೆ 'ಗಂಧದಗುಡಿ'. ಈ ಹೊಸ 'ಗಂಧದಗುಡಿ' ಪುನೀತ್ ಅವರ ಪಯಣ. ಇದನ್ನು ನೈಜವಾಗಿ ಸೆರೆಹಿಡಿಯಲಾಗಿದೆ ವಿನಾ ಚಿತ್ರೀಕರಿಸಿಲ್ಲ. ಅಪ್ಪು ಅವರ ಕಣ್ಣಿನ ಮೂಲಕ ಕರುನಾಡನ್ನು ನೋಡುತ್ತೇವೆ. ಪುನೀತ್ ಅವರ ಈ ಪಯಣ ನನಗೆ ಹೆಮ್ಮೆ ತಂದಿದೆ' ಎಂದು ಭಾವುಕರಾದರು ಅಶ್ವಿನಿ.

'ಗಂಧದಗುಡಿಯಲ್ಲಿ ಪುನೀತ್ ಅವರು ಪುನೀತ್ ಆಗಿಯೇ ಇದ್ದರು. ಮೇಕಪ್ ಇಲ್ಲದೆ, ಜನಜಂಗುಳಿ ಇಲ್ಲದೆ ಪ್ರತಿಯೊಂದು ದೃಶ್ಯದಲ್ಲೂ ಬಹಳ ಖುಷಿಯಿಂದ ಭಾಗವಹಿಸುತ್ತಿದ್ದರು. ನಾನು ಕಾಳಿ ನದಿ ತಟದಲ್ಲಿ ನಡೆದ ಚಿತ್ರೀಕರಣಕ್ಕೆ ಹೋಗಿದ್ದೆ. ನನ್ನ ಜೊತೆ ಮಾತನಾಡಲು ಒಂದು ಬೆಟ್ಟವನ್ನು ಹತ್ತಿ ಕರೆ ಮಾಡಿದ್ದರು ಪುನೀತ್. 'ನೀನು ಬರಲೇಬೇಕು' ಎಂದು ಹಠಹಿಡಿದಿದ್ದರು. 'ನನ್ನ ಜೊತೆ ಚಾರಣ ಮಾಡು' ಎಂದು ಒತ್ತಾಯಿಸಿದ್ದರು. ಹೀಗಾಗಿ ನಾನು ಬೆಂಗಳೂರಿನಿಂದ ಅಲ್ಲಿಗೆ ಹೋಗಿದ್ದೆ. ಇಡೀ ತಂಡದ ಜೊತೆ ಬೆಳಗ್ಗೆ 4 ಗಂಟೆಗೆ ಎದ್ದು ಟ್ರೆಕ್ಕಿಂಗ್ ಆರಂಭಿಸಿದ್ದೆ' ಎಂದು ನೆನಪಿಸಿಕೊಂಡರು.

'ನನಗೆ ಹೆಮ್ಮೆ ಕೊಟ್ಟಿರುವ ಪ್ರಾಜೆಕ್ಟ್ ಇದು. ಒಂದೆಡೆ ಬೇಸರ, ಮತ್ತೊಂದೆಡೆ ಖುಷಿ. ಒಮ್ಮೆ ಹಿಂದಿರುಗಿ ನೋಡಿದರೆ ಗಂಧದಗುಡಿಗೆ ಪುನೀತ್ ಅವರೇ ಸೂಕ್ತ ರಾಯಭಾರಿ ಎಂದೆನಿಸುತ್ತಿದೆ. ಈ ಡಾಕ್ಯೂಫಿಲಂ ನಿರ್ಮಾಣದ ನಿರ್ಧಾರ ತೆಗೆದುಕೊಂಡಿದ್ದಕ್ಕೂ ಬಹಳ ಸಂತೋಷವಿದೆ' ಎಂದು ಮಾತಿಗೆ ವಿರಾಮವಿತ್ತರು ಅಶ್ವಿನಿ.

'ಕೆ.ಜಿ.ಎಫ್' ದಾಖಲೆ ಮುರಿದ 'ಕಾಂತಾರ'!

ಬಿಡುಗಡೆಯಾಗಿ 25 ದಿನ ಕಳೆದಿದ್ದರೂ, 'ಕಾಂತಾರ' ಸಿನಿಮಾದ ಅಬ್ಬರ ಇಳಿದಿಲ್ಲ. ಈ ನಡುವೆ ಸಿನಿಮಾ ಹೊಸ ದಾಖಲೆಯೊಂದನ್ನು ಬರೆದಿದೆ. ವಿಶ್ವವೇ ಕನ್ನಡ ಚಿತ್ರರಂಗದತ್ತ ತಿರುಗಿ ನೋಡುವಂತೆ ಮಾಡಿದ್ದ 'ಕೆ.ಜಿ.ಎಫ್' ಹೆಸರಿನಲ್ಲಿದ್ದ ದಾಖಲೆಯೊಂದನ್ನು ಇದೀಗ 'ಕಾಂತಾರ' ಮುರಿದಿದೆ. ಬಿಡುಗಡೆಯಾದ 25 ದಿನಗಳಲ್ಲಿ ರಾಜ್ಯದಲ್ಲಿ 77 ಲಕ್ಷಕ್ಕೂ ಅಧಿಕ ಜನರು ಈ ಸಿನಿಮಾವನ್ನು ವೀಕ್ಷಿಸಿದ್ದಾರೆ.

ಈ ಎರಡೂ ಚಿತ್ರಗಳು ಹೊಂಬಾಳೆ ಫಿಲ್ಮ್ಸ್ ಸಂಸ್ಥೆಯ ಸಿನಿಮಾಗಳು ಎನ್ನುವುದು ವಿಶೇಷ. ಹೊಂಬಾಳೆ ಫಿಲ್ಮ್ಸ್ ಸಂಸ್ಥೆ ನಿರ್ಮಿಸಿ, 2017ರಲ್ಲಿ ಬಿಡುಗಡೆಯಾದ ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ, ಸಂತೋಷ್ ಆನಂದರಾಮ್ ನಿರ್ದೇಶಿಸಿದ್ದ 'ರಾಜಕುಮಾರ' ಚಿತ್ರವನ್ನು 65 ಲಕ್ಷ ಜನರು ವೀಕ್ಷಿಸಿದ್ದರು.

2018ರಲ್ಲಿ ಬಿಡುಗಡೆಯಾದ ಯಶ್ ನಟನೆಯ ಕೆ.ಜಿ.ಎಫ್ ಭಾಗ 1 ಹಾಗೂ 2ನ್ನು ಕರ್ನಾಟಕದಲ್ಲಿ ಕ್ರಮವಾಗಿ 75 ಲಕ್ಷ ಹಾಗೂ 72 ಲಕ್ಷ ಸಿನಿಪ್ರಿಯರು ವೀಕ್ಷಿಸಿದ್ದರು. ಇವೆಲ್ಲವನ್ನೂ ಮೀರಿ, ಕೇವಲ 25 ದಿನಗಳಲ್ಲೇ 77 ಲಕ್ಷ ಜನರು ಕಾಂತಾರ ವೀಕ್ಷಿಸಿರುವುದು ಹೆಮ್ಮೆಯ ವಿಷಯ ಎಂದಿದೆ ಹೊಂಬಾಳೆ ಫಿಲ್ಮ್ಸ್.

ಇಂದಿನಿಂದ ಪ್ರಾರಂಭ

ಬೆಂಗಳೂರು
ನರ್ತಕಿ 3D 4K DOLBY DIGITAL 7.1 bookmyshow
ಮಾಗಡಿ ರಸ್ತೆ ಪ್ರಸನ್ನ
ರಾಜಾಜಿನಗರ ನವರಂಗ್
ಸಂಜಯನಗರ ವೈಭವ್
ಕಾಮಾಕ್ಷಿಪಾಳ್ಯ ವಿಕ್ಟರಿ ಸಿನಿಮಾ VICTORY CINEMA
ಲಾಲ್‌ಬಾಗ್ ರಸ್ತೆ ಊರ್ವಶಿ
ಸದಾಶಿವನಗರ ಕಾವೇರಿ
ಮಾರುತಿಸೇವಾನಗರ ಮುಕುಂದ
ಹೊಂಗಸಂದ್ರ ಬೃಂದ
ಮಾಡಿವಾಳ ಸಂಧ್ಯಾ
ಜೆ.ಪಿ ನಗರ ಸಿದ್ಧೇಶ್ವರ
ಸುಂಕದಕಟ್ಟೆ ಮೋಹನ್
ಕೆಂಗೇರಿ ವೆಂಕಟೇಶ್ವರ
ತಾವರೆಕೆರೆ ಲಕ್ಷ್ಮೀ
ಲಗ್ಗೆರೆ ಆಕಾಶ್
ಪೀಣ್ಯಾ ಭಾರತಿ
ಕಮಲನಗರ ವೀರಭದ್ರೇಶ್ವರ
ಆರ್.ಟಿ ನಗರ ರಾಧಾಕೃಷ್ಣ
ಗೌಡನಪಾಳ್ಯ ಶ್ರೀನಿವಾಸ
ಗೊಟ್ಟಿಗೆರೆ ಲಕ್ಷ್ಮೀ
ಮಾರತಹಳ್ಳಿ ತುಳಸಿ
ಸಿಂಗಪುರ ಲೇಔಟ್ ವೈನಿಧಿ
ವಿದ್ಯಾಪೀಠ ರಸ್ತೆ ಚಂದ್ರೋದಯ
ಯಶವಂತಪುರ ಉಲ್ಲಾಸ್
ಕದಿರೇನಹಳ್ಳಿ ಮಹದೇಶ್ವರ
ಜೆ.ಪಿ ನಗರ ರೇಣುಕಾಪ್ರಸನ್ನ
ಕೋಣನಕುಂಟೆ ಕ್ರಾಸ್ ಮಾನಸ
ಕೆ.ಆರ್ ಪುರಂ ವೆಂಕಟೇಶ್ವರ
ಚಿಕ್ಕಬಾಣಾವರ ಅಶೋಕ
ಗರುಡಾಚಾರ್‌ಪಾಳ್ಯ ವಿ ಸಿನಿಮಾಸ್
ಮೈಸೂರು ರಸ್ತೆ ವಿಜಯ್
ಗೊಲ್ಲರಹಟ್ಟಿ ವೆಂಕಟೇಶ್ವರ
ಉಲ್ಲಾಳ ವಜ್ರೇಶ್ವರಿ
ನಾಗವಾರ ಪೃಥ್ವಿ
ಬೊಮ್ಮಸಂದ್ರ ಬಾಲಾಜಿ
ಮಾರತಹಳ್ಳಿ ವಿನಾಯಕ
ಬೊಮ್ಮನಹಳ್ಳಿ ಕೃಷ್ಣ
ವರ್ತೂರು ವಿನಾಯಕ
ರಾಮಮೂರ್ತಿನಗರ ಲಕ್ಷ್ಮೀ
ಕೋಣಪ್ಪನ ಅಗ್ರಹಾರ ವೆಂಕಟೇಶ್ವರ
ಜೆ.ಸಿ ರೋಡ್ ಪೂರ್ಣಿಮಾ
ಅತ್ತಿಬೆಲೆ ಗೌರಿಶಂಕರ
ಸರ್ಜಾಪುರ ರವಿ
ಮತ್ತಿಕೆರೆ ಮುರುಳಿ ಗೋಕುಲ
ಅಗರ ತಿರುಮಲ
ನೆಲಮಂಗಲ ರೂಪ
ಜಾಲಹಳ್ಳಿ ಹೆಚ್.ಎಂ.ಟಿ
ಎಂ.ಜಿ ರೋಡ್ ಶಂಕರ್‌ನಾಗ್
ಸ್ವಾಗತ್
ಬಿಡದಿ ದೀಪಕ್
PVR CINEMAS ORION MALL FORUM MALL VAISHNAVI REGALIA MARKETCITY VR - WHITEFIELD VEGA CITY SPIRIT MALL UPTOWN GT MALL AURA PARK
INOX LIVE THE MOVIE MANTRI SQUARE CENTRAL MALL SWAGATH MALL GARUDA MALL RMZ GALLERIA GARUDA YELAHANKA NEXUS FORUM BROOKFIELD LIDO - ULSOOR SBR HORIZON
Cinépolis ETA NAMMA MALL ROYAL MEENAKSHI ORION EAST SHANTHINIKETAN SJR -AREKERE FUN CINEMAS
GOPALAN CINEMAS ARCADE MALL INNOVATION MALL LEGACY MALL GRAND MALL SIGNATURE MALL
ಉತ್ತರಹಳ್ಳಿ ಮುಕ್ತ ಸಿನಿಮಾಸ್
ಜಾಲಹಳ್ಳಿ ಕ್ರಾಸ್ ರಾಕ್‌ಲೈನ್ ಸಿನಿಮಾಸ್
ಮಾರತಹಳ್ಳಿ ಇನೋವೆಟಿವ್ ಮಲ್ಟಿಪ್ಲೆಕ್ಸ್
KINO CINEMAS
ತುಮಕೂರು ಜೈಭಾರತ್
INOX LIVE THE MOVIE
ಕೋಲಾರ ಶಾರದಾ
ಕನಕಪುರ ವಾಣಿ
ಚನ್ನಪಟ್ಟಣ ಶ್ರೀ ಲಕ್ಷ್ಮೀ
ರಾಮನಗರ ಶಾನ್
ಕುಣಿಗಲ್ ಆಕಾಶ್
ಮಾಗಡಿ ನಿರ್ಮಲ
ವಿಜಯಪುರ ಗೌರಿಶಂಕರ
ಮಾಲೂರು ಬಾಲಾಜಿ
ದೊಡ್ಡಬಳ್ಳಾಪುರ ಸೌಂದರ್ಯ ಮಹಲ್
ಮಧುಗಿರಿ ಶಾಂತಲ
ಚಿಕ್ಕಬಳ್ಳಾಪುರ ಬಾಲಾಜಿ
ಆನೇಕಲ್ ಲಕ್ಷ್ಮೀನರಸಿಂಹ
ಪಾವಗಡ ಅಲಂಕಾರ್
ತುರುವೇಕೆರೆ ಕೃಷ್ಣ
ಬಂಗಾರಪೇಟೆ ವಿಜಯಾ
ಗೌರಿಬಿದನೂರು ಶಂಕರ್
ಶಿಡ್ಲಘಟ್ಟ ವೆಂಕಟೇಶ್ವರ
ಶಿರಾ ಸಪ್ತಗಿರಿ
ಮೈಸೂರು ಸಂಗಂ
PVR CINEMAS FORUM MALL GARUDA MALL
MYSURU VISION CINEMAS
DRC CINEMAS ENTERTAINMENT UNLIMITED
ಸತ್ಯಂ ಸಿನಿಮಾಸ್
ಮಂಡ್ಯ ಮಹಾವೀರ
ಹಾಸನ ಶ್ರೀಗುರು
ಚಾಮರಾಜನಗರ ಗುರುರಾಘವೇಂದ್ರ
ಕೊಳ್ಳೇಗಾಲ ಕೃಷ್ಣ
ಚನ್ನರಾಯಪಟ್ಟಣ ಗಾಯತ್ರಿ
ಹೊಳೆನರಸೀಪುರ ಚನ್ನಾಂಬಿಕಾ
ಪಾಂಡವಪುರ ಲಕ್ಷ್ಮೀ
ಸಕಲೇಶಪುರ ಜೈಮಾರುತಿ
ಕೆ.ಆರ್ ನಗರ SCVDS
ಬನ್ನೂರು ಇಂದ್ರ
ನಂಜನಗೂಡು ಭಾರ್ಗವಿ
ಮದ್ದೂರು ಸಂಜಯ
ಕೆ.ಆರ್ ಪೇಟೆ ಕೆ.ಜೆ.ಬಿ
ಪಿರಿಯಾಪಟ್ಟಣ ಶಾರದಾ
ಶ್ರೀರಂಗಪಟ್ಟಣ ಶ್ರೀದೇವಿ
ಹುಲ್ಲಹಳ್ಳಿ ಯಾಜಮಾನ
ಬೇಲೂರು ಲಕ್ಷ್ಮೀ
ಶಿವಮೊಗ್ಗ ವೀರಭದ್ರೇಶ್ವರ
Bharath Cinemas
ಚಿಕ್ಕಮಗಳೂರು ನಾಗಲಕ್ಷ್ಮೀ
ಭದ್ರಾವತಿ ವೀರಭದ್ರೇಶ್ವರ
ಶಿಕಾರಿಪುರ ಮಾಲತೇಶ್
ಚನ್ನಗಿರಿ ಲಕ್ಷ್ಮೀ
ದಾವಣಗೆರೆ ವಸಂತ ಮೂವೀ ಟೈಮ್
ಚಿತ್ರದುರ್ಗ ಬಸವೇಶ್ವರ
ಬಳ್ಳಾರಿ ನಟರಾಜ ಕಾಂಪ್ಲೆಕ್ಸ್
ಹೊಸಪೇಟೆ ಬಾಲ ಮೀರಾಲಮ್
ಸಿರಗುಪ್ಪ ಬಾಲಾಜಿ
ಹಗರಿ ಬೊಮ್ಮನಹಳ್ಳಿ ಕೃಷ್ಣ
ಚಳ್ಳಕೆರೆ ಪದ್ಮ
ಹರಿಹರ ಜಯಶ್ರೀ
ಹೂವಿನಹಡಗಲಿ ಶಂಕರ್
ಜಗಳೂರು ನಟರಾಜ
ಸಂಡೂರು ಶ್ರೀನಿವಾಸ
ಕಂಪ್ಲಿ ಚಂದ್ರಕಲಾ
ಹುಬ್ಬಳ್ಳಿ ಸುಧಾ
PVR CINEMAS
Cinépolis
ಧಾರವಾಡ ಪದ್ಮ
ಬಿಜಾಪುರ ಡ್ರಿಮ್‌ಲ್ಯಾಂಡ್
ಬೆಳಗಾಂ ನರ್ತಕಿ
KAPEEL CINEMA
INOX LIVE THE MOVIE
ಗದಗ ವೆಂಕಟೇಶ
ರಾಣೆಬೆನ್ನೂರು ಶಕ್ತಿ
ಗೋಕಾಕ್ ಆನಂದ್
ರಬಕವಿ ಶ್ರೀನಿವಾಸ
ಹಾವೇರಿ ಸರಸ್ವತಿ
ಇಳಕಲ್ ನಾರಾಯಣ
ಮುಧೋಳ ಸೂರ್ಯವಂಶಿ
ಲಕ್ಷ್ಮೇಶ್ವರ ರವಿ
ಸಿಂಧಗಿ ವಿನಾಯಕ
ಹರೋಗೆರೆ ಚಂದ್ರಮ
ತಾಳಿಕೋಟೆ ಮಹಾವೀರ
ಬಾದಾಮಿ ಶೀತಲ್
ಚಿಕ್ಕೇರೂರ್ ಪವನ್
ನಿಡಗುಂದಿ ಯಲಗುರೇಶ್ವರ
ಅಥಣಿ ದುರ್ಗಾಲಕ್ಷ್ಮೀ
ಜಮಖಂಡಿ ವಸಂತ
ರಾಮದುರ್ಗ ವೆಂಕಟೇಶ
ಬೈಲಹೊಂಗಲ ಸಂಗಂ
ನಿಪ್ಪಾಣಿ
MAGNUM CINEMAS
ಗುಲ್ಬರ್ಗಾ
SHETTY'S MULTIPLEX
ಸಂಗಂ
INOX LIVE THE MOVIE
MIRAJ
ಗಂಗಾವತಿ ಕನಕದುರ್ಗ
ಕೊಪ್ಪಳ ಶಿವ
ಬೀದರ್ ಸಪ್ನ ಮಹಲ್
ರಾಯಚೂರು MIRAJ
ರಾಯಚೂರು ಪದ್ಮನಾಭ
ಕಾರಟಗಿ ಲಕ್ಷ್ಮೀ
ಸಿರವಾರ ಶಿವಮಾತಾ
ದೇವದುರ್ಗ ಆನಂದ್
ಹುಣಸಗಿ ತ್ರಿಶೂಲ್
ಸಿಂಧನೂರು ಸಂಗಮೇಶ್ವರ
ಶಹಾಪುರ ಭವಾನಿ
ಮಸ್ಕಿ ವಿಜಯ್
ಮಾನ್ವಿ ಅಪರ್ಣ
ಕನಕಗಿರಿ ನಂದಿ
ಮಂಗಳೂರು SP ಸಿನಿಮಾಸ್
PVR CINEMAS
Cinépolis
Bharath Cinemas
ಮಣಿಪಾಲ್ INOX LIVE THE MOVIE
Bharath Cinemas
ಕುಂದಾಪುರ Bharath Cinemas
ಸುರತ್ಕಲ್ ಸಿನಿ ಗ್ಯಾಲಕ್ಸಿ
ಪಡುಬಿದ್ರಿ Bharath Cinemas
ಉಡುಪಿ ಕಲ್ಪನಾ
ಹಾಗೂ ರಾಜ್ಯಾದ್ಯಂತ

ಮುರುಘಾಶ್ರೀ ವಿರುದ್ಧ 694 ಪುಟಗಳ ಆರೋಪ ಪಟ್ಟಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ, ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾದ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ನ್ಯಾಯಾಲಯಕ್ಕೆ ಗುರುವಾರ 694 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ತನಿಖೆಯನ್ನು ಭಾಗಶಃ ಪೂರ್ಣಗೊಳಿಸಿರುವ ಪೊಲೀಸರು, ದೋಷಾರೋಪ ಪಟ್ಟಿಯ ತಲಾ 347 ಪುಟಗಳ ಎರಡು ಪ್ರತಿಗಳನ್ನು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸಲ್ಲಿಸಿದರು. ಒಂದರಲ್ಲಿ ಮುರುಘಾ ಶರಣರು ಹಾಗೂ ಮತ್ತೊಂದರಲ್ಲಿ ಇತರ ಆರೋಪಿಗಳಾದ ಹಾಸ್ಟಲ್‌ನ ಮಹಿಳಾ ವಾರ್ಡನ್ ಮತ್ತು ಪರಮಶಿವಯ್ಯ ವಿರುದ್ಧ ದೋಷಾರೋಪದ ವಿವರಗಳಿವೆ.

'ಮೂವರ ವಿರುದ್ಧದ ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ. 17 ವರ್ಷದ ಬಾಲಕ ಹಾಗೂ ಗಂಗಾಧರಯ್ಯ ಕೃತ್ಯದಲ್ಲಿ ಭಾಗಿಯಾಗಿರುವುದು ಇನ್ನೂ ಖಚಿತವಾಗಿಲ್ಲ. ತನಿಖೆ ಮುಂದುವರಿಯಲಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ತಿಳಿಸಿದ್ದಾರೆ.

ಐಪಿಸಿ 376 (ಅತ್ಯಾಚಾರ), ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ (ಪೋಕ್ಸೊ), ಪರಿಶಿಷ್ಟ ಜಾತಿ, ಪಂಗಡ ದೌರ್ಜನ್ಯ ತಡೆ ಕಾಯ್ದೆ, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ, ಬಾಲನ್ಯಾಯ ಕಾಯ್ದೆ ಅಡಿ ಆ.28ರಂದು ಐವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿತ್ತು.

ಹಾಸನಾಂಬಾ ದೇವಿ ದರ್ಶನಕ್ಕೆ ತೆರೆ: ಆರು ಲಕ್ಷ ಭಕ್ತರು ಭೇಟಿ

ಹಾಸನ: ಇಲ್ಲಿನ ಹಾಸನಾಂಬಾ ಜಾತ್ರೆ ಗುರುವಾರ ಮುಕ್ತಾಯವಾಗಿದ್ದು, ₹ 1 ಸಾವಿರ ಹಾಗೂ ₹ 300 ಬೆಲೆಯ ವಿಶೇಷ ದರ್ಶನದ ಟಿಕೆಟ್, ಲಾಡು ಮಾರಾಟದಿಂದ ₹ 1.70 ಕೋಟಿ ಸಂಗ್ರಹವಾಗಿದೆ. 6 ಲಕ್ಷಕ್ಕೂ ಅಧಿಕ ಭಕ್ತರು ಭೇಟಿ ನೀಡಿದ್ದಾರೆ. ಕಾಣಿಕೆ ಹುಂಡಿ ಹಣದ ಎಣಿಕೆ ನಡೆಯಬೇಕಾಗಿದೆ.

ಜಾತ್ರೆ ಕೊನೆಯ ದಿನ ಗುಡಿಯೊಳಗೆ ದೀಪ ಹಚ್ಚಿ, ಹೂವು, ನೈವೇದ್ಯ ಸಮರ್ಪಿಸಿ, ಮಧ್ಯಾಹ್ನ 12.47ಕ್ಕೆ ಬಾಗಿಲು ಮುಚ್ಚಲಾಯಿತು. ಈ ವರ್ಷ ಅ. 13 ರಿಂದ 27 ರವರೆಗೆ ಗುಡಿಯ ಬಾಗಿಲು ತೆದಿದ್ದು, 12 ದಿನ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಮುಂದಿನ ವರ್ಷ ನ. 2ರಿಂದ 15ರವರೆಗೆ ದೇವಿ ದರ್ಶನ ನಿಗದಿಯಾಗಿದೆ.

ಜನರ ಸಬಲೀಕರಣ ಮುಖ್ಯ –ಬಿಜೆಪಿ

ನವದೆಹಲಿ (ಪಿಟಿಐ): ಮತದಾರರನ್ನು ಅವಲಂಬಿತರಾಗಿಸುವ ಬದಲು ಅವರ ಸಬಲೀಕರಣ ಹಾಗೂ ಸಾಮರ್ಥ್ಯ ವೃದ್ಧಿಗೆ ರಾಜಕೀಯ ಪಕ್ಷಗಳು ಒತ್ತು ನೀಡಬೇಕು ಎಂದು ಬಿಜೆಪಿ ಹೇಳಿದೆ.
ಉಚಿತ ಕೊಡುಗೆಗಳು, ಕಲ್ಯಾಣ ಕಾರ್ಯಕ್ರಮಗಳ ನಡುವೆ ವ್ಯತ್ಯಾಸವಿದೆ ಎಂದು ಪ್ರತಿಪಾದಿಸಿದೆ.

ನಿಧನ ವಾರ್ತೆ

ಹ. ಸೋಮಶೇಖರ್



ಬೆಂಗಳೂರು: ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಜಿಕೆವಿಕೆಯಲ್ಲಿ ಪ್ರೊಫೆಸರ್ ಆಗಿ ಸ್ವಯಂ ನಿವೃತ್ತಿ ಪಡೆದಿದ್ದ, ಹಲವು ಚಳವಳಿಗಳಲ್ಲಿ ಭಾಗವಹಿಸಿದ್ದ ಲೋಹಿಯಾವಾದಿ ಹ. ಸೋಮಶೇಖರ್ (65) ಮಂಗಳವಾರ ಹೃದಯಾಘಾತದಿಂದ ನಿಧನರಾದರು. ಅಂತ್ಯಸಂಸ್ಕಾರ ಕೋಲಾರದಲ್ಲಿ ಬುಧವಾರ ನೆರವೇರಿತು. ಅವರಿಗೆ ಪತ್ನಿ ಇದ್ದಾರೆ.

ಬಂಡಾಯ ಸಾಹಿತ್ಯ ಚಳವಳಿಯಲ್ಲಿ ತೊಡಗಿದ್ದ ಸೋಮಶೇಖರ್ ಅವರು 'ಅಹಿಂದ' ಹುಟ್ಟಲು ಕಾರಣವಾಗಿದ್ದವರಲ್ಲಿ ಒಬ್ಬರಾಗಿದ್ದರು. ಸಮಾಜೋ–ರಾಜಕೀಯ ಹಾಗೂ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಲೇಖನಗಳನ್ನು ಪತ್ರಿಕೆಗಳಿಗೆ ಬರೆಯುತ್ತಿದ್ದ ಅವರು, ಕೆಲವು ಕೃತಿಗಳನ್ನೂ ಹೊರತಂದಿದ್ದರು. ಲೋಹಿಯಾವಾದ ಹಾಗೂ ಸಮಾಜವಾದದ ಕುರಿತು ಅವರು ಅನೇಕ ಯುವಕರಲ್ಲಿ ಅರಿವು ಮೂಡಿಸಿದ್ದರು.

ಹಿರೇಮಠಗೆ 'ಬಾದ್‌ಶಾ ಖಾನ್ ಪ್ರಶಸ್ತಿ'



ಎಸ್‌.ಆರ್‌. ಹಿರೇಮಠ

ಧಾರವಾಡ: ಸಮಾಜ ಪರಿವರ್ತನ ಸಮುದಾಯದ ಸಂಸ್ಥಾಪಕ ಎಸ್.ಆರ್. ಹಿರೇಮಠ ಅವರಿಗೆ ಮಧ್ಯಪ್ರದೇಶದ ಗ್ವಾಲಿಯರ್‌ನ ಐಟಿಎಂ ವಿಶ್ವವಿದ್ಯಾಲಯ 'ಬಾದ್‌ಶಾ ಖಾನ್ ಸ್ಮಾರಕ ಪ್ರಶಸ್ತಿ' ನೀಡಿ ಗೌರವಿಸಿದೆ. ಪ್ರಶಸ್ತಿ ₹ 1 ಲಕ್ಷ ನಗದು ಮತ್ತು ಪ್ರಶಂಸಾಪತ್ರ ಒಳಗೊಂಡಿದೆ.

ಗಡಿನಾಡಿನ ಗಾಂಧಿ ಎಂದೇ ಹೆಸರಾದ ಸ್ವಾತಂತ್ರ್ಯ ಹೋರಾಟಗಾರ ಖಾನ್ ಅಬ್ದುಲ್ ಗಫಾರ್ ಖಾನ್ ಅವರ ಸ್ಮರಣಾರ್ಥ ಪ್ರಶಸ್ತಿಯನ್ನು ನೀಡಲಾಗುತ್ತದೆ.

ಹಿರೇಮಠ ಅವರ ಹೋರಾಟಗಳನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ ಎಂದು ವಿಶ್ವವಿದ್ಯಾಲಯ ಹೇಳಿದೆ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ವಿಶೇಷ ತಹಶೀಲ್ದಾರ್‌ರವರ ಕಛೇರಿ, (ಕೆ.ಎಸ್.ಎಫ್.ಸಿ) ಸರ್ಕಲ್–2, ಸಾಹುಕಾರ್ ಚನ್ನಯ್ಯ ರಸ್ತೆ, ಶ್ರೀಕೃಷ್ಣಧಾಮ ಎದುರು, ಸರಸ್ವತಿಪುರಂ, ಮೈಸೂರು–570 009. ದೂ:0821–2344524

ನಂ.ಕರಾಹಸಂ/ಮೈ/ವಿತ/ಎ–524/2022–23/1066 ದಿನಾಂಕ: 19–10–2022

ಬಹಿರಂಗ ಹರಾಜು ಪ್ರಕಟಣೆ

ಈ ಕೆಳಗೆ ಕಾಣಿಸಿದ ಕಲಂ (1) ರ ಘಟಕಗಳ ಬಾಬ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ತೆಗೆದುಕೊಂಡ ಸಾಲದ ಬಾಕಿ ಹಣವನ್ನು ಸಂಸ್ಥೆಗೆ ಮರು ಪಾವತಿ ಮಾಡದೇ ಇದ್ದುದರಿಂದ, **(1) ಡಾ. ಮಹೇಶ್ ಚಂದ್ ಬಿನ್ ಮಂಚೇಗೌಡ ಹಾಗೂ (2) ಶ್ರೀಮತಿ ಚೇತನಾಸಿಂಗ್ ಬಿನ್ ಸಿ.ಎಸ್.ಸಿಂಗ್ ರವರು ಸಾಲಗಾರರಾಗಿರುವ ಮತ್ತು ಡಾ. ಮಹೇಶ್ ಚಂದ್ ಬಿನ್ ಮಂಚೇಗೌಡ** ಹಕ್ಕಿನಲ್ಲಿರುವ ಪ್ರಾಥಮಿಕ ಭದ್ರತೆಯ ಈ ಕೆಳಗೆ ಕಾಣಿಸಿರುವ ಕಲಂ (2) ರ ಸ್ಥಿರಾಸ್ತಿ ಜಮೀನನ್ನು "ಎಲ್ಲಿ ಹೇಗಿವೆಯೋ ಹಾಗೆಯೇ" ಭೂಕಂದಾಯ ಬಾಕಿಯಂತೆ ಪರಿಗಣಿಸಿ ವಸೂಲು ಮಾಡಲು ಕೆಳಗೆ ಕಲಂ (3) ರಲ್ಲಿ ಕಾಣಿಸಿದ ಸ್ಥಳದಲ್ಲಿ ಮತ್ತು ದಿನಾಂಕದಂದು ಹರಾಜು ನಡೆಸಲಾಗುವುದು. ಸದರಿ ಎರಡು ಹರಾಜು ಪ್ರಕ್ರಿಯೆಯಲ್ಲಿ ಬಾಗವಹಿಸಲಿಚ್ಚಿಸುವವರು ಪ್ರತಿ ಹರಾಜಿಗೆ ತಲಾ **ರೂ.5.00,000/– (ಐದು ಲಕ್ಷ ರೂಪಾಯಿಗಳು ಮಾತ್ರ)** ದಂತೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು ಶಾಖೆಯ ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಮುಖೇನ ಠೇವಣಿ ಮೊಬಲಗನ್ನು ಪಾವತಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. ಜಮೀನು ಕೊಳ್ಳಲು ಹರಾಜಿನಲ್ಲಿ ಅಂತಿಮ ಬಿಡ್ಡುದಾರರು ಸ್ಥಳದಲ್ಲಿಯೇ ಬಿಡ್ ಮಾಡಿದ ಮೊತ್ತದ 1/4ನೇ ಭಾಗದ ಹಣವನ್ನು ಸ್ಥಳದಲ್ಲಿ ಪಾವತಿಸಿ ಉಳಿದ ಪೂರ್ತಿ ಹಣವನ್ನು ಹರಾಜು **ದಿನಾಂಕದಿಂದ 15 ದಿನಗಳೊಳಗಾಗಿ** ತಪ್ಪದೇ ಪಾವತಿ ಮಾಡತಕ್ಕದ್ದು.

ಘಟಕದ ಬಾಕಿದಾರರ ಹೆಸರು ಮತ್ತು ವಿಳಾಸ	ಸಾಲಗಾರರ ಸ್ಥಿರಾಸ್ತಿಯ ವಿವರ	ಬಹಿರಂಗ ಹರಾಜು ಬಗ್ಗೆ ನಿಗದಿಪಡಿಸಿದ ದಿನಾಂಕ & ಸ್ಥಳ
ಡಾ.ಮಹೇಶ್ ಚಂದ್ ಮತ್ತು ಶ್ರೀಮತಿ ಚೇತನಾಸಿಂಗ್, ಮಾಲೀಕರು, ಮೆ.ವೆಂಕಟೇಶ್ವರ ಸಿರಾಮಿಕ್ ಅಂಡ್ ಟೈಲ್ಸ್, ದಡದಹಳ್ಳಿ, ಜಯಪುರ ಹೋಬಳಿ, ಮೈಸೂರು ತಾ.	ಮೈಸೂರು ತಾಲ್ಲೂಕು ಜಯಪುರ ಹೋಬಳಿ ದಡದಹಳ್ಳಿ ಗ್ರಾಮದ ಸ.ನಂ.176/1 ಹೊಸ ನಂ.176/5 ರಲ್ಲಿ 1.10 ಗುಂಟೆ ಕೈಗಾರಿಕೆ ಉದ್ದೇಶಕ್ಕಾಗಿ ಭೂಪರಿವರ್ತಿತ ಜಮೀನು.	ದಿನಾಂಕ: 16–11–2022 ಬುಧವಾರ ಬೆಳಿಗ್ಗೆ 11.00 ಗಂಟೆಗೆ ಆಸ್ತಿ ಇರುವ ಸ್ಥಳದಲ್ಲಿ
ಡಾ.ಮಹೇಶ್ ಚಂದ್, ಮಾಲೀಕರು, ಮೆ.ವೆಂಕಟೇಶ್ವರ ಬ್ರಿಕ್ಸ್ ವರ್ಕ್ಸ್, ದಡದಹಳ್ಳಿ, ಜಯಪುರ ಹೋಬಳಿ, ಮೈಸೂರು ತಾ.	ಮೈಸೂರು ತಾಲ್ಲೂಕು ಜಯಪುರ ಹೋಬಳಿ ದಡದಹಳ್ಳಿ ಗ್ರಾಮದ ಸ.ನಂ.180/4 ರಲ್ಲಿ 1.09 ಗುಂಟೆ ಸ.ನಂ.176/1 ಹೊಸ ನಂ.176/5 0.20 ಗುಂಟೆ ಒಟ್ಟು 1.29 ಗುಂಟೆ ಕೈಗಾರಿಕೆ ಉದ್ದೇಶಕ್ಕಾಗಿ ಭೂಪರಿವರ್ತಿತ ಜಮೀನು.	ದಿನಾಂಕ: 16–11–2022 ಬುಧವಾರ ಬೆಳಿಗ್ಗೆ 11.30 ಗಂಟೆಗೆ ಆಸ್ತಿ ಇರುವ ಸ್ಥಳದಲ್ಲಿ

ಹರಾಜು ಷರತ್ತುಗಳು: (1) ಹರಾಜಿನಲ್ಲಿ ಭಾಗವಹಿಸುವವರು ಭಾರತದ ಪ್ರಜೆಯಾಗಿರತಕ್ಕದ್ದು, ಹರಾಜಿಗೆ ಮುನ್ನ ಬಿಡ್ಡುದಾರಿಕೆ ಫಾರಂ ಪಡೆದು ಪೂರ್ಣ ರೂಪದಲ್ಲಿ ತುಂಬಿ ಠೇವಣಿ ಮೊತ್ತ ಪ್ರತಿ ಹರಾಜಿಗೆ **ರೂ.5,00,000/– (ಐದು ಲಕ್ಷ ರೂಪಾಯಿಗಳು ಮಾತ್ರ) ಗಳಂತೆ** ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು ಶಾಖೆ, ಇವರ ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಮುಖೇನ ನೀಡಿ ನೋಂದಣಿ ಮಾಡಿಕೊಳ್ಳತಕ್ಕದ್ದು ಹಾಗೂ ಬಿಡ್ಡುದಾರರು ಖುದ್ದು ಹಾಜರಿರುವುದು, ಬಿಡ್ಡುದಾರರ ಪರವಾಗಿ ಇತರೆಯವರು ಹಾಜರಿಯಾಗುವಂತಿಲ್ಲ. (2) ಬಿಡ್ಡುದಾರರು ಅವರ ಮೂಲ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್‌ಗಳನ್ನು ಹರಾಜು ಸಂದರ್ಭದಲ್ಲಿ ತೋರಿಸಬೇಕು ಹಾಗೂ ಜೆರಾಕ್ಸ್ ಪ್ರತಿಯನ್ನು ಸಲ್ಲಿಸತಕ್ಕದ್ದು. ಬಿಡ್ಡುದಾರರು ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳನ್ನು ಸಲ್ಲಿಸತಕ್ಕದ್ದು. (3) ಬಹಿರಂಗ ಹರಾಜು ಮುಖೇನ ಮಾರಾಟಕ್ಕಿರುವ ಆಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗಿರುವ" ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (4) ಕೈಗಾರಿಕಾ ಉದ್ದೇಶಕ್ಕೆ ಭೂ ಪರಿವರ್ತನೆಯಾದ ಮೇಲ್ಕಂಡ ಸ್ಥಿರಾಸ್ತಿಯನ್ನು ಸಕ್ಷಮ ಪ್ರಾಧಿಕಾರದಲ್ಲಿ ಬಾಕಿ ಇರುವ ಎಲ್ಲಾ ತೆರಿಗೆಗಳನ್ನು ಪಾವತಿಸಿ ಖಾತೆ ಮಾಡಿಸಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಬಿಡ್‌ದಾರರದ್ದಾಗಿರುತ್ತದೆ. (5) ಹರಾಜಿನಲ್ಲಿ ವಿಜೇತರಾದ (ಅಂತಿಮ ಬಿಡ್ಡುದಾರರು) ಆಖೈರು ಬಿಡ್ಡು ಮೊಬಲಗಿನ 25% ರಷ್ಟನ್ನು ಸ್ಥಳದಲ್ಲೇ ಪಾವತಿಸಿ, ಉಳಿಕೆ ಮೊಬಲಗನ್ನು ಹರಾಜು ನಡೆಸಿದ ದಿನಾಂಕದಿಂದ **15 ದಿವಸಗಳೊಳಗಾಗಿ** ತಪ್ಪದೇ ಪಾವತಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ಪಾವತಿಸಿರುವ ಮೊತ್ತವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (6) ಹರಾಜಿನ ದಿನಾಂಕದಿಂದ **90 ದಿವಸಗಳೊಳಗಾಗಿ** ಆಕ್ಷೇಪಣೆ/ತಂಟೆ/ತಕರಾರು/ಭಿನ್ನಾಭಿಪ್ರಾಯ/ನ್ಯಾಯಾಲಯದ ಪ್ರಕರಣಗಳು ಉಂಟಾದಲ್ಲಿ ಸದರಿ ಹರಾಜನ್ನು ಅಂಗೀಕರಿಸುವ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುವರು. (7) ಸ್ಥಿರಾಸ್ತಿಯ ಭೂಕಂದಾಯ, ನೀರು, ವಿದ್ಯುತ್, ವಾಣಿಜ್ಯ ತೆರಿಗೆ, ಯಾವುದೇ ಬಾಕಿ ಅಥವಾ ಯಾವುದೇ ಇಲಾಖೆಯ ಬಾಕಿಯನ್ನು ಖರೀದಿದಾರರೇ ಭರಿಸಲು ಬಾಧ್ಯಸ್ಥರು. (8) ಕರ್ನಾಟಕ ಭೂಕಂದಾಯ ಕಾಯ್ದೆಯ ಅನ್ವಯ ಸದರಿ ಹರಾಜು ಸಂಬಂಧಪಟ್ಟ ಉಪವಿಭಾಗಾಧಿಕಾರಿ ಯವರಿಂದ ಸ್ಥಿರೀಕರಣದ ಆದೇಶಕ್ಕೆ ಒಳಪಟ್ಟಿದೆ. ನಂತರ ಸ್ಥಿರಾಸ್ತಿಯನ್ನು ಆಖೈರು ಬಿಡ್ಡುದಾರರಿಗೆ ನೋಂದಣಿ ಮಾಡಿಸಲು ಸೇಲ್ಸ್ ಸರ್ಟಿಫಿಕೇಟನ್ನು ಕೊಡಲಾಗುವುದು. ಇದಕ್ಕೆ ತಗಲುವ ನೋಂದಣಿ, ಸ್ಟಾಂಪ್ ಶುಲ್ಕ ಪ್ರಕ್ರಿಯೆ ಹಾಗೂ ಇತರೆ ಶುಲ್ಕಗಳನ್ನು ಆಖೈರು ಬಿಡ್ಡುದಾರರೇ ಭರಿಸತಕ್ಕದ್ದು. ಸಕ್ಷಮ ಪ್ರಾಧಿಕಾರ ಯಾವುದಾದರೂ ದಾಖಲಾತಿಗಳನ್ನು ಅಪೇಕ್ಷಿಸಿದಲ್ಲಿ ಬಿಡ್ಡುದಾರನು ಒದಗಿಸಲು ಬದ್ಧರಾಗಿರಬೇಕು. (9) ಹರಾಜಿನ ಬಗ್ಗೆ ಹೆಚ್ಚಿನ ವಿವರಗಳು, ಮಾಹಿತಿ ಮತ್ತು ಷರತ್ತುಗಳನ್ನು **ಈ ಕೆಳಗೆ ಸಹಿ ಮಾಡಿರುವವರಿಂದ ಅಥವಾ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು 0821–2344524 ಅಥವಾ ವ್ಯವಸ್ಥಾಪಕರು (ವಸೂಲಿ) ಶಾಖೆರವರಿಂದ** ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ವಿಶೇಷ ತಹಶೀಲ್ದಾರ್
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಚೇರಿ, ಕೆಆರ್ ವೃತ್ತ, ನೃಪತುಂಗ ರಸ್ತೆ, ಬೆಂಗಳೂರು-01. ದೂರವಾಣಿ: 080-22291847
ಸಂ: ದೈಶಿ/ಕ್ರೀಡಾ. ಸಮವಸ್ತ್ರ ಟೆಂಡರ್/2022-23 ದಿನಾಂಕ: 27.10.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿ)

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು–01 ಇವರು ಕೆಟಿಪಿಪಿ ಕಾಯ್ದೆ 1999ರ ಅನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ವಾಣಿಜ್ಯ ಬಿಡ್‌ಗಳು) 2022–23ನೇ ಸಾಲಿಗೆ ನೋಂದಾಯಿತ ಮತ್ತು ಅರ್ಹ ಸಂಸ್ಥೆಗಳಿಂದ ವಿದ್ಯಾರ್ಥಿಗಳಿಗೆ ಕ್ರೀಡಾ ಉಡುಪುಗಳ ಸರಬರಾಜಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://eproc.karnataka.gov.in ಮೂಲಕ ಟೆಂಡರ್ ಆಹ್ವಾನಿಸಿದೆ. ಈ ಟೆಂಡರ್‌ನಲ್ಲಿ ನೋಂದಾಯಿತ ಸಂಸ್ಥೆಗಳು ಭಾಗವಹಿಸಬಹುದು. ವಿವರವಾದ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ www.eproc.karnataka.gov.in ಹಾಗೂ www.schooleducation.kar.nic.in ಮೂಲಕ ಡೌನ್‌ಲೋಡ್ ಮಾಡಿಕೊಂಡು ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಲ್ಲಿಯೇ ಸಲ್ಲಿಸಬೇಕು.

ಸಹಿ/- ನಿರ್ದೇಶಕರು (ಮೈನಾರಿಟಿ),
ಸಾರ್ವಜನಿಕ ಶಿಕ್ಷಣ ಇಲಾಖೆ.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕು, ಕಸಬಾ ಹೋಬಳಿ, ಅರೇಹಳ್ಳಿ ಗ್ರಾಮದ ರಿ.ಸರ್ವೆ ನಂ. 47 ರಲ್ಲಿ ಸ್ಥಿತಗೊಂಡಿರುವ, 11 ಎಕರೆ 16 ಗುಂಟೆ ವಿಸ್ತೀರ್ಣವುಳ್ಳ ಕೃಷಿ ಭೂಮಿಗೆ ಸಂಬಂಧಿತ ಮಾಲಿಕರಾದ ಶ್ರೀ. **ಆರ್. ಶಂಕರಮೂರ್ತಿ** ಬಿನ್ ಶ್ರೀ. ಎಸ್. ರಂಗಪ್ಪ, ವಿಳಾಸ ಮಾಲಪ್ಪನ ಹಟ್ಟಿ ಮಠ ರಸ್ತೆ, ಬನಶಂಕರಿ ಬಡಾವಣೆ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, ಆಧಾರ್ ನಂ. 5455 4179 3642 ಮತ್ತು ಶ್ರೀ. **ಆರ್. ಮೃತ್ಯುಂಜಯ** ಬಿನ್ ಶ್ರೀ. ಎಸ್. ರಂಗಪ್ಪ, ವಿಳಾಸ ಕನಕ ಸ್ಟ್ರೀಟ್, ಬುರುಜನಹಟ್ಟಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, ಆಧಾರ್ ನಂ. 8152 2289 3010 (**"ಮಾಲೀಕರು"**) ಇವರುಗಳಿಂದ, ಇಲ್ಲಿ ಕೆಳಗೆ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ **"ಷೆಡ್ಯೂಲ್ ಸ್ವತ್ತು"** ಎನ್ನಲಾಗುವ ಸ್ವತ್ತನ್ನು ಖರೀದಿಸಲು ಉದ್ದೇಶಿಸಿರುತ್ತಾರೆ.

ವೈಯಕ್ತಿಕವಾಗಿ ಯಾವುದೇ ವ್ಯಕ್ತಿಯಾಗಲಿ, ಹಿಂದೂ ಅವಿಭಕ್ತ ಕುಟುಂಬವಾಗಲಿ, ಕಂಪನಿಯಾಗಲಿ, ಬ್ಯಾಂಕ್‌ಗಳಾಗಲಿ, ಹಣಕಾಸು ಸಂಸ್ಥೆಗಳಾಗಲಿ, ನಾನ್ ಬ್ಯಾಂಕಿಂಗ್ ಹಣಕಾಸು ಸಂಸ್ಥೆಗಳಾಗಲಿ, ಸಂಸ್ಥೆಯಾಗಲಿ, ಸಂಸ್ಥಾಪಿತ ಅಥವಾ ಸಂಸ್ಥಾಪಿತವಲ್ಲದ ವ್ಯಕ್ತಿಗಳ ಸಂಘವಾಗಲಿ ಅಥವಾ ವ್ಯಕ್ತಿಗಳ ಅಂಗವಾಗಲಿ, ಲೇವಾದೇವಿಗಾರರಾಗಲಿ ಮತ್ತು/ಅಥವಾ ಸಾಲ ನೀಡುವವರಾಗಲಿ, ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಸ್ವತ್ತಿನ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಮಾರಾಟ, ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್, ವಿನಿಯಮಯ, ಅಡಮಾನ, ಈಡು, ಚಾರ್ಜ್, ಉಡುಗೊರೆ, ಟ್ರಸ್ಟ್, ಅನುವಂಶಿಕ, ಸ್ವಾಧೀನ, ಭೋಗ್ಯ, ಭಾಡಿಗೆ, ಮೈಂಟೇನನ್ ಈಸ್‌ಮೆಂಟ್, ಲೈಸನ್ಸ್, ಬಿಕ್ವೆಥ್, ಷೇರು, ಅಸೈನ್‌ಮೆಂಟ್, ಲೀನ್, ಅಟ್ಯಾಚ್‌ಮೆಂಟ್, ಅಭಿವೃದ್ಧಿ ಹಕ್ಕುಗಳು, ರಸ್ತೆ ಹಕ್ಕು, ಲಿಸ್ಪೆಂಡನ್ಸ್, ಮೀಸಲು, ಒಪ್ಪಂದ, ಎಫ್‌ಎಸ್‌ಐ ಬಳಕೆ, ಅಭಿವೃದ್ಧಿ ಹಕ್ಕುಗಳು ಅಥವಾ ಇನಿತರ ಯಾವುದೇ ಹೊಣೆಗಾರಿಕೆ ಅಥವಾ ಬದ್ಧತೆ ಅಥವಾ ಇನ್ನಾವುದೇ ಅಥವಾ ಯಾವುದೇ ಸ್ವರೂಪದ ಹಕ್ಕು ಡಿಮಾಂಡ್ ರೀತಿಯಾಗಿ ಯಾವುದೇ ಆಕ್ಷೇಪಣೆ, ಕ್ಲೇಮ್, ಹಕ್ಕು, ಬಾದ್ಯತೆ ಮತ್ತು/ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಏಳು (07) ದಿನಗಳ ಅವಧಿಯೊಳಗೆ, ಈ ಕೆಳಗೆ ಸಹಿ ಹಾಕಿರುವವರಿಗೆ ಪೂರಕ ದಾಖಲಾತಿಗಳ ಸಮೇತ ಮಾಹಿತಿ ನೀಡಬೇಕೆಂದು ಕೋರಲಾಗಿದೆ. ನಿಗದಿತ ಅವಧಿಯ ನಂತರ ಎದುರಾಗುವ ಅಂತಹ ವ್ಯಕ್ತಿಯ ಅಥವಾ ವ್ಯಕ್ತಿಗಳ ಯಾವುದೇ ಕ್ಲೇಮ್ ಅಥವಾ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು/ಅಥವಾ ಅವುಗಳನ್ನು ಕೈಬಿಡಲಾಗುತ್ತದೆ.

ಷೆಡ್ಯೂಲ್ ಸ್ವತ್ತು

ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಕಸಬಾ ಹೋಬಳಿ, ಅರೆಹಳ್ಳಿ ಗ್ರಾಮದ ರಿ.ಸರ್ವೆ ನಂ. 47ರಲ್ಲಿ ಸ್ಥಿತಗೊಂಡಿರುವ **11 ಎಕರೆ 16 ಗುಂಟೆ** ವಿಸ್ತೀರ್ಣವುಳ್ಳ ಕೃಷಿ ಜಮೀನಿನ ಮೇಲ್ಭಾಗದ ಅಥವಾ ಕೆಳಭಾಗದ ಎಲ್ಲಾ ಹಕ್ಕುಗಳು, ಸವಲತ್ತುಗಳು ಸೇರಿದಂತೆ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:
ಪೂರ್ವಕ್ಕೆ: ಶ್ರೀ ಅನಂತ ಶೆಟ್ಟಿ ಯವರ ಮನೆ; ಪಶ್ಚಿಮಕ್ಕೆ: ಹಳ್ಳ; ಉತ್ತರಕ್ಕೆ: ರಸ್ತೆ; ಮತ್ತು ದಕ್ಷಿಣಕ್ಕೆ: ರಾಹೆ–13 ರಸ್ತೆ.

ಮಂಜುನಾಥ ರೆಡ್ಡಿ. ಆರ್, ವನ್ಯ & ಅಸೋಸಿಯೇಟ್ಸ್, ವಕೀಲರು ಮತ್ತು ಕನ್ಸಲ್ಟಂಟ್ಸ್
ನಂ.1932, 15ನೇ ಎ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ನ್ಯಾಯಾಂಗ ಬಡಾವಣೆ,
ದಿನಾಂಕ: 28–10–2022 ಜಿಕೆವಿಕೆ ಅಂಚೆ, ಬೆಂಗಳೂರು–560 065. ಇ–ಮೇಲ್: vanyaassociates@gmail.com

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ನಮ್ಮ ಮೆಟ್ರೋ namma metro — Azadi Ka Amrit Mahotsav

(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಇ-ಮೇಲ್ : contactus@bmrc.co.in ವೆಬ್‌ಸೈಟ್ : www.bmrc.co.in
ಸಂಖ್ಯೆ: ಬಿಎಂಆರ್‌ಸಿಎಲ್/ಓಮತ್ತುಎಂ/ಐಟಿ/ಓಟಿ-01/2022 ದಿನಾಂಕ: 28.10.2022

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್, ಇವರು **''ನಿಲ್ದಾಣಗಳು ಮತ್ತು ಡಿಪೋಗಳಲ್ಲಿ ಐಟಿ ನೆಟ್‌ವರ್ಕ್ ಮೂಲಸೌಕರ್ಯದ ಅಭಿವೃದ್ಧಿ''** ಕಾಮಗಾರಿಗೆ ಅರ್ಹ ದೇಶೀಯ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಅಂದಾಜು ಮೊತ್ತ: **ರೂ.24,65,61,295/-**. ಟೆಂಡರ್ ಭದ್ರತಾ ಠೇವಣಿ : **ರೂ.24,65,613/-**. ಆನ್‌ಲೈನ್ ಮೂಲಕ ಟೆಂಡರ್ ದಸ್ತಾವೇಜುಗಳ ಮಾರಾಟದ ಅವಧಿ: **28.10.2022 ರಿಂದ 16.11.2022ರ ಮಧ್ಯರಾತ್ರಿಯವರೆಗೆ.** ಪ್ರೀ–ಬಿಡ್ ಸಭೆ ದಿನಾಂಕ: **14.11.2022, ಬೆಳಿಗ್ಗೆ 11.30 ಗಂಟೆಗೆ.** ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಸಮಯ: **23.11.2022, ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **23.11.2022, ಮಧ್ಯಾಹ್ನ 3.30 ಗಂಟೆಗೆ.** ಟೆಂಡರ್ ದಸ್ತಾವೇಜು ಬೆಲೆ: **ರೂ.59,000/-.** ಪೂರ್ಣಗೊಳಿಸುವ ಕಾಲಾವಧಿ: **03 ತಿಂಗಳು.** ಟೆಂಡರ್ ದಸ್ತಾವೇಜುಗಳನ್ನು ಬಿಎಂಆರ್‌ಸಿಎಲ್ ವೆಬ್‌ಸೈಟ್‌ನಿಂದಲೂ ಸಹ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: http://tender.bmrc.co.in

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು (ಓ ಮತ್ತು ಎಂ)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.49, ಪೂರ್ವ ವಿಭಾಗ, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560 001. ದೂ: 080-22265383, ವೆಬ್‌ಸೈಟ್ : www.kiadb.in
ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-27/13256/2022-23 ದಿನಾಂಕ: 27.10.2022

ಟೆಂಡರ್ ಆಹ್ವಾನ ಪ್ರಕಟಣೆ

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆ.ಪಿ.ಡಬ್ಲ್ಯೂ.ಡಿ ದರ್ಜೆ–3 ಮತ್ತು ಮೇಲ್ಪಟ್ಟು (ಸಿವಿಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ತುಮಕೂರು ಜಿಲ್ಲೆ ಮತ್ತು ತಾಲ್ಲೂಕು, ವಸಂತನರಸಾಪುರ 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ 30ಮೀ ಅಗಲದ ರಸ್ತೆಯನ್ನು ಮೇಲ್ದರ್ಜೆಗೇರಿಸುವುದು ಹಾಗೂ 18ಮೀ & 15ಮೀ ಅಗಲದ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚುವ ಕಾಮಗಾರಿ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **15.11.2022 ಸಂಜೆ 4.00 ಗಂಟೆವರೆಗೆ.** ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಮುಖ್ಯ ಅಭಿಯಂತರರು-1. ಕೆ.ಐ.ಎ.ಡಿ.ಬಿ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ದೂರವಾಣಿ ಸಂ: 080–29565353, 29566556, 29604556.
ಇ–ಮೇಲ್: splocaima-21@ka.gov.in
ಸಂ: SPLOCA/ADM/31/2022 ದಿನಾಂಕ:27.10.2022

ಪ್ರಕಟಣೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ರವರ ಕಛೇರಿಗೆ ಮತ್ತು ಇತರೆ ಸಕ್ಷಮ ಪ್ರಾಧಿಕಾರಿಗಳ ಕಛೇರಿಗಳಲ್ಲಿ ವಿವಿಧ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಬೆಲೆ ಬಾಳುವ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ. ಅದರಂತೆ ಸದರಿ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಹರಾಜು ಮಾಡಲು ಅದರ ಮೌಲ್ಯವನ್ನು ನಿಗದಿಪಡಿಸಲು ನೋಂದಾಯಿತ ಮತ್ತು ಅನುಮೋದಿತ ಮೌಲ್ಯಮಾಪಕರ ಸೇವೆಯ ಅವಶ್ಯಕತೆ ಈ ಕಛೇರಿಗೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ವರ್ಗಗಳಿಗೆ ಆಸಕ್ತಿಯುಳ್ಳ ನೋಂದಾಯಿತ ಮತ್ತು ಅನುಮೋದಿತ ಮೌಲ್ಯಮಾಪಕರು ತಮ್ಮ ದರಪಟ್ಟಿಗಳನ್ನು ಸಲ್ಲಿಸುವಂತೆ ಸೂಚಿಸಿದೆ.

Date of Publication: **28/10/2022**
Last date for submission of quotation and technical proposal: **05/11/2022**
Categories:
I. Furniture, Machinery, Electrical and Electronic items, Computers and Peripherals.
II. Jewelry. (Gold, Platinum, Silver, Diamond & other precious stones)
III. Vehicles
IV. Land and building.
Period of work: 21 days from work order.
Technical Qualifications: Registered and approved Valuer from Nationalized banks, Income tax, Enforcement Directorate.
Place for any query: O/o SPLOCA, IMA & other KPID cases, 3rd floor, Podium Block, V.V Towers, Bengaluru-560001.

ಸಹಿ/– ಜಂಟಿ ಕಾರ್ಯದರ್ಶಿ,
DIPR/CP/JA/2806/2022-23 ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು.

ಎಸ್.ಜೆ.ಎಂ ವಿದ್ಯಾಪೀಠ (ರಿ)

ಶ್ರೀ ಜಗದ್ಗುರು ಮುರುಘರಾಜೇಂದ್ರ ಬ್ರಹನ್ಮಠ, ಎಂ.ಕೆ.ಹಟ್ಟಿ, ಚಿತ್ರದುರ್ಗ–577502.

ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿನ ಸಹಾಯಕ ಪ್ರಾಧ್ಯಾಪಕರುಗಳ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ

ಎಸ್.ಜೆ.ಎಂ. ವಿದ್ಯಾಪೀಠ(ರಿ) ಆಶ್ರಯದಲ್ಲಿ ನಡೆಯುತ್ತಿರುವ ಧಾರವಾಡದ ಎಸ್.ಜೆ.ಎಂ.ವಿ. ಮಹಾಂತ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಮತ್ತು ರಾಣೆಬೆನ್ನೂರಿನ ಎಸ್.ಜೆ.ಎಂ.ವಿ.ಬಿ.ಎ.ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ ಶಿವಮೊಗ್ಗ ಇವರ ಪತ್ರಸಂಖ್ಯೆ: 1) ಅರ್ಥಶಾಸ್ತ್ರ ಪ್ರಾಕಶಿ:ಕಾಶಿಇ294:ಬ್ಯಾಕ್‌ಲಾಗ್:2019–20 ದಿನಾಂಕ:10–10–2022. 2) ರಾಜ್ಯಶಾಸ್ತ್ರ: ಸಂಖ್ಯೆ ಪ್ರಾಕಶಿ:ಕಾಶಿಇ:295: ಬ್ಯಾಕ್‌ಲಾಗ್ 2019–20 ದಿನಾಂಕ:10–10–2022. 3) ಗ್ರಂಥಪಾಲಕರು ಸಂಖ್ಯೆ: ಪ್ರಾಕಶಿ:ಕಾಶಿಇ:296 ಬ್ಯಾಕ್‌ಲಾಗ್: 2019–20 ದಿನಾಂಕ: 10–10–2022 ಇವರು ಯು.ಜಿ.ಸಿ. ನಿಯಮಾವಳಿ ಅನ್ವಯ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಅನುಮತಿ ನೀಡಲಾಗಿದ್ದು, ಸದರಿ ಹುದ್ದೆಗಳಿಗೆ ಅರ್ಹ ಅಭ್ಯರ್ಥಿ ಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ತಮ್ಮ ವಯಸ್ಸು, ವಿದ್ಯಾರ್ಹತೆ, ಬೋಧನಾನುಭವ ಮತ್ತು ಮೀಸಲಾತಿಗೆ ಸಂಬಂಧಿಸಿದ ಸ್ವ ವಿವರಗಳೊಂದಿಗೆ ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಅರ್ಜಿ ನಮೂನೆಯನ್ನು ವೆಬ್‌ಸೈಟ್ http://sjmcascchitradurga.edu.in ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಅರ್ಜಿಯಲ್ಲಿ ನಮೂದಿಸಿರುವಂತೆ ಸಕ್ಷಮ ಪ್ರಾಧಿಕಾರಗಳಿಂದ ಆಧರಿಸಲು ಪಡೆದುಕೊಂಡಿರುವ ಪ್ರಮಾಣ ಪತ್ರಗಳ ದೃಢೀಕರಿಸಿದ ಜೆರಾಕ್ಸ್ ಪ್ರತಿಗಳು ಹಾಗೂ ಕಾರ್ಯದರ್ಶಿಗಳು, ಎಸ್.ಜೆ.ಎಂ. ವಿದ್ಯಾಪೀಠ(ರಿ), ಚಿತ್ರದುರ್ಗ ಇವರ ಹೆಸರಿನಲ್ಲಿ ರೂ.500/– ಡಿ.ಡಿ.ಯನ್ನು ತೆಗೆಸಿ, ಲಗತ್ತಿಸಿ, ಕಾರ್ಯದರ್ಶಿಗಳು, ಎಸ್.ಜೆ.ಎಂ. ವಿದ್ಯಾಪೀಠ (ರಿ) ಶ್ರೀ ಜಗದ್ಗುರು ಮುರುಘರಾಜೇಂದ್ರ ಬ್ರಹನ್ಮಠ, ಎಂ.ಕೆ. ಹಟ್ಟಿ, ಚಿತ್ರದುರ್ಗ–577502 ಈ ವಿಳಾಸಕ್ಕೆ ಕಛೇರಿಯ ಅವಧಿಯಲ್ಲಿ ಖುದ್ದಾಗಿ ಅಥವಾ ಅಂಚೆ ಮೂಲಕ ದಿನಾಂಕ:26–11–2022ರ ಶನಿವಾರ ಸಂಜೆ 5.00 ಗಂಟೆ ಒಳಗಾಗಿ ಸಲ್ಲಿಸುವುದು. ಲಕೋಟೆಯ ಮೇಲೆ ಎಡ ಭಾಗದಲ್ಲಿ **"ಪದವಿ ಕಾಲೇಜು ಬ್ಯಾಕ್‌ಲಾಗ್ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ"** ಎಂದು ನಮೂದಿಸಿರಬೇಕು. ಅರ್ಜಿಯ ಒಂದು ಪ್ರತಿಯನ್ನು (ಡಿ.ಡಿಯನ್ನು ಹೊರತುಪಡಿಸಿ) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಕಛೇರಿ, ಸಹ್ಯಾದ್ರಿ ಕಾಲೇಜು ಪುರುಷ ವಸತಿ ನಿಲಯದ ಹಿಂಭಾಗ, ಮತ್ತೂರು ರಸ್ತೆ, ಶಿವಮೊಗ್ಗ ಇವರಿಗೆ ನಿಗಧಿತ ಅವಧಿಯೊಳಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಅಪೂರ್ಣವಾದ, ಅಗತ್ಯ ದೃಢೀಕೃತ ದಾಖಲೆಗಳನ್ನು ಲಗತ್ತಿಸದೆ ಇರುವ ಮತ್ತು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಕ್ರ.ಸಂ	ವಿಷಯ	ಹುದ್ದೆಗಳ ಸಂಖ್ಯೆ	ಮೀಸಲಾತಿ	ವಯೋಮಿತಿ
01	ಅರ್ಥಶಾಸ್ತ್ರ	01	ಪರಿಶಿಷ್ಟ ಪಂಗಡ(ಎಸ್.ಟಿ.)	ಕನಿಷ್ಠ 18ವರ್ಷಗಳು ಗರಿಷ್ಠ 45ವರ್ಷಗಳು
02	ರಾಜ್ಯಶಾಸ್ತ್ರ	01	ಪರಿಶಿಷ್ಟ ಜಾತಿ(ಎಸ್.ಸಿ)	
03	ಗ್ರಂಥಪಾಲಕರು	01	ಪರಿಶಿಷ್ಟ ಪಂಗಡ(ಎಸ್.ಟಿ.)	

ಅಭ್ಯರ್ಥಿಗಳಿಗೆ ಸೂಚನೆಗಳು: ಈ ಮೇಲೆ ತಿಳಿಸಿರುವ ಹುದ್ದೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನೀಡಲಾಗಿರುವ ಬ್ಯಾಕ್‌ಲಾಗ್ ಹುದ್ದೆಗಳಾಗಿರುವುದರಿಂದ ಇತರ ವರ್ಗಗಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಮೇಲೆ ತಿಳಿಸಿರುವ ಹುದ್ದೆಗಳಿಗೆ ಮೀಸಲಾಗಿರುವ ವರ್ಗಗಳ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. ರೂ. 50/– ಅಂಚೆ ಚೀಟಿ ಲಗತ್ತಿಸಿದ ಸ್ವ ವಿಳಾಸದ ಲಕೋಟೆಯನ್ನು ಲಗತ್ತಿಸುವುದು. ಅರ್ಜಿ ಶುಲ್ಕದ ಬಾಬ್ತು ರೂ. 500/– ಡಿ.ಡಿ. ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

ನಿಬಂಧನೆಗಳು:– ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹೊಂದಿದ್ದು, ಕನಿಷ್ಠ 50% ಅಂಕಗಳನ್ನು ಪಡೆದಿರಬೇಕು ಮತ್ತು NET/SLET ಪರೀಕ್ಷೆಯಲ್ಲಿ ಉತ್ತೀರ್ಣರಾಗಿಬೇಕು. Ph.D ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ NET/SLET ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಒಂದು ವೇಳೆ Ph.D ಪದವಿಯನ್ನು ಆಧರಿಸುವ ಅಭ್ಯರ್ಥಿಗಳು ದಿನಾಂಕ:11–07–2009ರ ಪೂರ್ವದಲ್ಲಿ Ph.D ಪದವಿ ಪಡೆದಿದ್ದಲ್ಲಿ / Ph.D ಪದವಿಗೆ ನೋಂದಣಿ ದಿನಾಂಕ:11–07–2009ರ ಪೂರ್ವದಲ್ಲಿ ನೋಂದಣಿ ಮಾಡಿಸಿ ಪಡೆದಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ:04–05–2016ರ ಯು.ಜಿ.ಸಿ. ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತಿಗೊಳಪಟ್ಟಿರುತ್ತದೆ.

ಸಹಿ/– ಶ್ರೀ ಎಸ್.ಬಿ.ವಸ್ತ್ರಮಠ, ಕಾರ್ಯದರ್ಶಿಗಳು
ದಿನಾಂಕ:27–10–2022 ಎಸ್.ಜೆ.ಎಂ. ವಿದ್ಯಾಪೀಠ (ರಿ) ಚಿತ್ರದುರ್ಗ.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ ಹುಣಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಐ.ಎಫ್ಟ್.ಟಿ ಸಂಖ್ಯೆ 09/2022–23 ದಿನಾಂಕ: 25–10–2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಹುಣಸೂರು ವಿಭಾಗ ವ್ಯಾಪ್ತಿಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಅನುಮೋದನೆಯಾಗಿರುವ ಒಟ್ಟು 3 ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿನ "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೊಂದಾಯಿತ ಸಮುಚಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕಾಮಗಾರಿಗಳ ಪೈಕಿ ಟೆಂಡರಿಗಿಟ್ಟ ಮೊತ್ತ ರೂ.167.72 ಲಕ್ಷ ಗರಿಷ್ಟ ಹಾಗೂ ರೂ.50.73 ಲಕ್ಷ ಕನಿಷ್ಟ ಇ.ಎಂ.ಡಿ. ರೂ.2.52 ಲಕ್ಷಗಳು ಗರಿಷ್ಟ ಹಾಗೂ ರೂ1.01 ಲಕ್ಷಗಳು, ಕನಿಷ್ಟ. ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 03.11.2022 16.00 ಗಂಟೆಯವರೆಗೆ. ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವಧಿ 4 ತಿಂಗಳು ಗರಿಷ್ಟ ಹಾಗೂ 3 ತಿಂಗಳು ಕನಿಷ್ಟ. (ಮಳೆಗಾಲ ಸೇರಿದಂತೆ). ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://eproc.karnataka.gov.in ರಲ್ಲಿ ದಿ: 25.10.2022 ರಂದು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಇಲಾಖೆ,
DIPR/DDMYS/MCA/599/2022-23 ವಿಶೇಷ ವಿಭಾಗ, ಹುಣಸೂರು

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ:08354- 235042 ಇ-ಮೇಲ್: bgkeezpe@yahoo.com ಫ್ಯಾಕ್ಸ್: 08354-235043
ಸಂ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ–1/ಟೆಂಡರ್/2022–23/2994 ದಿನಾಂಕ:27.10.2022

–: ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ದ್ವಿ–ಲಕೋಟೆ ಟೆಂಡರ್ ಪ್ರಕಟಣೆ:– ಕೆ.ಡಬ್ಲ್ಯೂ–4 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2016–17 ನೇ ಸಾಲಿನ ಲೆಕ್ಕ ಶೀರ್ಷಿಕೆ: ಕೃ.ಮೇ.ಯೋಜನೆ ಪುನರ್‌ವಸತಿ ಪುನರ್‌ನಿರ್ಮಾಣ ಅನುದಾನದ ಯೋಜನೆಯಡಿ ಮಾನ್ಯ ಆಯುಕ್ತರು ಪುನರ್‌ವಸತಿ ಮತ್ತು ಭೂಸ್ವಾದೀನ, ಕೃ.ಮೇ.ಯೋಜನೆ ಇವರ ಆಡಳಿತಾತ್ಮಕ ಅನುಮೋದನೆ ಆದೇಶ ಸಂಖ್ಯೆ:987 ದಿ:05–09–2022 ರೂ.180.00 ಲಕ್ಷ ಅನುದಾನ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಪ್ಯಾಕೇಜ್ ಕಾಮಗಾರಿಗೆ Standard Tender Document KW-3 & 4 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಗುತ್ತಿಗೆಯಲ್ಲಿ ಭಾಗವಹಿಸುವ ಟೆಂಡರ ಕಾಮಗಾರಿಗಳ ಇಂಡೆಂಟ್ ನಂ::94758 ಕಾಮಗಾರಿಗಳ ವಿವರ, ಕಾಮಗಾರಿ ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಕಾಮಗಾರಿ ಟೆಂಡರ್ ಮೊತ್ತ (ರೂ.180.00 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:10.11.2022 ರ ಸಾಯಂಕಾಲ 17.30 ಗಂಟೆವರೆಗೆ.

ಪ್ರೀ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ:07.11.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 15.11.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸೂಚನೆ:ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ http://www.eprocurment.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
DIPR/BGK/RO-NO-528/MCA/2022-23 ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ

ಸುಭಾಷಿತ

ಧೈರ್ಯ ಅಂದರೆ ಭಯ ಇಲ್ಲದಿರುವುದಲ್ಲ, ಭಯದ ಮೇಲೆ ಜಯ ಸಾಧಿಸುವುದು.

-ನೆಲ್ಸನ್ ಮಂಡೇಲಾ

ಗೂಗಲ್‌ಗೆ ಸಿಸಿಐ ಭಾರಿ ದಂಡ ಸ್ಪರ್ಧಾತ್ಮಕತೆ ಉಳಿಸಲು ನೆರವು

ಮಾಹಿತಿ ತಂತ್ರಜ್ಞಾನ ವಲಯದ ಬೃಹತ್ ಕಂಪನಿ ಗೂಗಲ್‌ಗೆ ಭಾರಿ ಮೊತ್ತದ ದಂಡವನ್ನು ವಿಧಿಸುವ ಮೂಲಕ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಸ್ಪಷ್ಟ ಹಾಗೂ ಕಠಿಣ ಸಂದೇಶವೊಂದನ್ನು ರವಾನಿಸಿದೆ. ಮಾರುಕಟ್ಟೆಯಲ್ಲಿ ತಾನು ಹೊಂದಿರುವ ಪ್ರಬಲ ಸ್ಥಾನವನ್ನು ಗೂಗಲ್ ದುರುಪಯೋಗ ಮಾಡಿಕೊಳ್ಳುವುದರ ವಿರುದ್ಧದ ಸಂದೇಶ ಇದು. ಆ್ಯಂಡ್ರಾಯ್ಡ್ ಮೊಬೈಲ್ ಕಾರ್ಯಾಚರಣೆ ವ್ಯವಸ್ಥೆ ಬಳಕೆ ಇರುವಲ್ಲಿ ತಾನು ಹೊಂದಿರುವ ಪ್ರಬಲ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡ ಕಾರಣಕ್ಕೆ ಗೂಗಲ್ ಕಂಪನಿಗೆ ಸಿಸಿಐ ಅಕ್ಟೋಬರ್ 20ರಂದು ₹ 1,337.76 ಕೋಟಿ ದಂಡ ವಿಧಿಸಿತ್ತು. ಅಲ್ಲದೆ, ನ್ಯಾಯಸಮ್ಮತವಲ್ಲದ ರೀತಿಯಲ್ಲಿ ನಡೆದುಕೊಳ್ಳುವುದರಿಂದ ದೂರವಿರಬೇಕು ಎಂದು ತಾಕೀತು ಮಾಡಿತ್ತು. ಕಂಪನಿಯು ನಿರ್ದಿಷ್ಟ ಅವಧಿಯೊಳಗೆ ತನ್ನ ವರ್ತನೆಯನ್ನು ತಿದ್ದಿಕೊಳ್ಳಬೇಕು ಎಂದು ಕೂಡ ಹೇಳಿತ್ತು. ಆ್ಯಪ್ ಡೆವಲಪರ್‌ಗಳು ಪ್ಲೇಸ್ಟೋರ್ ಸೇವೆಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ವಿಚಾರದಲ್ಲಿ ನೀತಿಗಳನ್ನು ರೂಪಿಸುವ ಸಂದರ್ಭದಲ್ಲಿ ಗೂಗಲ್ ಕಂಪನಿಯು ತನ್ನ ಸ್ಥಾನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಸಿಸಿಐ ಮತ್ತೆ ₹ 936.44 ಕೋಟಿ ದಂಡ ವಿಧಿಸಿದೆ. ಗೂಗಲ್ ಕಂಪನಿಗೆ ಸೇರಿಲ್ಲದ ಬಿಲ್ಲಿಂಗ್ ಮತ್ತು ಪಾವತಿ ಸೇವೆಗಳನ್ನು ಬಳಸಿಕೊಳ್ಳುವುದಕ್ಕೆ ಆ್ಯಪ್ ಡೆವಲಪರ್‌ಗಳಿಗೆ ನಿರ್ಬಂಧ ವಿಧಿಸಬಾರದು ಎಂದು ಕೂಡ ಸಿಸಿಐ ಈಗ ತಾಕೀತು ಮಾಡಿದೆ. ಕಂಪನಿಯ ಚಟುವಟಿಕೆಗಳಲ್ಲಿ ಪಾರದರ್ಶಕತೆ ಇರಬೇಕು ಹಾಗೂ ಅವು ನ್ಯಾಯಸಮ್ಮತ ಆಗಿರಬೇಕು ಎಂಬ ಉದ್ದೇಶದಿಂದ ಸಿಸಿಐ ಹಲವು ಸೂಚನೆಗಳನ್ನು ನೀಡಿದೆ.

ಆ್ಯಪ್ ಡೆವಲಪರ್‌ಗಳ ಜೊತೆಗಿನ ಸಂವಹನ ಪಾರದರ್ಶಕವಾಗಿ ನಡೆಯಬೇಕು, ಪಾವತಿಗೆ ಸಂಬಂಧಿಸಿದ ನಿಯಮಗಳು ಸ್ಪಷ್ಟವಾಗಿರಬೇಕು

ಗೂಗಲ್ ಕಂಪನಿಯು ಏಕಸ್ವಾಮ್ಯದ ವರ್ತನೆಯನ್ನು ತೋರಿಸುತ್ತಿದೆ ಎಂಬ ದೂರುಗಳು ಹಿಂದಿನಿಂದಲೂ ಇವೆ. ಅಲ್ಲದೆ, ಇಂತಹ ವರ್ತನೆಗಳನ್ನು ನಿಯಂತ್ರಿಸಲು ದಂಡ ವಿಧಿಸಬೇಕು ಎಂಬ ಬೇಡಿಕೆಗಳೂ ಇವೆ. ಸ್ಮಾರ್ಟ್‌ಫೋನ್‌ಗಳ ಕಾರ್ಯಾಚರಣೆ ವ್ಯವಸ್ಥೆ ಹಾಗೂ ಪ್ಲೇಸ್ಟೋರ್ ವೇದಿಕೆಯನ್ನು ಒಂದಿಷ್ಟು ಮುಕ್ತವಾಗಿಸುವ ಕೆಲವು ಕ್ರಮಗಳನ್ನು ಕೈಗೊಳ್ಳಲು ಗೂಗಲ್ ಕಂಪನಿಗೆ ಈಗ ಸಿಸಿಐ ಸೂಚನೆ ನೀಡಿದೆ. ಡಿಜಿಟಲ್ ಅರ್ಥ ವ್ಯವಸ್ಥೆಯಲ್ಲಿ ಏಕಸ್ವಾಮ್ಯದ ವರ್ತನೆಗೆ ನಿಯಂತ್ರಣ ಹಾಕುವಲ್ಲಿ ಸಿಸಿಐ ವಿಧಿಸಿರುವ ದಂಡ, ನೀಡಿರುವ ಸೂಚನೆಗಳು ಹಾಗೂ ಸೂಚನೆಗೆ ಅನುಗುಣವಾಗಿ ಗೂಗಲ್ ಕೈಗೊಳ್ಳಬಹುದಾದ ಕ್ರಮಗಳು ಪ್ರಮುಖ ಪಾತ್ರ ವಹಿಸಲಿವೆ. ಭಾರತದ ಸ್ಮಾರ್ಟ್‌ಫೋನ್ ಮಾರುಕಟ್ಟೆಯಲ್ಲಿ ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಇರುವ ಸ್ಮಾರ್ಟ್‌ಫೋನ್‌ಗಳ ಪ್ರಮಾಣವು ಸರಿಸುಮಾರು ಶೇಕಡ 96ರಷ್ಟು. ಸಿಸಿಐ ಈಗ ಕೈಗೊಂಡಿರುವ ತೀರ್ಮಾನದ ಪರಿಣಾಮ ಏನಿರಬಹುದು, ಅದರ ಮಹತ್ವ ಎಷ್ಟು ಎಂಬುದನ್ನು ಈ ಸಂಖ್ಯೆಯೇ ಹೇಳುತ್ತದೆ. ‘ಗೂಗಲ್ ಕಂಪನಿಯು ತನ್ನ ಜಾಹೀರಾತು ಆದಾಯವು ಯಾವ ಅಡಚಣೆಯೂ ಇಲ್ಲದೆ ಹೆಚ್ಚಾಗುವಂತಹ ರೀತಿಯಲ್ಲಿ ಮೊಬೈಲ್ ಆಧಾರಿತವಾದ ತನ್ನ ಇಂಟರ್ನೆಟ್ ಶೋಧ ಸೇವೆಗಳನ್ನು ಗ್ರಾಹಕರು ಬಳಸುವಂತೆ ಮಾಡಿದೆ’ ಎಂದು ಸಿಸಿಐ ಈಚೆಗಿನ ತನ್ನ ಆದೇಶದಲ್ಲಿ ಹೇಳಿದೆ. ಅಲ್ಲದೆ, ಹೀಗೆ ಮಾಡಿರುವುದು ‘ಇಂಟರ್ನೆಟ್ ಶೋಧ ಸೇವೆಗಳಲ್ಲಿ ತಾನು ಹೊಂದಿರುವ ಪ್ರಬಲ ಸ್ಥಾನವನ್ನು ರಕ್ಷಿಸಿಕೊಳ್ಳಲು ಮತ್ತು ಇನ್ನಷ್ಟು ಬಲಪಡಿಸಿಕೊಳ್ಳಲು. ಆ ಮೂಲಕ ಶೋಧ ಸೇವೆಗಳ ಜೊತೆಯಲ್ಲಿ ಬರುವ ಜಾಹೀರಾತಿನ ಆದಾಯವನ್ನು ರಕ್ಷಿಸಿಕೊಳ್ಳಲು ಮತ್ತು ಗಟ್ಟಿಗೊಳಿಸಿಕೊಳ್ಳಲು’ ಎಂದು ಕೂಡ ಸಿಸಿಐ ಹೇಳಿದೆ. ತನ್ನ ವರ್ತನೆಯನ್ನು ಗೂಗಲ್ ತಿದ್ದಿಕೊಳ್ಳಬೇಕು, ಅಗತ್ಯ ಬದಲಾವಣೆಗಳನ್ನು ಮೂರು ತಿಂಗಳಲ್ಲಿ ತರಬೇಕು ಎಂದು ತಾಕೀತು ಮಾಡಿದೆ.

₹ 936 ಕೋಟಿ ದಂಡ ವಿಧಿಸಿರುವ ಈಚಿನ ಆದೇಶದಲ್ಲಿ ಸಿಸಿಐ, ಬಿಲ್ಲಿಂಗ್ ಮತ್ತು ಪಾವತಿ ಸೇವೆಗಳ ವಿಚಾರದಲ್ಲಿ ನ್ಯಾಯಸಮ್ಮತ ಅಲ್ಲದ ವ್ಯವಹಾರಗಳನ್ನು ಗೂಗಲ್ ನಿಲ್ಲಿಸಬೇಕು ಎಂದು ಸೂಚಿಸಿದೆ. ಸ್ಪರ್ಧಾತ್ಮಕತೆಗೆ ವಿರುದ್ಧವಾಗಿರುವ ನಡೆಗಳನ್ನು ತಿದ್ದಿಕೊಳ್ಳಲು ಕೆಲವು ಕ್ರಮಗಳನ್ನು ಕಾಲಮಿತಿಯಲ್ಲಿ ಕೈಗೊಳ್ಳಬೇಕು ಎಂದು ಹೇಳಿದೆ. ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಗೂಗಲ್ ಕಂಪನಿಯು ಯಾವುದೇ ಆ್ಯಪ್ ವಿರುದ್ಧ ಕ್ರಮ ಕೈಗೊಳ್ಳುವಂತಿಲ್ಲ ಹಾಗೂ ಆ್ಯಪ್‌ಗಳ ವಿರುದ್ಧ ತಾರತಮ್ಯದ ನಡೆ ಅನುಸರಿಸುವಂತೆ ಇಲ್ಲ. ಆ್ಯಪ್ ಡೆವಲಪರ್‌ಗಳ ಜೊತೆಗಿನ ಮಾತುಕತೆಗಳು, ಸಂವಹನಗಳು ಪಾರದರ್ಶಕವಾಗಿ ನಡೆಯಬೇಕು, ಪಾವತಿಗೆ ಸಂಬಂಧಿಸಿದ ನಿಯಮಗಳು ಸ್ಪಷ್ಟವಾಗಿರಬೇಕು. ಗೂಗಲ್‌ನಂತಹ ದೈತ್ಯ ಕಂಪನಿಯು ತನ್ನ ಸ್ಥಾನವನ್ನು ದುರ್ಬಳಕೆ ಮಾಡಿಕೊಳ್ಳುವುದಿಲ್ಲ, ಸ್ಪರ್ಧಾತ್ಮಕತೆಗೆ ಧಕ್ಕೆ ತರುವುದಿಲ್ಲ ಎಂಬುದನ್ನು ಖಾತರಿಪಡಿಸಲು ಇಂತಹ ಕ್ರಮಗಳ ಅಗತ್ಯ ಇದೆ. ಸಿಸಿಐ ಆದೇಶವು ಬಹಳ ದೊಡ್ಡ ಹಿನ್ನಡೆ ಎಂದು ಗೂಗಲ್ ಪ್ರತಿಕ್ರಿಯೆ ನೀಡಿದೆ. ಹಾಗೆಯೇ, ಮೊಬೈಲ್ ಸಾಧನಗಳ ಬೆಲೆ ಏರಿಕೆಗೆ ಇದು ಕಾರಣವಾಗುತ್ತದೆ ಎಂದು ಕೂಡ ಅದು ಹೇಳಿದೆ. ಆದರೆ ತನಿಖೆಯ ನಂತರದಲ್ಲಿ ಬಂದಿರುವ ಸಿಸಿಐ ಆದೇಶವು ಅದರ ಉದ್ದೇಶ ಮತ್ತು ಅದು ಬೀರಬಹುದಾದ ಪರಿಣಾಮದ ಕಾರಣದಿಂದಾಗಿ ಸ್ವಾಗತಾರ್ಹ.

ದಿನದ ಟ್ವೀಟ್

ಅರ್ಥವಾಗದ ಸಲಹೆ

ನಮ್ಮ ಕರೆನ್ಸಿ ನೋಟುಗಳಲ್ಲಿ ಲಕ್ಷ್ಮಿ ಮತ್ತು ಗಣೇಶನ ಚಿತ್ರಗಳನ್ನು ಹಾಕುವುದರಿಂದ ನಮ್ಮ ಅರ್ಥ ವ್ಯವಸ್ಥೆ ಹೇಗೆ ಸುಧಾರಿಸುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಮಾರ್ಕಂಡೇಯ ಕಾಟ್ಜು, ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

ಕಿಡಿನುಡಿ



ಶ್ವೇತವರ್ಣೀಯರನ್ನು ಜನಾಂಗೀಯವಾದಿಗಳು ಎಂದು ಕರೆಯುವ ಭಾರತೀಯರಿಗೆ ತಮ್ಮನ್ನು ಜಾತಿವಾದಿಗಳು ಎಂದು ಕರೆಯುವುದು ಯಾವತ್ತಿಗೂ ಆಗುವುದಿಲ್ಲ.

ದೇವದತ್ತ ಪಟ್ಟನಾಯಕ್, ಲೇಖಕ

25 ವರ್ಷಗಳ ಹಿಂದೆ

ಮಂಗಳವಾರ, 28-10-1997

• ಗುಜರಾತ್ ಬಿಕ್ಕಟ್ಟು ಅಂತ್ಯ: ಇಂದು ಪಾರಿಖ್ ಪ್ರಮಾಣ

ಗಾಂಧಿನಗರ, ಅಕ್ಟೋಬರ್ 27– ಗುಜರಾತ್ ಮುಖ್ಯಮಂತ್ರಿ ಶಂಕರ ಸಿನ್ಹಾ ವಾಘೇಲ ಅವರು ಇಂದು ರಾತ್ರಿ ರಾಜೀನಾಮೆ ನೀಡಿದ್ದಾರೆ. ರಾಷ್ಟ್ರೀಯ ಜನತಾ ಪಕ್ಷದ ಶಾಸಕಾಂಗ ಘಟಕದ ಹೊಸ ನಾಯಕರಾಗಿ ಆಯ್ಕೆಯಾಗಿರುವ ಕೈಗಾರಿಕಾ ಸಚಿವ ದಿಲೀಪ್ ಪಾರಿಖ್ ಅವರನ್ನು ಮುಖ್ಯಮಂತ್ರಿಯಾಗಿ ನಾಳೆ ಪ್ರಮಾಣವಚನ ಸ್ವೀಕರಿಸಲು ರಾಜ್ಯಪಾಲರು ಆಹ್ವಾನಿಸಿದ್ದಾರೆ. ಇದರೊಂದಿಗೆ ಗುಜರಾತಿನ ರಾಜಕೀಯ ಬಿಕ್ಕಟ್ಟು ಅಂತ್ಯವಾಗಿದೆ.

ಗೃಹ ಸಚಿವ ವಿಪುಲ್ ಚೌಧರಿ ಅವರ ನಿವಾಸದಲ್ಲಿ ಸೇರಿದ ಸಭೆಯಲ್ಲಿ ಹಣಕಾಸು ಸಚಿವ ಆತ್ಮಾರಾಂ ಪಟೇಲ್ ಸೇರಿದಂತೆ ರಾಷ್ಟ್ರೀಯ ಜನತಾ ಪಕ್ಷದ 45 ಮಂದಿ ಸದಸ್ಯರು ಮತ್ತು 13 ಮಂದಿ ಪಕ್ಷೇತರ ಸದಸ್ಯರು ಕೈಗಾರಿಕಾ ಸಚಿವ ದಿಲೀಪ್ ಪಾರಿಖ್ ಅವರನ್ನು ವಾಘೇಲ ಅವರ ಸ್ಥಾನದಲ್ಲಿ ನೂತನ ನಾಯಕರನ್ನಾಗಿ ಆಯ್ಕೆ ಮಾಡಿದರು.

• ಉತ್ತರಪ್ರದೇಶದಲ್ಲಿ 93 ಸಚಿವರ ದಾಖಲೆ ಸಂಪುಟ

ಲಖನೌ, ಅಕ್ಟೋಬರ್ 27 (ಪಿಟಿಐ)– ಉತ್ತರಪ್ರದೇಶದ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರು ಇಂದು 70 ಮಂದಿ ನೂತನ ಸಚಿವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ತಮ್ಮ ಸಚಿವ ಸಂಪುಟವನ್ನು ವಿಸ್ತರಿಸಿದ್ದಾರೆ. ಇದರೊಂದಿಗೆ ಉತ್ತರ ಪ್ರದೇಶದಲ್ಲಿ ಸಚಿವರ ಸಂಖ್ಯೆ 93ಕ್ಕೆ ಏರಿದೆ.

ಕಳೆದ 21ರಂದು ವಿಧಾನಸಭೆಯಲ್ಲಿ ವಿಶ್ವಾಸಮತ ಗಳಿಸಿದ ನಂತರ ಮೊದಲ ಬಾರಿಗೆ ಸಚಿವ ಸಂಪುಟ ವಿಸ್ತರಿಸಿದ ಕಲ್ಯಾಣ್ ಸಿಂಗ್ ಅವರು ಇಂದು 26 ಸಂಪುಟ ದರ್ಜೆ ಮತ್ತು 44 ರಾಜ್ಯ ಸಚಿವರನ್ನು ಸಂಪುಟಕ್ಕೆ ಸೇರಿಸಿಕೊಂಡರು. ಇದರೊಂದಿಗೆ ರಾಜ್ಯದ ಇತಿಹಾಸದಲ್ಲಿ ಕಾಣದ ಅತಿದೊಡ್ಡ ಸಚಿವ ಸಂಪುಟ ನಿರ್ಮಿಸಿದ ಖ್ಯಾತಿ ಕಲ್ಯಾಣ್ ಸಿಂಗ್ ಅವರದ್ದಾಯಿತು.

50 ವರ್ಷಗಳ ಹಿಂದೆ

ಶನಿವಾರ, 28-10-1972

• ಒಪ್ಪಂದದ ಹೊಸ್ತಿಲಲ್ಲಿದ್ದರೂ ವಿಯಟ್ನಾಮಿನಲ್ಲಿ ಉಗ್ರ ಕದನ

ಸೈಗಾನ್, ಅಕ್ಟೋಬರ್ 27– ಅಮೆರಿಕ ಮತ್ತು ಉತ್ತರ ವಿಯೆಟ್ನಾಂ ಮಧ್ಯೆ ಪ್ರಮುಖ ವಿಷಯಗಳಲ್ಲೆಲ್ಲ ಒಮ್ಮತ ಸಾಧನೆಯಾಗಿದ್ದು, ‘ಶಾಂತಿ ಸನಿಹದಲ್ಲಿದೆ’, ಪೂರ್ಣ ಒಪ್ಪಂದಕ್ಕೆ 3-4 ದಿನಗಳ ಇನ್ನೊಂದು ಸುತ್ತಿನ ಸಂಧಾನ ಸಾಕು ಎಂದು ಅಧ್ಯಕ್ಷ ನಿಕ್ಸನ್ ಪ್ರತಿನಿಧಿ ಹೆನ್ರಿ ಕೆಸಿಂಜರ್ ನುಡಿದಿದ್ದರೂ, ವಿಯೆಟ್ನಾಂ ಕದನ ಇಂದು ಇನ್ನಷ್ಟು ತೀವ್ರಗೊಂಡಂತಿತ್ತು.

ಕದನ ವಿರಾಮಕ್ಕೆ ಮುನ್ನ, ಸಾಧ್ಯವಾದಷ್ಟು ಹೆಚ್ಚು ಪ್ರದೇಶ ವಶಪಡಿಸಿಕೊಂಡು ಅಂತಿಮ ರಾಜಕೀಯ ಚೌಕಾಸಿಯಲ್ಲಿ ಮೇಲುಗೈ ಪಡೆಯಬೇಕೆಂಬ ಆಕಾಂಕ್ಷೆ ಎರಡು ಪಕ್ಷಗಳಲ್ಲಿಯೂ ಉಂಟಾಗಿತ್ತು.

• ಕೇಂದ್ರ ನೆರವಿನಿಂದ ಕಾರವಾರ ಬಳಿ ಸಣ್ಣ ನೌಕಾ ನಿರ್ಮಾಣ ಕಟ್ಟೆ

ನವದೆಹಲಿ, ಅಕ್ಟೋಬರ್ 27– ಕಾರವಾರದ ಬಳಿ ಸಾವಿರ ಟನ್ ಸಾಮರ್ಥ್ಯದ ಸಣ್ಣ ನೌಕೆಗಳನ್ನು ನಿರ್ಮಿಸಲು ರಾಜ್ಯ ಸರ್ಕಾರ ಇಷ್ಟರಲ್ಲಿಯೇ ಯೋಜನೆಯೊಂದನ್ನು ಸಿದ್ಧಪಡಿಸಲಿದೆ. ಈ ಸಂಬಂಧ ರಾಜ್ಯಕ್ಕೆ ಎಲ್ಲ ಸಾಧ್ಯ ಸಹಾಯವನ್ನು ನೀಡಲು ಕೇಂದ್ರ ಒಪ್ಪಿದೆ.

ವಿಧಾನಸಭೆ ಚುನಾವಣೆಯೇ ತಾಲೀಮು, ಜಾತಿ ಸಮೀಕರಣವೇ ತಲೆನೋವು

ಖರ್ಗೆ, ಬಿನ್ನಿಗೆ ಯಾರಿದ್ದಾರೆ ಬೆನ್ನಿಗೆ?

ಅನುಸಂಧಾನ

ರವೀಂದ್ರ ಭಟ್ಟ

ಕರ್ನಾಟಕದ ಇಬ್ಬರು ವ್ಯಕ್ತಿಗಳು ಕಳೆದ ವಾರ ರಾಷ್ಟ್ರ ಮಟ್ಟದ ಅತ್ಯುನ್ನತ ಹುದ್ದೆಗೆ ಏರಿದರು. ಇಬ್ಬರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಅವಿರತ ಸಾಧನೆ ಮಾಡಿದವರು. ಇಬ್ಬರ ಅದೃಷ್ಟವೂ ಹೆಚ್ಚೂಕಮ್ಮಿ ಒಂದೇ ಆಗಿತ್ತು. ರಾಜ್ಯದ ಹಿರಿಯ ಕ್ರಿಕೆಟ್ ಆಟಗಾರ ರೋಜರ್ ಬಿನ್ನಿ ಅವರು ಬಿಸಿಸಿಐ ಅಧ್ಯಕ್ಷರಾದರು. ಅದೇ ರೀತಿ ಕನ್ನಡನಾಡಿನ ಅತ್ಯಂತ ಹಿರಿಯ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾದರು.

1983ರಲ್ಲಿ ಭಾರತವು ಕ್ರಿಕೆಟ್ ವಿಶ್ವಕಪ್ ಗೆದ್ದ ತಂಡದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದ ಬಿನ್ನಿ, ಎಂದಾದರೊಂದು ದಿನ ಭಾರತ ಕ್ರಿಕೆಟ್ ತಂಡದ ನಾಯಕರಾಗುತ್ತಾರೆ ಎಂಬ ಕನಸು ರಾಜ್ಯದ ಕ್ರೀಡಾಪ್ರಿಯರಿಗೆ ಇತ್ತು. ಆದರೆ ಅವರು ಭಾರತ ತಂಡದ ನಾಯಕರಾಗಲಿಲ್ಲ. ಸುಮಾರು 40 ವರ್ಷಗಳ ನಂತರ ಅವರು ಭಾರತದ ಕ್ರಿಕೆಟ್ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ. ಅದೇ ರೀತಿ, ಕಳೆದ ಲೋಕಸಭಾ ಚುನಾವಣೆವರೆಗೂ ‘ಸೋಲಿಲ್ಲದ ಸರದಾರ’ ಎನಿಸಿಕೊಂಡಿದ್ದ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದ ಮುಖ್ಯಮಂತ್ರಿಯಾಗಬೇಕಿತ್ತು ಎಂದು ಹಂಬಲಿಸುವ ಜನ ಬೇಕಾದಷ್ಟಿದ್ದಾರೆ. ಆದರೆ ಅವರು ಮುಖ್ಯಮಂತ್ರಿಯಾಗಲಿಲ್ಲ. ದೇಶದ ಯಾವುದೇ ರಾಜ್ಯದಲ್ಲಿ ಕಾಂಗ್ರೆಸ್ ಬಹುಮತ ಗಳಿಸಿದರೆ ಯಾರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ನಿರ್ಧರಿಸುವ ಸ್ಥಾನದಲ್ಲಿ ಈಗ ಅವರು ಕುಳಿತಿದ್ದಾರೆ. ಬಿನ್ನಿ ಮತ್ತು ಖರ್ಗೆ ಇಬ್ಬರ ಮುಂದೆಯೂ ಈಗ ಬಹಳಷ್ಟು ಸವಾಲುಗಳಿವೆ. ಜನರ ನಿರೀಕ್ಷೆಯೂ ಹೆಚ್ಚಾಗಿದೆ. ಈ ಇಬ್ಬರಿಗೂ ತಮ್ಮ ಕ್ಷೇತ್ರದಲ್ಲಿ ಹೆಚ್ಚಿನ ಅನುಭವ ಇದೆ. ಸಮಸ್ಯೆ ಬಗೆಹರಿಸುವ ಜಾಣ್ಮೆ ಇದೆ. ಅದನ್ನು ಬಳಸಿಕೊಂಡು ಇಬ್ಬರೂ ಯಶಸ್ವಿಯಾಗಲಿ ಎಂದು ಹಾರೈಸೋಣ.

ಕ್ರಿಕೆಟ್‌ನಲ್ಲಿ ಸೋಲು ಗೆಲುವು ಇದ್ದದ್ದೆ. ಅದೇ ರೀತಿ ರಾಜಕಾರಣದಲ್ಲಿಯೂ ಜಯಾಪಜಯ ಸಾಮಾನ್ಯ. ಆದರೆ ಈ ಇಬ್ಬರ ವಿಚಾರದಲ್ಲಿಯೂ ಪರಿಸ್ಥಿತಿಯೇ ಖಳನಾಯಕನಾಗಿದ್ದು ಮಾತ್ರ ಸೋಜಿಗ. ಬಿನ್ನಿ ವಿಚಾರ ಬದಿಗಿರಲಿ. ಖರ್ಗೆ ವಿಚಾರಕ್ಕೆ ಬಂದರೆ, ಒಂದಿಷ್ಟು ವ್ಯಥೆ ಇನ್ನೊಂದಿಷ್ಟು ಕಥೆ ಮತ್ತೊಂದಿಷ್ಟು ಕನಸುಗಳು ಇವೆ. ವ್ಯಥೆ ಯಾಕೆಂದರೆ, ಇಷ್ಟೊಂದು ರಾಜಕೀಯ ಅನುಭವ ಇರುವ, ಆಡಳಿತದಲ್ಲಿ ಪಳಗಿರುವ, ಮುತ್ಸದ್ದಿಯಾಗಿರುವ ಅವರು ಇಂದಿಗೂ ರಾಜ್ಯದ ಮುಖ್ಯಮಂತ್ರಿಯಾಗಲಿಲ್ಲವಲ್ಲಾ ಎಂದು. ಅದಕ್ಕಿಂತ ಮುಖ್ಯವಾಗಿ, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದ ನಂತರವೂ ಕರ್ನಾಟಕದಲ್ಲಿ ದಲಿತರೊಬ್ಬರಿಗೆ ಮುಖ್ಯಮಂತ್ರಿ ಸ್ಥಾನ ಸಿಗಲಿಲ್ಲವಲ್ಲಾ ಎನ್ನುವುದು ಇನ್ನೂ ವ್ಯಥೆಯ ವಿಚಾರ. ಖರ್ಗೆ ಅವರು ದಲಿತ ಎಂಬ ಕಾರಣಕ್ಕೆ ಮುಖ್ಯಮಂತ್ರಿ ಹುದ್ದೆ ನೀಡಬೇಕಿರಲಿಲ್ಲ. ಅವರ ದಕ್ಷತೆಗೆ ಅದು ಸಲ್ಲಬೇಕಿತ್ತು. ತಾವು ದಲಿತ ಎಂಬ ಕಾರಣಕ್ಕೆ ಮುಖ್ಯಮಂತ್ರಿ ಸಹಿತ ಯಾವುದೇ ಪದವಿ ನೀಡುವುದು ಬೇಡ ಎಂದು ಅವರು ಬಹಳಷ್ಟು ಬಾರಿ ಹೇಳಿದ್ದಾರೆ. ಆದರೂ ನಮ್ಮ ನಡುವಿನ ಜಾತಿ ವ್ಯವಸ್ಥೆಯು ದಲಿತರೊಬ್ಬರಿಗೆ ಮುಖ್ಯಮಂತ್ರಿ ಯಾಗುವ ಅವಕಾಶವನ್ನು ತಪ್ಪಿಸುತ್ತದಲ್ಲ ಎಂಬ ವ್ಯಥೆ ಸದಾ ಕಾಲ ಇರುತ್ತದೆ. ಇನ್ನು ಕತೆ ಏನಪಾ ಅಂದ್ರೆ, ಖರ್ಗೆ ಅವರಿಗೆ ಮುಖ್ಯಮಂತ್ರಿ ಸ್ಥಾನ ಪದೇ ಪದೇ ತಪ್ಪಿಹೋಯಿತು.

1972ರಿಂದ ಸತತವಾಗಿ ಶಕ್ತಿರಾಜಕಾರಣದಲ್ಲಿಯೇ ಇರುವ ಖರ್ಗೆ ಅವರು ಎಂದೂ ತಮ್ಮ ಲಾಭಕ್ಕೆ ರಾಜಕೀಯ ದಾಳ ಉರುಳಿಸಿದವರಲ್ಲ. ನಿಜವಾದ ಅರ್ಥದಲ್ಲಿ ಶಕ್ತಿ ರಾಜಕಾರಣ ಮಾಡಿದವರಲ್ಲ. ಈಗಿನ ರಾಜಕೀಯದಲ್ಲಿ ಮಾಮೂಲಿಯಾಗಿರುವ ತಂತ್ರದಂತೆ ಮತ್ತೊಬ್ಬರನ್ನು ತುಳಿದು ಮೇಲೆ ಬಂದ ನಾಯಕರೂ ಅಲ್ಲ. ಪರಿಸ್ಥಿತಿಯನ್ನು ಬಳಸಿಕೊಂಡು ಲಾಭ ಗಿಟ್ಟಿಸಿಕೊಳ್ಳುವ ಆಕ್ರಮಣಕಾರಿ ಜಾಯಮಾನವೂ ಅವರದ್ದಲ್ಲ. 1999ರಲ್ಲಿ ಧರ್ಮ ಸಿಂಗ್ ಅವರು ಕೆಪಿಸಿಸಿ ಅಧ್ಯಕ್ಷರಾಗಿದ್ದರು. ಅವರನ್ನು ಬದಲಿಸುವ ಬಗ್ಗೆ ಮಾತುಕತೆ ನಡೆದಾಗ ಖರ್ಗೆ ಅವರನ್ನೇ ಅಧ್ಯಕ್ಷರನ್ನಾಗಿ ಮಾಡುವ ಯೋಚನೆಯೂ ಹೈಕಮಾಂಡ್‌ಗೆ ಇತ್ತು. ಹಾಗಂತ ಸೂಚನೆಯನ್ನೂ ನೀಡಿತ್ತು. ಆದರೆ ತಮ್ಮ ಬಹುಕಾಲದ ಗೆಳೆಯ ಧರ್ಮ ಸಿಂಗ್ ಅವರ ಮನಸ್ಸಿಗೆ ನೋವಾಗಬಹುದೇನೋ ಎಂದು ಖರ್ಗೆ ನಿರ್ಧಾರ ಕೈಗೊಳ್ಳುವಲ್ಲಿ ವಿಳಂಬ ಮಾಡಿದರು. ಅಧ್ಯಕ್ಷತೆ ಎಸ್.ಎಂ.ಕೃಷ್ಣ ಅವರಿಗೆ ಸಿಕ್ಕಿತು. ಅವರು ಮುಖ್ಯಮಂತ್ರಿಯೂ ಆದರು. ಹೈಕಮಾಂಡ್ ಮುಂದೆ ಪಟ್ಟು ಹಿಡಿದಿದ್ದರೆ ಖರ್ಗೆ ಆಗಲೇ ಮುಖ್ಯಮಂತ್ರಿಯೂ ಆಗಬಹುದಿತ್ತು. 2004ರಲ್ಲಿಯೂ ಅವರಿಗೆ ಮುಖ್ಯಮಂತ್ರಿಯಾಗುವ ಅವಕಾಶವಿತ್ತು. ಆದರೆ ಅವರು ಪಟ್ಟು ಹಾಕಲಿಲ್ಲ. ಪರಿಸ್ಥಿತಿ ಸಹಕರಿಸಲಿಲ್ಲ.

2009ರಲ್ಲಿ ಖರ್ಗೆ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ಹೈಕಮಾಂಡ್ ಮಾತಿಗೆ ಕಟ್ಟುಬಿದ್ದು ಲೋಕಸಭೆಗೆ ಸ್ಪರ್ಧಿಸಿದರು. ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾದರು. 2013ರಲ್ಲಿ ಅವರು ಮುಖ್ಯಮಂತ್ರಿಯೂ ಆದರು. ಹೀಗೆ ಬಹಳ ಬಾರಿ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಆದರೆ ಸಮಚಿತ್ತದ ರಾಜಕಾರಣಿಯಾಗಿರುವ ಖರ್ಗೆ ತಮ್ಮ ಅಸಮಾಧಾನವನ್ನು ಎಂದೂ ಭಿನ್ನಮತವಾಗಿ ಪರಿವರ್ತಿಸಿದವರಲ್ಲ. ನೋವು ನುಂಗಿ ಹದವಾಗಿ ಬದುಕಿದ ಅವರಿಗೆ ಈಗ ರಾಜಕೀಯದ ಅತ್ಯುನ್ನತ ಸ್ಥಾನ ದೊರಕಿದೆ.

2023ರಲ್ಲಿ ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೆ ಎಂದು ಈಗಲೇ ಹೇಳಲಾಗದು. ಆದರೆ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿರುವುದರಿಂದ ಕಾಂಗ್ರೆಸ್ ಪಕ್ಷಕ್ಕೆ ಬಹಳಷ್ಟು ಅನುಕೂಲಗಳು ಇವೆ. ಜಾತಿ ಸಮೀಕರಣ ಕೂಡ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲವಾಗಬಹುದು. ಅದಕ್ಕಿಂತ ಮುಖ್ಯವಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವಿನ ಪೈಪೋಟಿಯನ್ನು ಖರ್ಗೆ ತಡೆಯಬಹುದು. ಈ ಇಬ್ಬರು ಮುಖಂಡರ ಪೈಪೋಟಿಯಿಂದ ಕಾಂಗ್ರೆಸ್ ಟಿಕೆಟ್ ಹಂಚಿಕೆಯಲ್ಲಿಯೇ ಬಹಳಷ್ಟು ಗೊಂದಲವಾಗಬಹುದು ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಇವೆ. ಆದರೆ ಈಗ ಖರ್ಗೆಯವರೇ ಹೈಕಮಾಂಡ್ ಆಗಿರುವುದರಿಂದ ಅವರ ಕಣ್ತಪ್ಪಿಸಿ ತಮಗೆ ಬೇಕಾದವರಿಗೆ ಟಿಕೆಟ್ ಕೊಡಿಸುವುದು ಕಷ್ಟ. ರಾಜ್ಯದ ಎಲ್ಲ ಕ್ಷೇತ್ರಗಳ ಬಗ್ಗೆ ಅವರಿಗೆ ತಿಳಿವಳಿಕೆ ಇರುವುದರಿಂದ ಟಿಕೆಟ್ ಹಂಚಿಕೆಯ ಸಮಸ್ಯೆಯನ್ನು ಕಡಿಮೆ ಮಾಡಿಕೊಳ್ಳಬಹುದು. ತಮ್ಮ ರಾಜಕೀಯ ಜೀವನ ದುದ್ದಕ್ಕೂ ಪಕ್ಷನಿಷ್ಠೆಯನ್ನು ಕಾಯ್ದುಕೊಂಡು ಬಂದಿರುವ ಖರ್ಗೆ ಇಲ್ಲಿಯೂ ಪಕ್ಷವನ್ನು ಅಧಿಕಾರಕ್ಕೆ ತರಲು ಇನ್ನಿಲ್ಲದ ಪ್ರಯತ್ನವನ್ನಂತೂ ಮಾಡುತ್ತಾರೆ.

ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವುದರ ಜೊತೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪರಿಶಿಷ್ಟರ ಮೀಸಲಾತಿ ಹೆಚ್ಚಳಕ್ಕೆ ಹೊರಡಿಸಿರುವ ಸುಗ್ರೀವಾಜ್ಞೆ ಎಂಬ ದಾಳವನ್ನು ಖರ್ಗೆ ಹೇಗೆ ನಿಭಾಯಿಸುತ್ತಾರೆ ಎನ್ನುವುದೂ ಅತ್ಯಂತ ಪ್ರಮುಖ ವಿಚಾರ. ರಾಮಮಂದಿರ, ಹಿಂದುತ್ವ, ವಾಜಪೇಯಿ, ಅಡ್ವಾಣಿ, ಮೋದಿ ಮುಂತಾದ ಎಲ್ಲ ಅಸ್ತ್ರಗಳನ್ನು ಬಳಸಿಯೂ ಬಿಜೆಪಿ ಇನ್ನೂ ಇಲ್ಲಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿಲ್ಲ. ಅದು ಗೊತ್ತಾಗಿಯೇ ಬಿಜೆಪಿ ಈಗ ಜಾತಿ ಸಮೀಕರಣದತ್ತ ವಾಲಿದೆ. ಲಿಂಗಾಯತರು–ಎಡಗೈ ದಲಿತರು, ಸ್ಪರ್ಶ ದಲಿತರು ಮತ್ತು ವಾಲ್ಮೀಕಿ ಜನಾಂಗದ ಸಮೀಕರಣವನ್ನು ಮಾಡಿಕೊಂಡು ರಾಜ್ಯದಲ್ಲಿ ಗಣನೀಯ ಶಕ್ತಿಯಾಗಿ ಬೆಳೆದುನಿಂತಿರುವ ಬಿಜೆಪಿಗೆ ಅದರ ಬಾಣವನ್ನೇ ಅದಕ್ಕೆ ತಿರುಗಿಸುವುದು ಕಷ್ಟದ ಕೆಲಸ. ಬಲಗೈ ದಲಿತರು–ಮುಸ್ಲಿಂ ಮತ್ತು ಹಿಂದುಳಿದ ಜಾತಿಗಳನ್ನು ತನ್ನ ಬಳಿಯೇ ಇಟ್ಟುಕೊಳ್ಳಲು ಶ್ರಮಿಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಜಾತಿ ಸಮೀಕರಣದ ಸವಾಲು ದೊಡ್ಡದಿದೆ. ಇದನ್ನು ಸರಿಯಾಗಿ ಎದುರಿಸಿದರೆ ಮಾತ್ರ ಕಾಂಗ್ರೆಸ್ ಪಕ್ಷಕ್ಕೆ ಒಂದಿಷ್ಟು ಅವಕಾಶ ಸಿಗುತ್ತದೆ. ಇದರ ನಡುವೆ ಒಕ್ಕಲಿಗರ ರಾಜಕೀಯವೂ ಕಡಿಮೆ ಏನಿಲ್ಲ. ‘ಒಕ್ಕಲಿಗರೇ ಮುಂದಿನ ಮುಖ್ಯಮಂತ್ರಿ’ ಎಂದು ಬಿಂಬಿಸಿಕೊಳ್ಳುವ ಯತ್ನ, ಆ ಜಾತಿಯ ಮಠಾಧೀಶರ ಬೆಂಬಲ ಮತ್ತು ಇದಕ್ಕಾಗಿ ‘ಪ್ರತಿಮಾ ರಾಜಕಾರಣ’ ಎಲ್ಲವೂ ನಡೆಯುತ್ತಿದೆ. 2024ರ ಲೋಕಸಭಾ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಖರ್ಗೆ ಅವರಿಗೆ ಕರ್ನಾಟಕದ ಅಗ್ನಿಪರೀಕ್ಷೆ ಮುಖ್ಯವಾಗಿದೆ.

ಬಿಸಿಸಿಐ ಅಧ್ಯಕ್ಷರಾಗಿರುವ ರೋಜರ್ ಬಿನ್ನಿ ಹಿಂದೆ ಜಯ್ ಶಾ ಇದ್ದಾರೆ. ಖರ್ಗೆ ಅವರ ಹಿಂದೆ ಯಾರಿದ್ದಾರೆ? ಛೇ ಎಲ್ಲಾ ನಿಮಗೆ ಗೊತ್ತು, ಮತ್ತ್ಯಾಕೆ?

ಚುರುಮುರಿ



ರಿಷಿ ಮೂಲ!

• ಬಿ.ಎನ್.ಮಲ್ಲೇಶ್

‘ಹಲೋ... ಗುರೂಜಿ ಅಡ್ ಬಿದ್ದೆ, ನಾನು ತೆಪರೇಸಿ, ನಂದೊಂದು ಸಣ್ಣ ಪ್ರಾಬ್ಲಮ್ಮು, ಬಗೆಹರಿಸ್ತೀರಾ?’

‘ಲೋ ದಡ್ಡ, ಎಂತೆಂಥ ಸಮಸ್ಯೆಗಳನ್ನೇ ನುಂಗಿ ನೀರು ಕುಡಿದಿರೋ ಪ್ರಚಂಡ ನಾನು. ನಿನ್ನ ಪುಟುಗೋಸಿ ಪ್ರಾಬ್ಲಂ ಬಗೆಹರಿಸಲ್ವಾ?’

‘ಎಂಥ ಮಾತು ಗುರೂಜಿ, ನಿಮ್ ತಾಕತ್ತು ಏನು ಅಂತ ನಂಗೊತ್ತಿಲ್ವಾ?’

‘ನಾನು ತ್ರಿಕಾಲ ಜ್ಞಾನಿ ಕಣೋ ದಡ್ಡ ಮುಂಡೇದೆ, ಮೂರು ಕಾಲಗಳಲ್ಲೂ ಎಲ್ಲಿ ಏನು ನಡೀತಾ ಇದೆ ಅಂತ ಇಲ್ಲೇ ಕೂತಲ್ಲೇ ಹೇಳಬಲ್ಲೆ’.

‘ಹೌದಾ ಗುರೂಜಿ, ನಿಮ್ಗೆ ರಿಷಿ ಸಾಹೇಬ್ರು ಇಂಗ್ಲೆಂಡ್ ಪ್ರಧಾನಿ ಆಗ್ತಾರೆ ಅಂತ ಮೊದ್ಲೇ ಗೊತ್ತಿತ್ತಾ?’

‘ಮುಂಡಾಮೋಚ್ತು... ಗೊತ್ತಿತ್ತಾ ಅಂತ ಕೇಳ್ತೀಯಲ್ಲೋ ಮೂರ್ಖ, ಅವರನ್ನ ಪ್ರಧಾನಿ ಪಟ್ಟಕ್ಕೆ ಕೂರಿಸಿದ್ದೇ ನಾನು. ಏಳನೇ ಮನೇಲಿದ್ದ ಶನೀನ ಪಕ್ಕಕ್ಕೆ ಸರಿಸಿ ರಿಷಿಗೆ ಮೊದಲನೇ ಮನೆಗೆ ದಾರಿ ಮಾಡಿದ್ದೇ ನಾನು’.

‘ತಪ್ಪಾತು ಗುರೂಜಿ, ಸಿಟ್ ಮಾಡ್ಕಾಬೇಡಿ’.

‘ಆಯ್ತು, ಹಾಳಾಗಿ ಹೋಗು. ಈ ಜಗತ್ತಿಗೋಸ್ಕರ ನಾನು ಏನೇನೆಲ್ಲ ಮಾಡಿದೀನಿ. ಪ್ರಳಯ ಆಗೋದು ತಪ್ಪಿಸಿದೀನಿ, ಸೂರ್ಯನನ್ನೇ ತಡೆದು ನಿಲ್ಲಿಸಿದೀನಿ, ಮೂರನೇ ಮಹಾಯುದ್ಧ ತಡೆದಿದೀನಿ, ನಂಗೆ ಅಸಾಧ್ಯ ಅನ್ನೋದು, ಗೊತ್ತಿಲ್ಲ ಅನ್ನೋದು ಯಾವುದೂ ಇಲ್ಲ ತಿಳೀತಾ?’

‘ತಿಳೀತು ಗುರೂಜಿ, ನಂದೊಂದು ಪ್ರಶ್ನೆ’.

‘ಆಯ್ತು ಅದೇನ್ ಹೇಳು’.

‘ಇಂಗ್ಲೆಂಡ್ ಪ್ರಧಾನಿ ರಿಷಿ ಸಾಹೇಬ್ರು ಭಾರತದ ಅಳಿಯ ಸರಿ, ಆದ್ರೆ ಅವರ ಮೂಲ ಯಾವುದು? ಪಾಕಿಸ್ತಾನದೋರು ರಿಷಿ ನಮ್ಮೋರು ಅಂತಾರೆ. ಕೀನ್ಯಾ, ತಾಂಜಾನಿಯ ದೋರೂ ರಿಷಿ ನಮ್ಮ ದೇಶದೋರು ಅಂತಾರೆ. ನಿಜವಾಗ್ಲೂ ಅವರ ಮೂಲ ಯಾವುದು?’

ಗುರೂಜಿ ತಡವರಿಸಿದರು. ಮರುಕ್ಷಣ ಬುದ್ಧಿ ಉಪಯೋಗಿಸಿ ‘ಮೂಲನಾ? ಲೋ ದಡ್ಡ ಶಿಖಾಮಣಿ, ನದಿ ಮೂಲ, ಋಷಿ ಮೂಲ ಹುಡುಕಬಾರ್ದು ಅಂತ ಕೇಳಿಲ್ವಾ? ಅದೇ ತರ ರಿಷಿ ಮೂಲಾನೂ ಹುಡುಕಬಾರ್ದು, ಇಡು ಫೋನು’ ಎಂದರು. ತೆಪರೇಸಿ ಪಿಟಕ್ಕೆನ್ನಲಿಲ್ಲ.

ಸಂಗತ

ವಾಸ್ತವ ಒಪ್ಪಿಕೊಳ್ಳದ ಸಮಸ್ಯೆ

ಹಸಿವಿನ ಸೂಚ್ಯಂಕದಲ್ಲಿ ಕುಸಿತವಾಗಿದೆ ಎಂದು ಒಪ್ಪಿಕೊಂಡರೆ, ಎಲ್ಲಿ ಸರ್ಕಾರದ ವರ್ಚಸ್ಸಿಗೆ ಧಕ್ಕೆಯಾಗುವುದೋ ಎನ್ನುವ ಆತಂಕ ಆಳುವವರನ್ನು ಆವರಿಸಿದಂತೆ ತೋರುತ್ತಿದೆ

• ಎಚ್.ಕೆ.ಶರತ್

ಯಾವುದೇ ಸಮಸ್ಯೆ ಪರಿಹರಿಸಲು ಮೊದಲು ಮಾಡಬೇಕಿರುವುದು ಏನು? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಸುಲಭವಲ್ಲವೇ? ಸಮಸ್ಯೆ ಪರಿಹರಿಸಲು ಅನುಸರಿಸಬೇಕಾದ ಕ್ರಮಗಳ ಯಾದಿಯಲ್ಲಿ ಮೊದಲು ಇರುವುದು, ಆ ಸಮಸ್ಯೆ ಇದೆ ಎಂದು ಗುರುತಿಸುವುದು ಅಥವಾ ಒಪ್ಪಿಕೊಳ್ಳುವುದು. ಇದನ್ನು ಹಲವರು ತಮ್ಮ ಶೈಕ್ಷಣಿಕ ಕಲಿಕೆಯ ಭಾಗವಾಗಿಯೇ ತಿಳಿದುಕೊಂಡಿರುತ್ತಾರೆ. ವಸ್ತುಸ್ಥಿತಿ ಹೀಗಿರುವಾಗ, ದೇಶ ಆಳುವವರಲ್ಲಿ ಈ ತಿಳಿವಳಿಕೆ ಇರದಿರಲು ಸಾಧ್ಯವೇ? ‘ಸಾಧ್ಯ’ ಎಂದು ಸಾಬೀತು ಮಾಡಲು ಒಕ್ಕೂಟ ಸರ್ಕಾರ ತುದಿಗಾಲಿನಲ್ಲಿ ನಿಂತಿರುವಂತೆ ಭಾಸವಾಗುತ್ತಿದೆ.

ದೇಶವನ್ನು ಬಾಧಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಕಾರ್ಯೋನ್ಮುಖ ಆಗಬೇಕಿದ್ದವರು, ಸಮಸ್ಯೆ ಇದೆ ಎಂಬುದನ್ನು ಒಪ್ಪಿಕೊಳ್ಳಲೇ ಹಿಂಜರಿಯುತ್ತಿದ್ದಾರೆ. ಇತ್ತೀಚೆಗೆ ಬಿಡುಗಡೆಯಾದ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ದೇಶದ ಸ್ಥಾನ ಮತ್ತಷ್ಟು ಕುಸಿತ ಕಂಡಿರುವುದು ಒಕ್ಕೂಟ ಸರ್ಕಾರವನ್ನು ಚಿಂತೆಗೀಡುಮಾಡಬೇಕಿತ್ತು. ಜನ ಅಪೌಷ್ಟಿಕತೆಯಿಂದ ಬಳಲುವುದನ್ನು ತಡೆಗಟ್ಟಲು ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ತಜ್ಞರೊಂದಿಗೆ ಸಮಾಲೋಚನೆ ನಡೆಸಿ, ಅವುಗಳ ಅನುಷ್ಠಾನಕ್ಕೆ ರೂಪುರೇಷೆ ಸಿದ್ಧಪಡಿಸಬೇಕಿತ್ತು. ಆದರೆ, ಒಕ್ಕೂಟ ಸರ್ಕಾರ ಮಾಡಿದ್ದೇನು? ಈ ವರದಿಯನ್ನು ತಾನು ಒಪ್ಪಿಕೊಳ್ಳುವುದಿಲ್ಲವೆಂದು ತಿಳಿಸಿತು. ಈ ಮೂಲಕ ಹಸಿವು ಈ ದೇಶದ ಬಡವರನ್ನು ಬಾಧಿಸುತ್ತಿದೆ ಎಂಬುದನ್ನು ಒಪ್ಪಿಕೊಳ್ಳಲು ನಿರಾಕರಿಸಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಜಾಗತಿಕ ಮಾರುಕಟ್ಟೆಯಲ್ಲಿನ ವಿದ್ಯಮಾನಗಳು ಕಾರಣವೇ ವಿನಾ ಇದಕ್ಕೂ ಸರ್ಕಾರದ ನೀತಿಗಳಿಗೂ ಯಾವುದೇ ಸಂಬಂಧ ಇಲ್ಲವೆಂಬ ಧೋರಣೆ ಆಳುವವರದ್ದು. ಇವೆಲ್ಲಾ ತನ್ನ ನಿಯಂತ್ರಣದಲ್ಲಿಲ್ಲ ಎನ್ನುವ ಮೂಲಕ ಒಕ್ಕೂಟ ಸರ್ಕಾರವು ಯಾವ ಸಂದೇಶ ರವಾನಿಸಲು ಹೊರಟಿದೆ? ಸಮಸ್ಯೆಯೇ ಇಲ್ಲವೆನ್ನುವುದು ಅಥವಾ ಈ ಸಮಸ್ಯೆಗೆ ‘ನಾವು ಕಾರಣರಲ್ಲ’ ಎನ್ನುವುದು ಪಲಾಯನವಾದವಲ್ಲವೇ? ಸಮಸ್ಯೆ ಇದೆ ಎನ್ನುವುದನ್ನೇ ಒಪ್ಪಿಕೊಳ್ಳದವರು, ಸಮಸ್ಯೆಯನ್ನು ಪರಿಹರಿಸುವುದಿರಲಿ, ಅದು ಮತ್ತಷ್ಟು ಉಲ್ಬಣಗೊಳ್ಳದಂತೆ ಮುತುವರ್ಜಿ ತೋರುತ್ತಾರೆ ಎಂಬ ನಿರೀಕ್ಷೆ ಹೊಂದಬಹುದೇ?

ಒಕ್ಕೂಟ ಸರ್ಕಾರದ ಪಲಾಯನವಾದಿ ಧೋರಣೆ ಕೊರೊನಾ ಬಿಕ್ಕಟ್ಟಿನ ಸಂದರ್ಭದಲ್ಲಿ ಕೂಡ ಢಾಳಾಗಿಯೇ ಗೋಚರಿಸಿತು. ಮೊದಲ ಅಲೆ ವೇಳೆ ದೇಶದಲ್ಲಿ ಹೆಚ್ಚಿನ ಸಾವು-ನೋವುಗಳು ವರದಿಯಾಗದೆ ಹೋದಾಗ ತನ್ನ ಬೆನ್ನು ತಟ್ಟಿಕೊಂಡ ಒಕ್ಕೂಟ ಸರ್ಕಾರವು ಎರಡನೇ ಅಲೆ ವೇಳೆ ಆಮ್ಲಜನಕ ಹಾಗೂ ಸಮರ್ಪಕ ಚಿಕಿತ್ಸೆ ದೊರಕದೆ ಜನ ಸಾವನ್ನಪ್ಪ ತೊಡಗಿದಾಗ ತನಗೂ ಇದಕ್ಕೂ ಸಂಬಂಧವೇ ಇಲ್ಲವೆನ್ನುವ ಹಾಗೆ ಮೌನಕ್ಕೆ ಶರಣಾಯಿತು. ಅವಕಾಶ ಸಿಕ್ಕಾಗ ಬಿಜೆಪಿಯೇತರ ಪಕ್ಷಗಳ ನೇತೃತ್ವದ ರಾಜ್ಯ ಸರ್ಕಾರಗಳ ಕಾರ್ಯವೈಖರಿಯತ್ತ ಬೊಟ್ಟು ಮಾಡಿತು.

ದೇಶವನ್ನು ಬಾಧಿಸುತ್ತಲೇ ಇರುವ ಬಡತನ, ನಿರುದ್ಯೋಗ, ಬೆಲೆ ಏರಿಕೆಯಂತಹ ಬಹುಮುಖ್ಯ ಸಮಸ್ಯೆಗಳಿಗೆ ಒಕ್ಕೂಟ ಸರ್ಕಾರವು ಪರಿಹಾರ ಕಂಡುಹಿಡಿಯುವ ದಿಸೆಯಲ್ಲಿ ಕಾರ್ಯೋನ್ಮುಖವಾಗಿದೆ ಎನ್ನುವ ವಿಶ್ವಾಸ ಮೂಡಲು, ಮೊದಲಿಗೆ ಅದು ಈ ಸಮಸ್ಯೆಗಳು ಬಿಗಡಾಯಿಸುತ್ತಿರುವುದನ್ನು ಬಹಿರಂಗವಾಗಿ ಒಪ್ಪಿಕೊಳ್ಳಬೇಕಿದೆ. ಆನಂತರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಸಲುವಾಗಿ ಅನುಸರಿಸಬೇಕಾದ ಕ್ರಮಗಳ ಜಾರಿಗೆ ಮುತುವರ್ಜಿ ತೋರಬೇಕಿದೆ. ಈ ದಿಸೆಯಲ್ಲಿ ಸಮಸ್ಯೆಯನ್ನು ವಿಶಾಲ ನೆಲೆಗಟ್ಟಿನಲ್ಲಿ ಅರ್ಥೈಸಿಕೊಂಡು, ತಜ್ಞರೊಂದಿಗೆ ಸಮಾಲೋಚಿಸಿ ಸಲಹೆಗಳನ್ನು ಪಡೆದು, ಅರ್ಹವೆನಿಸಿದ ಪರಿಹಾರ ಆಯ್ದುಕೊಂಡು, ಅನುಷ್ಠಾನಗೊಳಿಸಿ, ಆನಂತರ ಅದರ ಪರಿಣಾಮಗಳ ಕುರಿತು ಅಧ್ಯಯನ ನಡೆಸಿ, ಅಗತ್ಯವಿದ್ದರೆ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಳ್ಳುವ ಮನಸ್ಸು ಮಾಡಬೇಕಿದೆ.

ಅಧಿಕಾರದಲ್ಲಿ ಇರುವವರು ಚುನಾವಣೆ ಸಂದರ್ಭದಲ್ಲಿ ಮಾಡುವ ಘೋಷಣೆಗಳು, ನೀಡುವ ಭರವಸೆಗಳು ಸರ್ಕಾರವೊಂದು ಸಮಸ್ಯೆಯ ಪರಿಹಾರಕ್ಕೆ ಗಂಭೀರ ಪ್ರಯತ್ನ ಮಾಡುತ್ತಿದೆ ಎನ್ನುವ ವಿಶ್ವಾಸ ಮೂಡಿಸಲಾರವು. ನಮ್ಮನ್ನು ಬಾಧಿಸುತ್ತಿರುವ ಸಮಸ್ಯೆಗಳನ್ನು ಹಿನ್ನೆಲೆಗೆ ಸರಿಸಲೆಂದೇ ಆಳುವವರು ಮತ್ತು ಅವರ ಹಿಂಬಾಲಕರು ಧರ್ಮ-ದೇವರು, ಮಂದಿರ-ಮಸೀದಿಯಂಥ ವಿಷಯಗಳನ್ನು ಮುನ್ನೆಲೆಗೆ ತರುತ್ತಿದ್ದಾರೆ. ಆಗ ‘ನಿಜವಾದ ಸಮಸ್ಯೆ ಕುರಿತು ಮೊದಲು ಮಾತನಾಡಿ’ ಎಂದು ಆಗ್ರಹಿಸುವ ವಿವೇಕ ನಮ್ಮಲ್ಲಿ ಜಾಗೃತಗೊಳ್ಳಬೇಕಲ್ಲವೇ?

ಸಂಪನ್ಮೂಲಗಳ ನಿರ್ವಹಣೆಯ ಸವಾಲು ಹೊತ್ತ ಯಾರಿಗೇ ಆದರೂ ಸಮಸ್ಯೆಗಳನ್ನು ಪರಿಹರಿಸುವ ಕೌಶಲ ಇರಬೇಕಾದುದು ಅತ್ಯಗತ್ಯ. ಎಲ್ಲ ಸಮಸ್ಯೆಗಳಿಗೂ ಪರಿಹಾರ ಕಂಡುಹಿಡಿಯುವ ತಿಳಿವಳಿಕೆ ಮತ್ತು ಕೌಶಲ ಒಬ್ಬ ವ್ಯಕ್ತಿಯಲ್ಲಿರುವುದು ಅಸಾಧ್ಯ. ಆಯಾ ವಿಷಯ ತಜ್ಞರೊಂದಿಗೆ ಸಮಾಲೋಚಿಸಿ, ಸಮಸ್ಯೆ ನಿವಾರಣೆ ಅಥವಾ ಅದರ ತೀವ್ರತೆ ತಗ್ಗಿಸಲು ಇರುವ ದಾರಿಗಳ ಕುರಿತು ಅರಿತುಕೊಳ್ಳುವ ವಿವೇಕವು ಸಂಪನ್ಮೂಲಗಳ ನಿರ್ವಾಹಕರಲ್ಲಿ ಇರಬೇಕಾದುದು ಅತ್ಯಗತ್ಯ. ದೇಶದ ಸಂಪನ್ಮೂಲಗಳನ್ನು ನಿರ್ವಹಿಸುವವರಿಗೂ ಇದು ಅನ್ವಯವಾಗಲಿದೆ.

ಸವಾಲುಗಳಿಗೆ ಬೆನ್ನು ತೋರಿ, ವೈಫಲ್ಯಗಳ ಹೊಣೆ ಹೊರದೆ, ಗೆಲುವಿನಲ್ಲಿ ಮಾತ್ರ ಸಿಂಹಪಾಲು ಪಡೆಯಲು ತವಕಿಸುವವರಿಂದ ಸಮಸ್ಯೆಗಳ ಪರಿಹಾರಕ್ಕೆ ಬೇಕಿರುವ ಸಮರ್ಥ ನಾಯಕತ್ವ ನಿರೀಕ್ಷಿಸಬಹುದೇ?

ವಾಚಕರ ವಾಣಿ

ಅವಕಾಶದ ಮಿತಿ ಏಕೆ?

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ರಾಜ್ಯದ ಉನ್ನತ ಹುದ್ದೆಗಳಾದ ಗೆಜೆಟೆಡ್ ಪ್ರೊಬೇಷನರಿಯ 350ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇದ್ದು, 40 ಹುದ್ದೆಗಳ ನೇಮಕಾತಿಗೆ ಮಾತ್ರ ಪ್ರಸ್ತಾವ ಸಲ್ಲಿಕೆಯಾಗಿದೆ ಎಂದು ವರದಿಯಾಗಿದೆ. ಈ ಸುದ್ದಿಯು ಆಕಾಂಕ್ಷಿಗಳಲ್ಲಿ ಬೇಸರ ತರಿಸಿದೆ. ಸಾಮಾನ್ಯ ಅಭ್ಯರ್ಥಿಗೆ 5 ಮತ್ತು ಒಬಿಸಿ ಅಭ್ಯರ್ಥಿಗೆ 7 ಬಾರಿ ಪರೀಕ್ಷೆ ಎದುರಿಸುವ ಅವಕಾಶಗಳು ಇದ್ದರೂ ದಶಕದಲ್ಲಿ ನಾಲ್ಕು ಬಾರಿ (2011, 2014, 2015, 2017) ಮಾತ್ರ ನೇಮಕಾತಿ ನಡೆದಿದೆ.

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯು ಪ್ರತಿವರ್ಷ ನಡೆಯಬೇಕು. ಹಾಗೆ ನಡೆಸಲು ಸಾಧ್ಯವಾಗದಿದ್ದ ಮೇಲೆ ಈ ಅವಕಾಶದ ಮಿತಿ ಏಕೆ? ಹೊಸ ಅಧಿಸೂಚನೆಯ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳಿಗೆ ನಿರಾಸೆ ತಪ್ಪಿದ್ದಲ್ಲ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು.

ಚೈತ್ರ ನಾಗರಾಜ್, ಚಿಕ್ಕಮಗಳೂರು

ಪ್ರಶ್ನಾರ್ಹ ಹೇಳಿಕೆ, ಸರಳೀಕರಣ ಸಲ್ಲದು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಇತ್ತೀಚಿನ ಎರಡು ಹೇಳಿಕೆಗಳು ಪ್ರಶ್ನಾರ್ಹವಾಗಿವೆ. ‘ಕೆಂಪೇಗೌಡರಿಗೆ ಹಿಂದೆ ಸರಿಯಾದ ಗೌರವ ದೊರಕಿರಲಿಲ್ಲ, ಈಗ ನಮ್ಮ ಸರ್ಕಾರದಿಂದ ಅದು ಸಲ್ಲುತ್ತಿದೆ’ (ಪ್ರ.ವಾ., ಅ. 21). ಪ್ರತಿಮೆ ಸ್ಥಾಪಿಸುವುದು, ಹೆಸರಿಡುವುದು, ನೆನಪಿನ ಸಮಾರಂಭ ಏರ್ಪಡಿಸುವುದು ಇವೇ ಗೌರವ ಸಲ್ಲಿಸುವ ಕ್ರಮಗಳು ಎಂಬ ಸರಳೀಕರಣ ಇಲ್ಲಿದೆ. ಬೆಂಗಳೂರು ವಿಮಾನ ನಿಲ್ದಾಣದ ವಿಷಯಕ್ಕೆ ಬಂದರೆ, ಇದರ ಷೇರುದಾರರ ಒಪ್ಪಂದಕ್ಕೆ ಸಹಿ ಆಗುವಾಗ ಆಗಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಯಾವುದೇ ವ್ಯಕ್ತಿಯ ಹೆಸರನ್ನು ಇಡುವ ಉದ್ದೇಶವಿಲ್ಲ ಎಂದಿದ್ದರು. ಈಗೇನಾಗಿದೆ- ಹೆಸರು, ಪ್ರತಿಮೆ ಎರಡೂ! ಮೃತ್ತಿಕೆ ಸಂಗ್ರಹಕ್ಕೆ ಸ್ಫೂರ್ತಿ ಎಲ್ಲಿಂದ ಬಂತು? (ಅಯೋಧ್ಯೆಯ ರಾಮಮಂದಿರ?) ನಗರವನ್ನು ವ್ಯವಸ್ಥಿತವಾಗಿ ಕಟ್ಟಿ, ಉತ್ತಮ ನಿರ್ವಹಣೆ ತೋರುವುದು ಕೆಂಪೇಗೌಡರ ಮೂಲ ಉದ್ದೇಶವಾಗಿತ್ತು. ಈ ಇಪ್ಪತ್ತು ವರ್ಷಗಳಲ್ಲಿ ಸರ್ಕಾರ ಅದರಲ್ಲಿ ವಿಫಲವಾಗಿದೆ.

‘ಅಂತರರಾಜ್ಯ ಜಲ ವಿವಾದ ಕಾಯ್ದೆ ಅಪ್ರಸ್ತುತ’ ಎಂಬುದು ಅವರ ಇನ್ನೊಂದು ಹೇಳಿಕೆ. ಕಾವೇರಿ, ಕೃಷ್ಣಾ ವಿವಾದಗಳು ಭಾಗಶಃ ಪರಿಹಾರ ಹೊಂದಲು ಆ ಕಾಯ್ದೆಯೇ ಕಾರಣ. ರಾಜ್ಯ ಸರ್ಕಾರಗಳನ್ನು ನಡೆಸುವವರು ರಾಜಕೀಯ ಒತ್ತಡಗಳ ಕಾರಣ ತಕರಾರು ಎತ್ತುತ್ತಾ ಹೋದರೆ ಕಾನೂನು, ಟ್ರಿಬ್ಯುನಲ್, ಕೋರ್ಟ್‌ಗಳು ಏನು ಮಾಡಬಲ್ಲವು? ಈಗ ಇವರು ಅಪ್ರಸ್ತುತ ಎಂದ ಮಾತ್ರಕ್ಕೆ ಕೇಂದ್ರ ರದ್ದು ಮಾಡುತ್ತದೆಯೇ? ತಿದ್ದುಪಡಿ ತಂದೀತೆ? ವಕೀಲರ ಸಂಘದ ಕಾರ್ಯಕ್ರಮದಲ್ಲಿ ಹೀಗೆ ಹೇಳುವುದು ಪ್ರಬುದ್ಧ ನಡೆ ಎನಿಸಿಕೊಳ್ಳುವುದಿಲ್ಲ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಕಾರಣಿಕರಿಗೂ ಸಿಗಲಿ ಮಾಸಾಶನ

ಭೂತದ ಕೋಲ ನಡೆಸುವ ನರ್ತನಕಾರರಿಗೆ ಮಾಸಾಶನ ಮಂಜೂರು ಮಾಡಿರುವುದು ಅತ್ಯಂತ ಶ್ಲಾಘನೀಯ. ಅದೇ ರೀತಿ ಉತ್ತರ ಕರ್ನಾಟಕದ ವಿವಿಧ ದೇವಸ್ಥಾನಗಳಲ್ಲಿ ವರ್ಷಕ್ಕೊಮ್ಮೆಯೋ ಎರಡು ಬಾರಿಯೋ ಕಾರಣಿಕ ನುಡಿಯುವ ಗೊರವಪ್ಪಗಳಿದ್ದಾರೆ. ದೈವಾರಾಧನೆಯನ್ನೇ ತಮ್ಮ ಬದುಕಿನ ನೆಲೆಯಾಗಿಸಿಕೊಂಡ ಇಂತಹ ಗೊರವಪ್ಪಗಳಿಗೂ ಸರ್ಕಾರವು ಮಾಸಾಶನ ಮಂಜೂರು ಮಾಡಿ, ಅವರ ಬದುಕಿಗೆ ನೆಮ್ಮದಿ ಉಂಟು ಮಾಡಲು ಕ್ರಮ ಜರುಗಿಸಬೇಕು.

ಡಾ. ಹನುಮಂತ ಪೂಜಾರ, ಗದಗ

ಕನ್ನಡದಲ್ಲಿ ಹೆಸರಿಗೆ ಬರವೇ?

ವೀಲ್ಚೇರ್ ರೋಮಿಯೋ, ಟ್ವೆಂಟಿ ಒನ್ ಅವರ್ಸ್, ಹೆಡ್ ಬುಷ್... ಇವು ಇಂಗ್ಲಿಷ್ ಸಿನಿಮಾಗಳ ಶೀರ್ಷಿಕೆಗಳು ಅಂದುಕೊಂಡರೆ ಖಂಡಿತಾ ತಪ್ಪು. ಇವು ಇತ್ತೀಚಿನ ಕನ್ನಡ ಸಿನಿಮಾಗಳ ಹೆಸರುಗಳು. ಸಿನಿಮಾ ಹೆಸರುಗಳನ್ನು ಕನ್ನಡದಲ್ಲಿ ಇಡುವುದು ಅಷ್ಟು ಕಷ್ಟವೇ?

ಕೆನಡಾದ ಸಂಸತ್ತಿನಲ್ಲಿ ಕನ್ನಡದಲ್ಲಿ ಮಾತನಾಡಿ ಕಸ್ತೂರಿ ಕನ್ನಡದ ಭಾಷಾಭಿಮಾನ ಮೆರೆದ ಕರ್ನಾಟಕ ಸಂಜಾತ ಚಂದ್ರ ಆರ್ಯ ಅಂಥವರು ನಿಜವಾಗಲೂ ಕನ್ನಡ ಭಾಷೆಯ ರಾಯಭಾರಿಗಳಂತೆ ಭಾಸವಾಗುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿರುವ ಶೀರ್ಷಿಕೆಗಳಿಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಇನ್ನಾದರೂ ಅನುಮತಿ ನೀಡದಿರಲಿ. ಕನ್ನಡತನವನ್ನು ಮೆರೆಯಲು ಈ ಮೂಲಕ ಅನುವು ಮಾಡಿಕೊಡಲಿ.

ಟಿ.ಎಸ್.ಪ್ರತಿಭಾ, ಚಿತ್ರದುರ್ಗ

ನಿಲ್ದಾಣಕ್ಕೆ ನಾಮಕರಣ: ಇತಿಹಾಸ ಪರಿಗಣಿಸಿ

ವಿಜಯಪುರ ವಿಮಾನ ನಿಲ್ದಾಣಕ್ಕೆ ಬಸವೇಶ್ವರರ ಹೆಸರಿಡಲು ರಾಜ್ಯ ಸಚಿವ ಸಂಪುಟ ಇತ್ತೀಚೆಗೆ ತೀರ್ಮಾನಿಸಿದೆ. ಇದನ್ನು ಬದಲಾವಣೆ ಮಾಡಿ ಕಲಬುರಗಿ ವಿಮಾನ ನಿಲ್ದಾಣಕ್ಕೆ ಬಸವೇಶ್ವರರ ಹೆಸರನ್ನು ಇಡಬೇಕು. ಹಾಗೆಯೇ ವಿಜಯಪುರಕ್ಕೆ ಸಿದ್ಧರಾಮೇಶ್ವರ ವಿಮಾನ ನಿಲ್ದಾಣ ಎಂದು ನಾಮಕರಣ ಮಾಡುವುದು ಒಳಿತು. ಇದಕ್ಕೆ ಪ್ರಮುಖ ಐತಿಹಾಸಿಕ, ಸಾಂಸ್ಕೃತಿಕ ಕಾರಣವಿದೆ. ಬಸವಣ್ಣನವರು ಹುಟ್ಟಿದ್ದು ವಿಜಯಪುರ ಜಿಲ್ಲೆಯಲ್ಲಾದರೂ ಅವರ ಕಾರ್ಯಕ್ಷೇತ್ರ ಕಲ್ಯಾಣ ಕರ್ನಾಟಕ. ಅದರ ರಾಜಧಾನಿ ಕಲಬುರಗಿ.

ಇನ್ನು ವಿಜಯಪುರಕ್ಕೆ ಬಸವಣ್ಣನವರ ಸಮಕಾಲೀನ ಶರಣರಾದ ಸಿದ್ಧರಾಮೇಶ್ವರರ ಹೆಸರಿಡುವುದು ಔಚಿತ್ಯಪೂರ್ಣ. ಏಕೆಂದರೆ ವಿಜಯಪುರವು ಸಿದ್ಧರಾಮರ ಕಾರ್ಯಕ್ಷೇತ್ರ. ಅವರ ನೆಲೆವೀಡಾದ ಸೋಲಾಪುರ ಅದರ ಸಮೀಪವೇ ಇದೆ. ಅಲ್ಲದೆ ಅಲ್ಲಿನ ಸಿದ್ಧೇಶ್ವರ ದೇವಾಲಯ ಪ್ರಸಿದ್ಧವಾಗಿದೆ. ಇದರಿಂದ ಹೊರ ರಾಜ್ಯದ ಮತ್ತೊಬ್ಬ ಮಹಾನ್ ಶಿವಶರಣನಿಗೊಂದು ಗೌರವ ಸ್ಮಾರಕ ಮಾಡಿದ ಶ್ರೇಯಸ್ಸು ಕರ್ನಾಟಕ ಸರ್ಕಾರಕ್ಕೆ ಲಭಿಸಿದಂತಾಗುವುದು. 12ನೇ ಶತಮಾನದ ಕಾಯಕಯೋಗಿ, ಧರ್ಮಗುರು, ಪ್ರಮುಖ ವಚನಕಾರರೊಬ್ಬರನ್ನು ಗೌರವಿಸಿದಂತಾಗುತ್ತದೆ. ಇಷ್ಟಕ್ಕೂ ಸಿದ್ಧರಾಮೇಶ್ವರರು ಲಿಂಗಾಯತರ ಮನೆದೇವತೆ ಮಾತ್ರವೇ ಅಲ್ಲದೆ ಅಸಂಖ್ಯ ಕುರುಬರು, ಒಕ್ಕಲಿಗರು ಮತ್ತು ಇತರ ಹಿಂದುಳಿದ ವರ್ಗಗಳ ಮನೆದೈವವೂ ಹೌದು.

ಡಾ. ಮೈಸಿ ಪಾಟೀಲ್, ಡಾ. ಎಂ.ಎಸ್.ಮಹಲಿಂಗಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತೆಲಂಗಾಣ ಚುನಾವಣೆಗಳಿಗೆ ಈಗಲೇ ಅಣಿ

ಪ್ರಜಾವಾಣಿ ವಾರ್ತೆ

ಹೈದರಾಬಾದ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೋದಿ

ತೆಲಂಗಾಣದ ರಾಜಕಾರಣದಲ್ಲಿ ಸಂಚಲನ ಸೃಷ್ಟಿಯಾಗಿದೆ. ಪ್ರತಿ ದಿನವೂ ಹೊಸ ಹೊಸ ಬೆಳವಣಿಗೆಗಳಿಗೆ ಅಲ್ಲಿನ ರಾಜಕೀಯವು ಸಾಕ್ಷಿಯಾಗುತ್ತಿದೆ. ಇಷ್ಟೊಂದು ಬಿಸಿ ಬಿಸಿಯಾಗಿ ರಾಜಕೀಯ ನಡೆಯಲು ಇರುವ ಕಾರಣವು ಯಾರೂ ಊಹಿಸಲಾಗದ್ದೇನೂ ಅಲ್ಲ. ಬೆನ್ನು ಬೆನ್ನಿಗೆ ಎರಡು ಚುನಾವಣೆಗಳು ಹತ್ತಿರ ಬಂದಿವೆ. 2023ರಲ್ಲಿ ತೆಲಂಗಾಣ ವಿಧಾನಸಭೆಗೆ ಚುನಾವಣೆ ನಡೆಯಲಿದೆ. 2024ರಲ್ಲಿ ಲೋಕಸಭೆಗೆ ಚುನಾವಣೆ ನಡೆಯಲಿದೆ. ದಕ್ಷಿಣ ಭಾರತದಲ್ಲಿ ಬಿಜೆಪಿ ದುರ್ಬಲ ಎಂದೇ ಹೇಳಬಹುದು. ಕರ್ನಾಟಕವನ್ನು ಬಿಟ್ಟರೆ ಬೇರೆ ರಾಜ್ಯದಲ್ಲಿ ಛಾಪು ಮೂಡಿಸಲು ಬಿಜೆಪಿಗೆ ಸಾಧ್ಯವಾಗಿಲ್ಲ. ಕರ್ನಾಟಕದಲ್ಲಿ ಕೂಡ ಯಾವುದೇ ಚುನಾವಣೆಯಲ್ಲಿ ಸರಳ ಬಹುಮತ ಪಡೆಯಲು ಬಿಜೆಪಿಗೆ ಆಗಿಲ್ಲ. ಆದರೆ, ಎರಡು ಚುನಾವಣೆಗಳಲ್ಲಿ ಅತಿ ದೊಡ್ಡ ಪಕ್ಷವಾಗಿ ಅದು ಹೊರಹೊಮ್ಮಿದೆ. ಕರ್ನಾಟಕವಲ್ಲದೆ ದಕ್ಷಿಣದಲ್ಲಿ ಇನ್ನೊಂದು ರಾಜ್ಯದಲ್ಲಿ ಅವಕಾಶ ಇದ್ದರೆ ಅದು ತೆಲಂಗಾಣ ಎಂದು ಬಿಜೆಪಿ ಭಾವಿಸಿದೆ. ಅದರ ಪರಿಣಾಮ ಅಲ್ಲಿನ ನಿತ್ಯದ ರಾಜಕಾರಣದಲ್ಲಿ ಕಾಣಿಸುತ್ತಿದೆ.

ಬಿಜೆಪಿಯ ಪ್ರಚಾರದ ಮುಂಚೂಣಿಯಲ್ಲಿ ಸದಾ ಇರುವ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಅದಿತ್ಯನಾಥ ಅವರು ತೆಲಂಗಾಣಕ್ಕೆ ಇತ್ತೀಚಿನ ದಿನಗಳಲ್ಲಿ ಪದೇ ಪದೇ ಭೇಟಿ ಕೊಟ್ಟಿದ್ದಾರೆ. ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯನ್ನು ಹೈದರಾಬಾದ್‌ನಲ್ಲಿ ಜುಲೈನಲ್ಲಿ ನಡೆಸಲಾಗಿದೆ. ಈ ಸಭೆಯಲ್ಲಿ ಮೋದಿ, ಶಾ ಅವರೆಲ್ಲ ಭಾಗಿಯಾಗಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಂಡಿ ಸಂಜಯ ರೆಡ್ಡಿ ಅವರು ಪಾದಯಾತ್ರೆ ನಡೆಸಿದ್ದಾರೆ. ಹೀಗೆ ತೆಲಂಗಾಣ ತಮ್ಮ ಆದ್ಯತೆಯ ಪಟ್ಟಿಯಲ್ಲಿದೆ ಎಂಬುದನ್ನು ಮತದಾರರಿಗೆ ಮನದಟ್ಟು ಮಾಡುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ.

ಕೋಮು ಧ್ರುವೀಕರಣದ ಪ್ರಯತ್ನವು ಬಿಜೆಪಿ ವಿವಿಧ ರಾಜ್ಯಗಳಲ್ಲಿ ಪ್ರಯೋಗಿಸಿದ್ದ ಮತ್ತು ಪ್ರಯೋಗಿಸುತ್ತಿರುವ ಚುನಾವಣಾ ಕಾರ್ಯತಂತ್ರ. ತೆಲಂಗಾಣದಲ್ಲಿಯೂ ಈ ಪ್ರಯತ್ನವನ್ನು ಬಿಜೆಪಿ ನಡೆಸಿದೆ. ತೆಲಂಗಾಣ ರೈತರ ಸಶಸ್ತ್ರ ಹೋರಾಟವನ್ನು ಹಿಂದೂ–ಮುಸ್ಲಿಮರ ನಡುವಣ ಹೋರಾಟ ಎಂದು ಬಿಂಬಿಸಲು ಬಿಜೆಪಿ ಯತ್ನಿಸಿದೆ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚೂರಿ ಇತ್ತೀಚೆಗೆ ಹೇಳಿದ್ದರು. ಹೈದರಾಬಾದ್‌ನ ಹೆಸರನ್ನು ಭಾಗ್ಯ ನಗರ ಎಂದು ಬದಲಾಯಿಸುವುದಾಗಿ ಮೋದಿ, ಯೋಗಿ ಸೇರಿ ಬಿಜೆಪಿಯ ಹಲವು ಮುಖಂಡರು ಹಲವು ಬಾರಿ ಹೇಳಿದ್ದಾರೆ. ಬಂಡಿ ಸಂಜಯ ಅವರು ಧ್ರುವೀಕರಣದ ಹಲವು ಪ್ರಯತ್ನ ಮಾಡಿದ್ದಾರೆ. ತೆಲಂಗಾಣದ ಮಸೀದಿಗಳನ್ನು ಅಗೆದರೆ ಎಲ್ಲೆಡೆಯೂ ಶಿವಲಿಂಗ ಇರಬಹುದು ಎಂದು ಅವರು ಹೇಳಿದ್ದಾರೆ. 'ಕಾಶ್ಮೀರ್ ಫೈಲ್ಸ್' ಮಾದರಿಯಲ್ಲಿಯೇ 'ರಜಾಕಾರ ಫೈಲ್ಸ್' ಚಲನಚಿತ್ರ ನಿರ್ಮಿಸಬೇಕು ಎಂದಿದ್ದಾರೆ.

ಆಂಧ್ರ ಪ್ರದೇಶವು ಭಾರತದೊಂದಿಗೆ ಸೇರ್ಪಡೆಯಾದ ದಿನವನ್ನು ಬಿಆರ್‌ಎಸ್ ಮತ್ತು ಬಿಜೆಪಿ ಪ್ರತ್ಯೇಕವಾಗಿ ಆಚರಿಸಿವೆ. ತೆಲಂಗಾಣ ಸೇರ್ಪಡೆಯ ವಜ್ರ ಮಹೋತ್ಸವ ಎಂಬ ಉತ್ಸವಕ್ಕೆ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರು ಹೈದಾರಾಬಾದ್‌ನಲ್ಲಿ ಚಾಲನೆ ನೀಡಿದರೆ, ತೆಲಂಗಾಣ ವಿಮೋಚನಾ ದಿನಕ್ಕೆ ಅಮಿತ್ ಶಾ ಅವರು ಸಿಕಂದರಾಬಾದ್‌ನಲ್ಲಿ ಚಾಲನೆ ನೀಡಿದ್ದರು.

ಬಿಜೆಪಿಯೇ ತನ್ನ ನೇರ ಪ್ರತಿಸ್ಪರ್ಧಿ ಎಂದು ಭಾವಿಸಿರುವ ಕೆ.ಚಂದ್ರಶೇಖರ ರಾವ್ ಅವರು ಆ ಪಕ್ಷವನ್ನು ಟೀಕಿಸುವ ಯಾವ ಅವಕಾಶವನ್ನೂ ಬಿಟ್ಟುಕೊಡುತ್ತಿಲ್ಲ.

ಬಿಆರ್‌ಎಸ್ ರಾಷ್ಟ್ರ ರಾಜಕಾರಣದ ಕನಸು

ಕೆಸಿಆರ್ ನೇತೃತ್ವದ ಟಿಆರ್‌ಎಸ್ ಈಗ ಬಿಆರ್‌ಎಸ್ ಎಂದು ಮರುನಾಮಕರಣಕ್ಕೆ ಒಳಗಾಗಿದೆ. ಪಕ್ಷವನ್ನು ಒಂದು ರಾಷ್ಟ್ರೀಯ ಪಕ್ಷವನ್ನಾಗಿಸುವ ಉದ್ದೇಶದ ಭಾಗವಾಗಿ ಕೆಸಿಆರ್ ಅವರು ಹೆಸರು ಬದಲಾವಣೆ ಮಾಡಿದ್ದಾರೆ. ರಾಷ್ಟ್ರ ರಾಜಕಾರಣದಲ್ಲಿ ಒಂದು ಪ್ರಮುಖ ಶಕ್ತಿಯಾಗಬೇಕು ಎಂದು ಹೊರಟಿರುವ ಕೆಸಿಆರ್ ಅವರು, ಅದಕ್ಕೆ ಆಯ್ಕೆ ಮಾಡಿಕೊಂಡಿದ್ದು ತೃತೀಯ ರಂಗದ ಹಾದಿಯನ್ನು.

ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಅನ್ನು ಕೆಸಿಆರ್ ಈಗ ವಿರೋಧಿಸುತ್ತಿದ್ದಾರೆ. ಆದರೆ, 2018ರವರೆಗೆ ಕೆಸಿಆರ್ ಅವರು ಬಿಜೆಪಿಯನ್ನು ಬೆಂಬಲಿಸುತ್ತಿದ್ದರು. ರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿಯ ರಾಮನಾಥ ಕೋವಿಂದ್ ಅವರಿಗೆ ಕೆಸಿಆರ್ ಅವರ ಪಕ್ಷ ಬೆಂಬಲ ನೀಡಿತ್ತು. ಸಂಸತ್ತಿನಲ್ಲಿಯೂ ಮಹತ್ವದ ವಿಚಾರಗಳಲ್ಲಿ ಬಿಜೆಪಿಗೆ ಬೆಂಬಲ ನೀಡಲಾಗಿತ್ತು. ಈಗ, ರಾಜ್ಯ ಮತ್ತು ದೇಶದಲ್ಲಿನ ಬಿಕ್ಕಟ್ಟಿನ ಸ್ಥಿತಿಗೆ ಬಿಜೆಪಿಯೇ ಕಾರಣ ಎಂದು ಬಿಆರ್‌ಎಸ್ ದೂರುತ್ತಿದೆ. ಅದೇ ಸಂದರ್ಭದಲ್ಲಿ ಕಾಂಗ್ರೆಸ್ ಅನ್ನೂ ವಿರೋಧಿಸುತ್ತದೆ. ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್‌ನಿಂದ ಸಾಧ್ಯವಿಲ್ಲ. ಹೀಗಾಗಿ ಕಾಂಗ್ರೆಸ್ ಅನ್ನು ಹೊರತುಪಡಿಸಿದ ವಿರೋಧ ಪಕ್ಷಗಳ ಕೂಟವನ್ನು ರಚಿಸಬೇಕು ಎಂಬುದು ಕೆಸಿಆರ್ ಅವರ ನಿಲುವು. ಇದಕ್ಕಾಗಿ ಅವರು ದೇಶದ ಎಲ್ಲಾ ರಾಜ್ಯಗಳಲ್ಲಿರುವ ಪ್ರಾದೇಶಿಕ ಪಕ್ಷಗಳ ನಾಯಕರನ್ನು ಭೇಟಿ ಮಾಡಿ ಹಲವು ಸುತ್ತಿನ ಮಾತುಕತೆ ನಡೆಸಿದ್ದಾರೆ.

ವಿರೋಧ ಪಕ್ಷಗಳ ನಾಯಕರನ್ನು ಬಿಜೆಪಿ ಸೆಳೆದುಕೊಳ್ಳುತ್ತದೆ ಎಂದು ಆರೋಪಿಸುವ ಬಿಆರ್‌ಎಸ್, ತೆಲಂಗಾಣದಲ್ಲಿ ತಾನೇ ಈ ಕೆಲಸವನ್ನು ಮಾಡಿದೆ. ಸರ್ಕಾರ ರಚನೆಯಾದ ಕೆಲವೇ ತಿಂಗಳುಗಳಲ್ಲಿ ಟಿಡಿಪಿ ಮತ್ತು ಪಕ್ಷೇತರ ಅಭ್ಯರ್ಥಿಗಳಲ್ಲಿ ಮೂವರು ಬಿಆರ್‌ಎಸ್ ಸೇರಿದರು. ಇದರಿಂದ ಪಕ್ಷದ ಬಲ 91ಕ್ಕೆ ಏರಿಕೆಯಾಗಿತ್ತು. ಅದು ಹಾಗೇ ಉಳಿಯಲಿಲ್ಲ. ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್‌ನ 12 ಶಾಸಕರನ್ನು ಬಿಆರ್‌ಎಸ್ ತನ್ನತ್ತ ಸೆಳೆಯಿತು. ಇದರಿಂದ ರಾಜ್ಯ ವಿಧಾನಸಭೆಯಲ್ಲಿ ಆಡಳಿತಾರೂಢ ಬಿಆರ್‌ಎಸ್‌ನ ಬಲ 100ರ ಗಡಿ ದಾಟಿತು. ಒಂದು ಹಂತದಲ್ಲಿ ಬಿಆರ್‌ಎಸ್‌ನ ಬಲ 105ಕ್ಕೆ ಏರಿಕೆಯಾಗಿತ್ತು. ಆದರೆ ಅಷ್ಟು ಬಲವನ್ನು ಕಾಯ್ದುಕೊಳ್ಳಲು ಬಿಆರ್‌ಎಸ್‌ಗೆ ಸಾಧ್ಯವಾಗಲಿಲ್ಲ. ಪಕ್ಷಾಂತರದಿಂದ ಕೆಲವು ಶಾಸಕರನ್ನು ಕಳೆದುಕೊಂಡರೆ, ಕೆಲವು ಶಾಸಕರು ನಿಧನರಾದರು. ಇದರಿಂದ ಪಕ್ಷದ ಬಲ ಕುಗ್ಗಿದರೂ, ಬೇರೆ ಪಕ್ಷಗಳ ಶಾಸಕರು ಬಂದಿದ್ದರಿಂದ ವಿಧಾನಸಭೆಯಲ್ಲಿ ಈಗ ಬಿಆರ್‌ಎಸ್‌ನ 102 ಶಾಸಕರಿದ್ದಾರೆ.



ಕೆಸಿಆರ್



ಉಪಚುನಾವಣೆಗಳಲ್ಲಿ ಬಿಜೆಪಿಗೆ ಲಾಭ

ತೆಲಂಗಾಣದಲ್ಲಿ ಈಗಷ್ಟೇ ನೆಲೆ ಕಂಡುಕೊಳ್ಳುತ್ತಿರುವ ಬಿಜೆಪಿ, 2018ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಒಂದು ಸ್ಥಾನವನ್ನು ಮಾತ್ರ ಗೆದ್ದುಕೊಂಡಿತ್ತು. ಆದರೆ, ಚಲಾವಣೆಯಾದ ಒಟ್ಟು ಮತದಲ್ಲಿ ಶೇ 6ರಷ್ಟು ಮತಗಳು ಬಿಜೆಪಿಗೆ ಬಂದಿದ್ದವು. ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಬಿಜೆಪಿ ಮುಂದಿನ ಚುನಾವಣೆವರೆಗೆ ಕಾಯುವಷ್ಟು ತಾಳ್ಮೆ ಹೊಂದಿಲ್ಲ. ಕಾಂಗ್ರೆಸ್ ಮತ್ತು ಬಿಆರ್‌ಎಸ್‌ನ ಕೆಲವು ನಾಯಕರನ್ನು ಈಗಾಗಲೇ ಪಕ್ಷಕ್ಕೆ ಸೇರಿಸಿಕೊಂಡಿದೆ.

ಮಧ್ಯಪ್ರದೇಶ, ಕರ್ನಾಟಕ, ಮಹಾರಾಷ್ಟ್ರದಲ್ಲಿ ಮಾಡಿದಂತೆ ಇಲ್ಲಿಯೂ ಆಡಳಿತಾರೂಢ ಪಕ್ಷದ ಶಾಸಕರನ್ನು ಸೆಳೆದುಕೊಳ್ಳಲು ಯತ್ನಿಸಿದೆ. ಯಶಸ್ವಿಯೂ ಆಗಿದೆ. 2021ರಲ್ಲಿ ಬಿಆರ್‌ಎಸ್ ಶಾಸಕ ಮತ್ತು ಪ್ರಮುಖ ನಾಯಕ ಇ.ರಾಜೇಂದರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಕೆಲವೇ ದಿನಗಳಲ್ಲಿ ಬಿಜೆಪಿ ಸೇರಿದರು. ಅವರ ರಾಜೀನಾಮೆಯಿಂದ ತೆರವಾಗಿದ್ದ ಹುಜೂರಾಬಾದ್ ವಿಧಾನಸಭಾ ಕ್ಷೇತ್ರಕ್ಕೆ ಅದೇ ವರ್ಷದಲ್ಲೇ ಚುನಾವಣೆ ನಡೆಯಿತು. ಬಿಜೆಪಿಯಿಂದ ಕಣಕ್ಕೆ ಇಳಿದಿದ್ದ ರಾಜೇಂದರ್ ಬಿಆರ್‌ಎಸ್ ಅಭ್ಯರ್ಥಿಯ ಎದುರು ಪ್ರಯಾಸದ ಗೆಲುವು ಸಾಧಿಸಿದರು.

2020ರಲ್ಲಿ ಬಿಆರ್‌ಎಸ್‌ನ ಪ್ರಮುಖ ನಾಯಕ ರಾಮಲಿಂಗಾ ರೆಡ್ಡಿ ಅವರು ನಿಧನರಾದರು. ತೆರವಾದ ಕ್ಷೇತ್ರದಲ್ಲಿ ರಾಮಲಿಂಗಾ ರೆಡ್ಡಿ ಅವರ ಪತ್ನಿಯನ್ನು ಬಿಆರ್‌ಎಸ್ ಕಣಕ್ಕೆ ಇಳಿಸಿತ್ತು. ಬಿಆರ್‌ಎಸ್ ಅಭ್ಯರ್ಥಿಗೇ ಗೆಲುವಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ. ಬಿಜೆಪಿಯ ಅಭ್ಯರ್ಥಿ ರಘುನಂದನ್ ರಾಮ್ ಒಂದು ಸಾವಿರದಷ್ಟು ಮತಗಳ ಅಂತರದಿಂದ, ಬಿಆರ್‌ಎಸ್ ಅಭ್ಯರ್ಥಿಯನ್ನು ಸೋಲಿಸಿದರು. ಬಿಆರ್‌ಎಸ್ ಒಂದು ಸ್ಥಾನವನ್ನು ಕಳೆದುಕೊಂಡರೆ, ಬಿಜೆಪಿ ಒಂದು ಸ್ಥಾನವನ್ನು ಹೆಚ್ಚಿಸಿಕೊಂಡಿತು. ಈಗ ಉಪಚುನಾವಣೆ ನಡೆಯುತ್ತಿರುವ ಮುನುಗೋಡು ಕ್ಷೇತ್ರದಲ್ಲಿ ಗೆಲುವು ಸಾಧಿಸಲು ಬಿಜೆಪಿ ಹೋರಾಡುತ್ತಿದೆ. ಬಿಜೆಪಿ ಕಾರ್ಯಕರ್ತರು ಕ್ಷೇತ್ರದ ಮತದಾರರ ಮನೆಗೆ ಈವರೆಗೆ ಕನಿಷ್ಠ ಹತ್ತು ಬಾರಿ ಭೇಟಿ ನೀಡಿದ್ದಾರೆ. ಇಲ್ಲೂ ಗೆಲುವು ಸಾಧಿಸುವ ವಿಶ್ವಾಸದಲ್ಲಿದೆ ಬಿಜೆಪಿ.

ಕಾಂಗ್ರೆಸ್ ದುಃಸ್ಥಿತಿ

ತೆಲಂಗಾಣದಲ್ಲಿ ಕಾಂಗ್ರೆಸ್ ಈಗ ಅತ್ಯಂತ ಕೆಟ್ಟ ಸ್ಥಿತಿಯನ್ನು ಎದುರಿಸುತ್ತಿದೆ. 2014ರ ವಿಧಾನಸಭೆ ಚುನಾವಣೆಯಲ್ಲಿ 22 ಮತ್ತು 2019ರ ಚುನಾವಣೆಯಲ್ಲಿ 19 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿತ್ತು. ಆದರೆ, ಇತರ ಕೆಲವು ರಾಜ್ಯಗಳ ರೀತಿಯಲ್ಲಿಯೇ ಇಲ್ಲಿಯೂ ಗೆದ್ದ ಶಾಸಕರನ್ನು ಉಳಿಸಿಕೊಳ್ಳಲು ಕಾಂಗ್ರೆಸ್‌ಗೆ ಸಾಧ್ಯವಾಗಿಲ್ಲ. ಹಲವು ಶಾಸಕರು ಆಡಳಿತಾರೂಢ ಬಿಆರ್‌ಎಸ್‌ಗೆ ಪಕ್ಷಾಂತರ ಮಾಡಿದ್ದಾರೆ. ಈಗ ಕಾಂಗ್ರೆಸ್ ಶಾಸಕರ ಸಂಖ್ಯೆ ಐದು ಮಾತ್ರ. ಮುನುಗೋಡು ಕ್ಷೇತ್ರದ ಶಾಸಕರಾಗಿದ್ದ ಕೋಮಟಿರೆಡ್ಡಿ ರಾಜಗೋಪಾಲ ರೆಡ್ಡಿ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದಾರೆ. ಈಗ ಈ ಕ್ಷೇತ್ರದ ಉಪಚುನಾವಣೆಯಲ್ಲಿ ಅವರು ಬಿಜೆಪಿ ಅಭ್ಯರ್ಥಿ. ಅವರ ಅಣ್ಣ ಕೋಮಟಿರೆಡ್ಡಿ ವೆಂಕಟರೆಡ್ಡಿ ಕಾಂಗ್ರೆಸ್ ಸಂಸದ.

ಮುನುಗೋಡು ಕ್ಷೇತ್ರದ ಉಪಚುನಾವಣೆಯನ್ನು ಕಾಂಗ್ರೆಸ್ ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಕಿತ್ತು. ಹಾಗೆ ಆಗುತ್ತಿಲ್ಲ. ಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ ಶತಾಯ ಗತಾಯ ಪ್ರಯತ್ನಿಸುತ್ತಿದೆ. ಮುನುಗೋಡು ಉಪಚುನಾವಣೆಯ ಮೂಲಕ ಮತದಾರರ ನಾಡಿಮಿಡಿತ ಅರಿಯುವ ಯತ್ನವನ್ನು ಬಿಜೆಪಿ ಮಾಡುತ್ತಿದೆ. ಇಲ್ಲಿ ಗೆದ್ದರೆ, ದಕ್ಷಿಣ ಭಾರತದಲ್ಲಿ ಕರ್ನಾಟಕದ ನಂತರ ಬಿಜೆಪಿಯ ಮುಂದಿನ ತಾಣ ತೆಲಂಗಾಣ ಎಂಬುದು ಖಚಿತವಾಗಲಿದೆ.

ಬಿಜೆಪಿ ಅಭ್ಯರ್ಥಿಗೆ ಮತ ಕೊಡಿ ಎಂದು ವೆಂಕಟರೆಡ್ಡಿ ಅವರು ಮುಸ್ಲಿಂ ಸಮುದಾಯದ ಮತದಾರರ ಬಳಿ ಹೇಳಿದ್ದರ ವಿಡಿಯೊ ಬಹಿರಂಗವಾಗಿದೆ. ಕಾಂಗ್ರೆಸ್‌ನ ಹಲವು ಮುಖಂಡರು ಬಿಜೆಪಿ ಅಥವಾ ಬಿಆರ್‌ಎಸ್ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ರೇವಂತ ರೆಡ್ಡಿ ಅವರು ಇದನ್ನು ಪಕ್ಷದ ಕಾರ್ಯಕರ್ತರ ಬಳಿ ಹೇಳಿ ಕಣ್ಣೀರಿಟ್ಟಿದ್ದಾರೆ. ರೇವಂತ ರೆಡ್ಡಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದ್ದು ಕಾಂಗ್ರೆಸ್‌ನ ಹಲವು ಮುಖಂಡರಿಗೆ ಇಷ್ಟ ಇಲ್ಲ. ಈ ಸ್ಥಾನದ ಮೇಲೆ ಕಣ್ಣಿಟ್ಟಿರುವ ಹಲವರು ಈಗ ಪಕ್ಷದ ವಿರುದ್ಧ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್‌ನ ಗಟ್ಟಿ ನೆಲೆಯಾದ ಮುನುಗೋಡು ಕ್ಷೇತ್ರದಲ್ಲಿ ಪಕ್ಷವನ್ನು ಸೋಲಿಸುವ ಮೂಲಕ ರೇವಂತ ರೆಡ್ಡಿ ಅವರಿಗೆ ಯಾವುದೇ ಸಾಮರ್ಥ್ಯ ಇಲ್ಲ ಎಂದು ಸಾಬೀತುಪಡಿಸಲು ಕಾಂಗ್ರೆಸ್‌ನ ಹಲವರು ಯತ್ನಿಸುತ್ತಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿರುವುದರಿಂದ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿನ ಸಾಧ್ಯತೆಗಳು ಹೆಚ್ಚಾಗಲಿವೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 260

ವಿಶ್ವಕರ್ಮನ ಕೌಶಲ

ಮದುವೆ ದಿಬ್ಬಣ ಹಿಮವಂತನ ರಾಜಧಾನಿ ತಲುಪುವ ಮುನ್ನ ಹಿಮವಂತನಿಗೆ ವಿಷಯ ತಿಳಿಸುವಂತೆ ನಾರದನನ್ನು ಹರಿ ಕಳುಹಿಸಿದ. ನಾರದನು ವಿಶ್ವಕರ್ಮ ರಚಿಸಿದ ಅದ್ಭುತವಾದ ವಿವಾಹಮಂಟಪವನ್ನು ನೋಡಿ ಬೆಕ್ಕಸ ಬೆರಗಾದ.

ಮುತ್ತು–ರತ್ನಗಳಿಂದ ಕೆತ್ತಲ್ಪಟ್ಟಿದ್ದ ಮಂಟಪಕ್ಕೆ ಚಿನ್ನದ ಕಳಸಗಳನ್ನು ಹಾಕಿದ್ದರು. ಅದಕ್ಕೆ ಬಾಳೆಗಂಬ ಮೊದಲಾದ ಮಂಗಳವಸ್ತುಗಳಿಂದ ಅಲಂಕರಿಸಿದ್ದರು. ವಿವಾಹಮಂಟಪಕ್ಕೆ ಸಾವಿರ ಕಂಬಗಳಿದ್ದವು. ಅದರ ಹಸೆಜಗುಲಿಯಂತೂ ತುಂಬಾ ಅದ್ಭುತವಾಗಿತ್ತು. ಮಂಟಪವನ್ನು ನೋಡುತ್ತಾ ನಾರದನಿಗೆ ಆಯಾಸವಾಯಿತು. ಅಲ್ಲೇ ವಿಶ್ರಾಂತಿ ಪಡೆಯಲು ಕುಳಿತ. ಅವನಿಗೆ ಕುಳಿತಲ್ಲೆ ಮಂಪರು ಆವರಿಸಿ ನಿದ್ದೆ ಹೋದ.

ಸ್ವಲ್ಪ ಹೊತ್ತಿನ ನಂತರ ನಾರದನಿಗೆ ಎಚ್ಚರವಾಗಿ ಕಣ್ತೆರೆದಾಗ ಎದುರಲ್ಲಿ ಹಿಮವಂತ ನಿಂತಿದ್ದ. ಅಲ್ಲೇ ಸಜೀವರಾಗಿದ್ದಂತೆ ನಿರ್ಮಿಸಿದ್ದ ಹರಿಹರ ಮೊದಲಾದವರ ಮೂರ್ತಿಗಳನ್ನು ನೋಡಿ 'ಹಿಮವಂತನೆ, ಹರಿಮೊದಲಾದ ದೇವತೆಗಳು, ಮಹರ್ಷಿಗಳು ಇಲ್ಲಿಗೆ ಬಂದುಬಿಟ್ಟರೇನು?' ಎಂದು ಪ್ರಶ್ನಿಸಿದ. ನಾರದನ ಮಾತನ್ನು ಕೇಳಿ ಹಿಮವಂತ, 'ನಾರದ, ಶಿವನ ಮದುವೆ ದಿಬ್ಬಣ ಇನ್ನೂ ಇಲ್ಲಿಗೆ ಬಂದಿಲ್ಲ. ಇದೆಲ್ಲವೂ ವಿಶ್ವಕರ್ಮನ ಕೃತ್ರಿಮಶಿಲ್ಪಗಳು. ಇವುಗಳನ್ನು ನೋಡಿ ಭ್ರಮಿಸ ಬೇಡ. ನಿನ್ನ ಆಯಾಸ ಕಡಿಮೆಯಾಗಿಲ್ಲ. ಆದ್ದರಿಂದ ಭೋಜನವನ್ನು ಮಾಡಿ, ಸ್ವಲ್ಪ ವಿಶ್ರಾಂತಿ ಪಡೆದುಕೊ'ಎಂದ.

ಹಾಗೆಯೇ ಆಗಲಿ ಎಂದ ನಾರದ ಭೋಜನಮಾಡಿ, ಹಿಮವಂತನ ಮನೆಯಲ್ಲಿ ಕೆಲಕಾಲ ವಿಶ್ರಾಂತಿ ಪಡೆದುಕೊಂಡ. ನಂತರ, ಹಿಮವಂತನ ಮಗ ಮೈನಾಕ ತನ್ನ ಪರ್ವತಬಂಧುಗಳಾದ ಸಹ್ಯ, ಮೇರು, ಮತ್ತಿತರೊಡನೆ ಸಂತೋಷದಿಂದ ಶಿವನ ಬಳಿಗೆ ತೆರಳಿದ. ಬ್ರಹ್ಮ, ವಿಷ್ಣು ಮತ್ತಿತರ ದೇವತೆಗಳಿಂದ ಕೂಡಿದ್ದ ಮದುವೆಯ ದಿಬ್ಬಣದಲ್ಲಿ ಮಹದೇವನಿಗೆ ಮೈನಾಕ ಮತ್ತವನ ಪರ್ವತಬಂಧುಗಳು ಭಕ್ತಿಯಿಂದ ನಮಸ್ಕರಿಸಿದರು.

ಇತ್ತ ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವತೆಗಳೆಲ್ಲರೂ ನಾರದನ ಸಪ್ಪೆಯ ಮೋರೆಯನ್ನು ನೋಡಿ ಆತಂಕಿತರಾದರು. ಆಗ ಅವರೆಲ್ಲ 'ಎಲೈ ನಾರದ, ನೀನು ತುಂಬಾ ಸುಸ್ತಾದಂತೆ ತೋರುತ್ತಿದ್ದೀಯ. ಹಿಮವಂತ ನಿನ್ನನ್ನು ಸರಿಯಾಗಿ ಆದರಿಸಲಿಲ್ಲವೇ? ಮೈನಾಕ, ಸಹ್ಯ, ಮೇರು ಮೊದಲಾದ ಪರ್ವತೋತ್ತಮರು ಅಲಂಕೃತರಾಗಿ ಸಂಭ್ರಮದಿಂದ ಬಂದಿದ್ದಾರೆ? ನೀನು ಏಕೆ ಹೀಗಿದ್ದೀಯಾ? ಶಂಕರನಿಗೆ ಹಿಮವಂತ ತನ್ನ ಮಗಳನ್ನು ಕೊಡುವನೋ? ಇಲ್ಲವೋ? ಅಲ್ಲಿ ನಡೆದ ಸಮಾಚಾರವೇನು? ಎಲ್ಲವನ್ನು ವಿಶದವಾಗಿ ಹೇಳು' ಎಂದು ಒತ್ತಾಯಿಸಿದರು.

ಹರಿ, ಬ್ರಹ್ಮ ಮೊದಲಾದವರ ಮಾತನ್ನು ಕೇಳಿ, ವಿಶ್ವಕರ್ಮನ ಮಾಯೆಯಿಂದ ಭ್ರಮೆಯ ಮಂಪರಿನಲ್ಲಿದ್ದ ನಾರದ ಎಚ್ಚೆತ್ತು, 'ಓ ದೇವೋತ್ತಮರೇ, ನೀವು ಸಂಶಯಪಡುವಂಥದ್ದು ಏನೂ ಆಗಿಲ್ಲ. ವಿಶ್ವಕರ್ಮನು ದೇವತೆಗಳೆಲ್ಲರೂ ಮೋಹಗೊಳ್ಳುವಂತೆ ಅದ್ಭುತವಾದ ಶಿಲ್ಪವನ್ನು ರಚಿಸಿದ್ದಾನೆ. ಅದನ್ನು ನೋಡಿ ನನ್ನ ಮನಸ್ಸು ಮಾಯಾಸೆಳೆತದಲ್ಲಿ ಸಿಲುಕಿದೆ. ಹೀಗಾಗಿ ನನ್ನ ಮನಃಸ್ಥಿತಿ ನಿಮ್ಮನ್ನು ಸಂಶಯಪಡುವಂತೆ ಮಾಡಿದೆ' ಎಂದ. ನಂತರ ಇಂದ್ರನತ್ತ ತಿರುಗಿ, 'ಎಲೈ ದೇವೇಂದ್ರ, ಹಿಂದೆ ನೀನು ವಿಶ್ವಕರ್ಮನನ್ನು ಮೋಹಗೊಳಿಸಿದ್ದೆ. ಅವನೀಗ ಹಿಮವಂತನ ಮನೆಯಲ್ಲಿ ತನ್ನ ಶಿಲ್ಪಚಾತುರ್ಯದಿಂದ ನಿನ್ನನ್ನು ಮೋಹಗೊಳಿಸಿ ಸೇಡು ತೀರಿಸಿಕೊಳ್ಳುವುದು ನಿಶ್ಚಿತ' ಎಂದಾಗ, ಇಂದ್ರ ಭಯವಿಹ್ವಲನಾದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಟಿ.ವಿ.ಯಲ್ಲಿ ಕ್ರಿಕೆಟ್ ಪಂದ್ಯವೊಂದನ್ನು ವೀಕ್ಷಿಸುತ್ತಿರುವ ವ್ಯಕ್ತಿಯೊಬ್ಬರು, ಇದ್ದಕ್ಕಿದ್ದಂತೆ ಟಿ.ವಿ.ಯನ್ನು ಒಡೆದು ಹಾಕುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಈಚೆಗೆ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ಪಾಕಿಸ್ತಾನ ಸೋತಿದ್ದನ್ನು ಸಹಿಸಲಾಗದೆ, ಪಾಕಿಸ್ತಾನದ ಅಭಿಮಾನಿಯೊಬ್ಬರು ಟಿ.ವಿ.ಯನ್ನು ಒಡೆದು ಹಾಕಿದ್ದಾರೆ' ಎಂದು ವಿಡಿಯೊಗೆ ವಿವರಣೆ ನೀಡಲಾಗಿದೆ. ಇದೊಂದು ಪಂದ್ಯ, ಸೋಲು–ಗೆಲುವನ್ನು ಸ್ಪರ್ಧಾತ್ಮಕವಾಗಿ ತೆಗೆದುಕೊಳ್ಳಬೇಕು ಎಂದು ಹಲವರು ಪ್ರತಿಕ್ರಿಯೆ ನೀಡಿದ್ದಾರೆ. ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಆ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಆದರೆ ಇದು ಸುಳ್ಳು ಸುದ್ದಿ.

ಇದು ತಪ್ಪಾದ ಮಾಹಿತಿ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಈ ವಿಡಿಯೊ 2016ಕ್ಕೆ ಸಂಬಂಧಿಸಿದ್ದಾಗಿದೆ. 2016ರಲ್ಲಿ ನಡೆದಿದ್ದ ಯೂರೊ ಕಪ್ ಫುಟ್‌ಬಾಲ್ ಪಂದ್ಯಾವಳಿಯ ಪಂದ್ಯವೊಂದನ್ನು ವೀಕ್ಷಿಸುವ ವೇಳೆ, ಟರ್ಕಿಯ ಮನೆಯೊಂದರ ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದ್ದ ವಿಡಿಯೊ ಇದು. ಪಂದ್ಯ ವೀಕ್ಷಣೆ ಸಂಬಂಧ ದಂಪತಿಯ ಮಧ್ಯೆ ಜಗಳವಾಗುತ್ತದೆ. ಪತಿ ಪಂದ್ಯ ವೀಕ್ಷಿಸುವಾಗ ಪತ್ನಿಯು ಟಿ.ವಿ.ಯನ್ನು ಪದೇ ಪದೇ ಆಫ್/ಆನ್ ಮಾಡುತ್ತಾರೆ. ಇದರಿಂದ ಸಿಟ್ಟಿಗೆದ್ದ ಪತಿ ಟಿ.ವಿ.ಯನ್ನು ಒಡೆದುಹಾಕುತ್ತಾರೆ. ಮೂಲ ವಿಡಿಯೊ ಯುಟ್ಯೂಬ್‌ನಲ್ಲಿ (Turkish Fan Hidden Camera TV Prank (English Subtitles) EURO 2016) ಲಭ್ಯವಿದೆ. ಆದರೆ, ಮೂಲ ವಿಡಿಯೊದಲ್ಲಿ ಟಿ.ವಿ. ಪರದೆಯ ಮೇಲೆ ಫುಟ್‌ಬಾಲ್ ಪಂದ್ಯ ಪ್ರಸಾರವಾಗುತ್ತಿದೆ. ಫುಟ್‌ಬಾಲ್ ಪಂದ್ಯದ ಬದಲಿಗೆ ಕ್ರಿಕೆಟ್ ಪಂದ್ಯ ಪ್ರಸಾರವಾಗುತ್ತಿರುವಂತೆ ವಿಡಿಯೊವನ್ನು ತಿರುಚಲಾಗಿದೆ. ಆನಂತರ ತಪ್ಪು ಮಾಹಿತಿಯೊಂದಿಗೆ ಅದನ್ನು ಹಂಚಿಕೊಳ್ಳಲಾಗಿದೆ' ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಜೀವನೋತ್ಸಾಹಕ್ಕೆ ಮಾದರಿ

ಅಣಗಿದ್ದು ಬೇಸಗೆಯೊಳ್, ಎದ್ದು ಮಳೆಕರೆದಂದು
|ಗುಣಿಯೆನದೆ ತಿಟ್ಟೆನದೆ ಸಿಕ್ಕಿದೆಡೆ ಬೆಳೆದು ||
ಉಣಿಸನೀವನು ದನಕೆ, ತಣಿವನೀವನು ಜಗಕೆ |
ಗುಣಶಾಲಿ ತೃಣಸಾಧು – ಮಂಕುತಿಮ್ಮ || 744||

ಪದ-ಅರ್ಥ: ಅಣಗಿದ್ದು = ಅಡಗಿದ್ದು, ಮಳೆಕರೆದಂದು = ಮಳೆ + ಕರೆದ + ಅಂದು, ಗುಣಿ = ಹಳ್ಳ, ತಿಟ್ಟು = ಬೆಟ್ಟ, ಉಣಿಸನೀವನು = ಉಣಿಸನು(ಆಹಾರವನು) + ಈವನು(ನೀಡುತ್ತಾನೆ), ತಣಿವನೀವನು = ತಣಿವನು(ತಂಪನ್ನು) + ಈವನು,

ವಾಚ್ಯಾರ್ಥ: ಬೇಸಿಗೆಯಲ್ಲಿ ಒಣಗಿ ಅಡಗಿ, ಮಳೆ ಬಂದಾಗ ಮತ್ತೆದ್ದು, ಕಣಿವೆ, ಗುಡ್ಡವೆನ್ನದೆ ಎಲ್ಲೆಡೆಯಲ್ಲೂ ಬೆಳೆದು, ದನಕ್ಕೆ ಆಹಾರವನ್ನು, ಜಗತ್ತಿಗೆ ತಂಪನ್ನು ನೀಡುವ ಗುಣಶಾಲಿ ಹುಲ್ಲು ಸಾಧುವಾದದ್ದು.

ವಿವರಣೆ: ಹುಲ್ಲುಕಡ್ಡಿ ಜೀವನೋತ್ಸಾಹಕ್ಕೆ ಒಂದು ಸುಂದರ ಮಾದರಿ. ತಾವೆಲ್ಲ ಕಂಡಿದ್ದೀರಿ, ಹಳೆಯ ಕಟ್ಟಡಗಳ ಗೋಡೆಯ ಕೊರಕಲಿನಲ್ಲಿ ಒಂದು ಪುಟ್ಟ ಬಳ್ಳಿ ಎದ್ದು ನಿಂತಿದೆ, ಮಳೆಗಾಲದಲ್ಲಿ ಮನೆಯ ಮಾಳಿಗೆಯ ಮೇಲೆ ಹಸಿರು ಹುಲ್ಲು ಮೊಳೆತಿದೆ. ಇದು ಆಶ್ಚರ್ಯವಲ್ಲವೆ? ಗೋಡೆಯ ಕೊರಕಲಿನಲ್ಲಿ ಬೀಜ ಹಾಕಿದವರಾರು, ಗೊಬ್ಬರ ನೀಡಿ, ನೀರು ಹನಿಸಿದವರಾರು? ಸಿಮೆಂಟ್ ಗೋಡೆಯ ಬಿರುಕಿನಲ್ಲಿ ಅದು ಹೇಗೋ ಎಲ್ಲಿಂದಲೋ ಹಾರಿ ಬಂದ ಹುಲ್ಲಿನ ಬೀಜ, ಅವಕಾಶಕ್ಕೆ ಕಾಯುತ್ತಿತ್ತು. ಅದಕ್ಕೆ ಗೊಬ್ಬರವೆಲ್ಲಿ, ನೀರೆಲ್ಲಿ? ಹಾರಿಬಂದ ಧೂಳೇ ಅದಕ್ಕೆ ಮಣ್ಣು, ಮಳೆನೀರಿನ ಸಿಂಚನವೇ ಸಾಕು ಅದಕ್ಕೆ. ಮನೆಯ ಮಾಳಿಗೆಯ ಮೇಲೆ ಬೇಸಿಗೆಯಲ್ಲಿ ಹಾರಿಬಿದ್ದ ಧೂಳೇ ಹುಲ್ಲಿನ ಬೀಜಕ್ಕೆ ಸಮೃದ್ಧ ಭೂಮಿ. ಆದರೆ ಇಲ್ಲಿ ಮುಖ್ಯವಾದದ್ದೆಂದರೆ ಅಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಬೀಜ ತನ್ನನ್ನು ಅಂಕುರಿಸಿಕೊಳ್ಳುವ ಶಕ್ತಿಯನ್ನು ಮರೆತಿರಲಿಲ್ಲ, ಅವಕಾಶ ಸಿಕ್ಕಾಗ ತನ್ನನ್ನು ಅರಳಿಸಿಕೊಳ್ಳುವ ಆಶಾವಾದವನ್ನು ತೊರೆದಿರಲಿಲ್ಲ. ಅದಕ್ಕೆ ತನ್ನ ಆಯುಸ್ಸು ತುಂಬ ಚಿಕ್ಕದೆಂಬ ಅರಿವಿದೆ. ದೊರೆತ ಚಿಕ್ಕ ಆಯುಸ್ಸನ್ನು ಸಂಭ್ರಮದಿಂದ ಎದುರುಗೊಳ್ಳುವ ಉಮೇದು ಇದೆ.

ಬೆಟ್ಟಗುಡ್ಡಗಳ ಪ್ರದೇಶದಲ್ಲಂತೂ ಬೇಸಿಗೆಯಲ್ಲಿ ನೆಲವೆಲ್ಲ ಒಣಒಣ. ಬರೀ ಧೂಳು. ನೆಲ ಸೂರ್ಯನ ಕಾವಿಗೆ ಸುಟ್ಟು ಕರಕಲಾಗಿದೆ. ಕಣ್ಣಿಗೆ ಒಣಭೂಮಿ ರಾಚುತ್ತದೆ. ಆದರೆ ಒಂದೆರಡು ಮಳೆಯಾದ ಮೇಲೆ ದೃಶ್ಯವೇ ಬದಲಾಗುತ್ತದೆ. ಹುಲ್ಲು ಇದುವರೆಗೂ ಎಲ್ಲಿ ಅಡಗಿ ಕುಳಿತಿತ್ತೋ? ನೆಲದಿಂದ ಕಿತ್ತುಕೊಂಡು ಎದ್ದು ಬರುತ್ತದೆ. ಮೊದಲು ಭೂಮಿಯ ಪುಟ್ಟ ನೆಲದಲ್ಲಿ ಹುಲ್ಲಿನ ಬೀಜವಿತ್ತು ಎಂಬ ಕಲ್ಪನೆಯೂ ಇರಲಿಲ್ಲ. ಈಗ ಕಣಿವೆಯಲ್ಲಿ, ಬೆಟ್ಟದ ತಲೆಯ ಮೇಲೆ, ಎಲ್ಲೆಲ್ಲಿ ಒಂದಿಷ್ಟು ಮಣ್ಣಿನಂಶವಿದೆಯೋ ಅಲ್ಲೆಲ್ಲ ಚಿಗುರಿ ನೆಲವನ್ನು ಸಸ್ಯಶಾಮಲೆಯನ್ನಾಗಿ ಮಾಡುತ್ತದೆ. ದನಕರುಗಳ ಹೊಟ್ಟೆಗೆ ಆಹಾರವಾಗಿ ತೃಪ್ತಿನೀಡುತ್ತದೆ. ನೀರನ್ನು ಹಿಡಿದಿಟ್ಟು ಭೂಮಿಯ ಕುದಿಯನ್ನು ಕಡಿಮೆ ಮಾಡುತ್ತದೆ. ಕಣ್ಣಿಗೆ ತಂಪನ್ನುಂಟುಮಾಡುತ್ತದೆ. ಕಗ್ಗದ ಉದ್ದೇಶ, ಹುಲ್ಲಿನ ಗುಣವನ್ನು ಹೊಗಳುವುದು ಮಾತ್ರವಲ್ಲ. ಒಂದು ಸಣ್ಣ ಹುಲ್ಲುಕಡ್ಡಿ ವಿಪರೀತ ಪರಿಸ್ಥಿತಿಯನ್ನು ತಾಳ್ಮೆಯಿಂದ, ಆಶಾವಾದದಿಂದ ಎದುರಿಸಿ, ಅನುಕೂಲ ಪರಿಸ್ಥಿತಿ ಬಂದಾಗ,ತನ್ನಲ್ಲಿಯ ಶಕ್ತಿಯನ್ನು ಮರೆಯದೆ ಬಳಸಿ, ಜೀವನೋತ್ಸಾಹದಿಂದ ತಲೆ ಎತ್ತಿ ನಿಂತು ಪ್ರಯೋಜನಕಾರಿಯಾಗಬಹುದಾದರೆ, ಭಗವಂತನ ಸೃಷ್ಟಿಯಕಿರೀಟವೆನ್ನಿಸಿಕೊಂಡ ಮನುಷ್ಯ ಕೊರಗುವುದೇಕೆ? ಜೀವನದಲ್ಲಿನಿರುತ್ಸಾಹವೇಕೆ? ಹುಲ್ಲುಕಡ್ಡಿಗಿರುವ ಆತ್ಮವಿಶ್ವಾಸವೂನಮಗಿಲ್ಲವೆ? ಅದಕ್ಕೇ ಹುಲ್ಲು ನಮಗೊಂದು ಶ್ರೇಷ್ಠಮಾದರಿ – ಆತ್ಮವಿಶ್ವಾಸಕ್ಕೆ, ಜೀವನೋತ್ಸಾಹಕ್ಕೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಅಕ್ಟೋಬರ್ 28, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ತೃತೀಯ ಗಂ. 10-34 ನಕ್ಷತ್ರ: ಅನುರಾಧ ಗಂ. 10-43 ಯೋಗ: ಶೋಭನ ಗಂ. 25-29, ಕರಣ: ಗರಜೆ ಗಂ. 10-34, ತುಲಾ ಮಾಸದ 10 ನೇ ದಿನ.

ರಾಹುಕಾಲ : ಬೆಳಿಗ್ಗೆ 10-30 – 12:00

ಸೂರ್ಯೋದಯ : 06-27 ಸೂರ್ಯಾಸ್ತ : 06-02 ಮುಸ್ಲಿಂ ದಿನಾಂಕ : 01 ರಬಿಯುಸ್ಸಾನಿ

ಅದೃಷ್ಟ ಸಂಖ್ಯೆ : 9, 11

ಮೇಷ: ಮೆಕ್ಯಾನಿಕಲ್ ಎಂಜಿನಿಯರ್‌ಗಳಿಗೆ ಉದ್ಯೋಗದಲ್ಲಿ ಉತ್ತಮ ಬದಲಾವಣೆಯ ಸಾಧ್ಯತೆ ಕಂಡುಬರಲಿದೆ. ಮಗಳ ವಿದ್ಯಾಭ್ಯಾಸದಲ್ಲಿನ ಪ್ರಗತಿಯಿಂದ ಆನಂದ ಉಂಟಾಗುತ್ತದೆ. ಸಿನಿಮಾ ರಂಗದವರಿಗೆ ಅವಕಾಶ ಲಭಿಸುವುದು.

ವೃಷಭ: ರೈತರಿಗೆ ಹೆಚ್ಚಿನ ಬೆಳೆ ಕಣ್ಣಿಗೆ ಕಂಡರೂ, ರೋಗ ಬಾಧೆಯಿಂದ ನಿರಾಸೆ ಉಂಟಾಗಬಹುದು. ಅನಾರೋಗ್ಯದಿಂದ ಹೊರಬರಲು ಚಿಕಿತ್ಸೆಯ ಜೊತೆ ನವ ಗ್ರಹ ಶಾಂತಿಯಂತಹ ಧಾರ್ಮಿಕ ಮಾರ್ಗ ಆಚರಿಸುವುದು ಶುಭಫಲಕ್ಕೆ ದಾರಿ.

ಮಿಥುನ: ಅನಿವಾರ್ಯದ ಕಾರಣಗಳಿಂದ ನಿಮ್ಮ ದಿನನಿತ್ಯದ ಆಚರಣೆಯಲ್ಲಿ ಕೆಲವು ಬದಲಾವಣೆ ಅನುಭವಿಸುವಿರಿ. ಈಶ್ವರನ ಸೇವೆ ಮಾಡುವುದರಿಂದ ಹೆಚ್ಚಿನ ಕಾರ್ಯ ಸಾಧನೆಗೆ ಸಹಾಯವಾಗುವುದು.

ಕರ್ಕಾಟಕ: ಮಾರಾಟಗಾರರಿಗೆ ಉತ್ತಮ ವ್ಯಾಪಾರವಿದ್ದುಲಾಭವಿರುವುದು. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳ ಜತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಚೈತನ್ಯವು ಮತ್ತು ಯೋಚನೆಗಳು ಮೂಡಿ ಬರಲಿದೆ.

ಸಿಂಹ: ಆಫೀಸಿನಲ್ಲಿ ಸ್ವಪ್ರಯತ್ನದ ಜೊತೆಯಲ್ಲಿ ಅಧಿಕಾರಿಗಳ ಬೆಂಬಲದಿಂದ ಬಡ್ತಿಹೊಂದುವ ಸಂಭವಿದೆ. ರಾಜಕೀಯ ವ್ಯಕ್ತಿಗಳಿಗೆ ತಮ್ಮ ಚಟುವಟಿಕೆಗಳಿಗಾಗಿ ಬಿರುಸಿನ ಓಡಾಟ ಅನಿವಾರ್ಯ.

ಕನ್ಯಾ: ಆಸ್ತಿಗಾಗಿ ನಿವೇಶನಗಳ ಖರೀದಿಯ ಕೆಲಸ ಆರಂಭಿಸಲು ಇದು ಒಳ್ಳೆಯ ಕಾಲವಾಗಿದೆ. ತೆಂಗು ಬೆಳೆಗಾರರಿಗೆ ಉತ್ತಮ ಬೆಳೆಯ ಜೊತೆಗೆ ಹೆಚ್ಚಿನ ಲಾಭವೂ ಇರುವುದು. ಲಕ್ಷ್ಮಿ ಅಷ್ಟೋತ್ತರ ಪಠನೆಯಿಂದ ಶುಭವಾಗುವುದು.

ತುಲಾ: ಕಮಿಷನ್ ವ್ಯಾಪಾರ ವ್ಯವಹಾರ ನಡೆಸುವವರಿಗೆ ಈ ದಿನ ಲಾಭಾಂಶ ವೃದ್ಧಿಯಾಗುವುದು. ನಿಮ್ಮ ಮಾತುಗಳಲ್ಲಿ ಸತ್ಯವಿರಲಿ. ನಿಮ್ಮ ಜವಾಬ್ದಾರಿಯಿಂದ ನಡೆಯುತ್ತಿರುವ ಸಂಘಸಂಸ್ಥೆಯಲ್ಲಿ ಭಿನ್ನಾಭಿಪ್ರಾಯ ಬರಬಹುದು,

ವೃಶ್ಚಿಕ: ಲೆಕ್ಕ ಪತ್ರಗಳ ವ್ಯವಹಾರ ನೋಡುವವರಿಗೆ ಸಂದಿಗ್ಧ ಪರಿಸ್ಥಿತಿಗಳು ಎದುರಾಗಬಹುದು. ಇಂದು ಕೇವಲ ವೃತ್ತಿಯಲ್ಲಿ ಅಲ್ಲದೆ, ಪ್ರವೃತ್ತಿಯಿಂದಲೂ ಹೆಸರನ್ನು ಸಂಪಾದನೆ ಮಾಡುವಂತಾಗಲಿದೆ.

ಧನು: ಒಂದೆಡೆ ಹಣದ ಉಳಿತಾಯಕ್ಕೆ ಯತ್ನಿಸಿದರೆ, ಮತ್ತೊಂದೆಡೆ ಖರ್ಚು ಹೆಚ್ಚಲಿದೆ. ನಿರಪರಾಧಿಯಾದರೂ ಶಿಕ್ಷೆಗೆ ಒಳಗಾಗುವ ಲಕ್ಷಣಗಳಿರುವುದರಿಂದ ಜಾಗ್ರತರಾಗಿರಿ

ಮಕರ: ಮನೆಯಲ್ಲಿ ಮಂಗಳ ಕಾರ್ಯವನ್ನು ನಡೆಸಲು ತೀರ್ಮಾನಿಸಿ, ಅದಕ್ಕೆ ಬೇಕಾದ ಜನಬಲ ಮತ್ತು ಆರ್ಥಿಕ ಬೆಂಬಲವು ಬಂಧುಗಳಿಂದ ತಾನಾಗಿಯೇ ಒದಗಿಬರಲಿದೆ. ಇಂದು ವೃತ್ತಿರಂಗದಲ್ಲಿ ಅದೃಷ್ಟದ ಬಾಗಿಲು ತೆರೆಯುವುದು.

ಕುಂಭ: ಯೋಗಾಭ್ಯಾಸದಿಂದ ಆರೋಗ್ಯ ವೃದ್ಧಿಯಾಗುವುದು. ವ್ಯಾಪಾರ ವ್ಯವಹಾರಗಳಲ್ಲಿ ಆರೋಗ್ಯಕರ ಪೈಪೋಟಿಯನ್ನು ನಡೆಸುವ ಬಗ್ಗೆ ತೀರ್ಮಾನಿಸಿ. ಗೆಲುವನ್ನಾಗಲೀ ಸೋಲನ್ನಾಗಲಿ ಒಪ್ಪಿಕೊಳ್ಳಲು ತೀರ್ಮಾನಿಸಿ.

ಮೀನ: ಮಗನ ಮದುವೆಯ ವಿಷಯಗಳು ಪ್ರಸ್ತಾಪಕ್ಕೆ ಬಂದು ಉತ್ತಮ ಕಡೆ ಸಂಬಂಧ ಕೂಡಿ ಬರಲಿದೆ. ರಾಜಕೀಯ ವ್ಯಕ್ತಿಗಳಿಗೆ ನಿಕಟವರ್ತಿಗಳ ಪ್ರೋತ್ಸಾಹದಿಂದ ಸಾಮಾಜಿಕ ಬದುಕು ಸುಗಮವಾಗಲಿದೆ.

ಪದಬಂಧ 5121

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಗಾವಿಲ ನಡೆದಿದ್ದು ಎರಡು ಹರಿದಾರಿ (3)
4.ದಡಿ ಹಿಡಿದಿರುವ ಟೊಣಪ (3)
5.ವೀರರ ಶೌರ್ಯಸಾಹಸಗಳನ್ನು ಕುರಿತ ಹಾಡು (4)
6.ಕಂಡವರ ಮನೆಯಲ್ಲಿಹುದೇ ಚಿನ್ನ? (4)
7.ಕರೆಯೋಲೆಯಲ್ಲಿರುವ ಕರೆ! (2)
10.ಪ್ರತಿ ತೋರಿಸುವಾಗ ಅಡ್ಡಿ ಮಾಡುವುದು ಕಾಣುತ್ತಿದೆಯಲ್ಲಾ? (5)
12.ಅಕ್ಷಯ ಸಂವತ್ಸರದಲ್ಲಿ ಅಡರಿದ ರೋಗ! (2)
14.ಬೋಗುಣಿ ಹಿಡಿದು ನಗದಾಗಿ ಮೊದಲು ವ್ಯಾಪಾರ ಮಾಡು (4)
17.ನಡುವೆ ಮಾಯವಿದ್ದಾಗ ಕಪಟವರಿಯದವಳು ಕಂಡಾಳು! (4)
18.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
19.ಆರಂಭವಾಗಿರುವ ಬೇಸಾಯ! (3)

ಮೇಲಿಂದ ಕೆಳಕ್ಕೆ

1.ಅಂದವಾಗಿ ಕಾಣುತ್ತಿರುವ ಪಲ್ಲಕ್ಕಿ (3)
2.ಗಾಡಿಯ ಕಡೆ ನಡೆಯುತ್ತಿರುವ ಹಾಡುಗಾರ (3)
3.ಅಂಗಳದಿಂದ ಕಾಣುತ್ತಿರುವ ಮಂಗಳಗ್ರಹ (4)
5.ಈತ ಪರಾಕ್ರಮಿ ಸೈನಿಕ (4)
8.ತಪ್ಪಲೆಯ ಹತ್ತಿರ ಬಳಿಯುವ ವಸ್ತುವಿದೆ (2)
9.ಅಕ್ಷರಜ್ಞ ಹಿಡಿದಿರುವ ಪಗಡೆಕಾಯಿ (2)
11.ತಿರುಕಿ ಹಿಡಿದಿರುವ ಭಿಕ್ಷಾಪಾತ್ರೆ (4)
13.ಜಮಖಾನದ ಮೇಲೆ ಕುಳಿತಿರುವ ಒಡತಿ (4)
15.ನಿಸ್ಸಾರವಾದುದು ಉಲ್ಟಾ ಆಗಿಬಿಟ್ಟಿದೆ (3)
16.ಇದು ಹಿಂದಿಯವನ ಆಡು (3)

5120ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮತ್ತು 3.ಜ್ಞಾನಿ
5.ಹಣೆಬರಹ 6.ಗಡವ
7.ಜಳಕ 8.ದಳ್ಳಾಳಿತನ
9.ವಿಧಾನ 10.ನಾಸ್ತಿಕ
13.ಪಾರಿತೋಷಕ
14.ನೆಪ 15.ಮಚ್ಚು

ಮೇಲಿಂದ ಕೆಳಕ್ಕೆ:
1.ಮಲರೋಗ 2.ಸಿಂಬಳ
4.ನಿರರ್ಥಕ 5.ಹಯವದನ
7.ಜನನಾಯಕ 9.ವಿಜ್ಞಾಪನೆ
11.ಕಲಗಚ್ಚು 12.ಸಂತೋಷ

ಸುಡೊಕು 5507

4		6			8	5		1
	5		2	1			7	
1		2			5	3		8
6		9				8		
			5	4	6			
3		5				2		7
		4				1		2
			1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು,

5506ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಮುಂಬೈ ಧಾರಣೆ

ಶೇಂಗಾ

27–10–2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10250-10350
ದಪ್ಪ ಗುಜರಾತ್(ಹೊಸ)	10750-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1610)
ಒಂದು ವಾರದ ಡೆಲಿವರಿ	1615 (1605)
ಸೋಯಾ ಕಚ್ಚಾ	1300 (1265)
ಪಾಮ್ ವಾರದ ಡೆಲಿವರಿ	998 (998)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1470)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,500 (50,350)
ಬೆಳ್ಳಿ ಕೆ.ಜಿ 57,600 (56,700)

ಆವರಣದಲ್ಲಿ ಮಂಗಳವಾರದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,656
ಇಂದಿನ ಅಂತ್ಯ	17,737
▲	81
ದಿನದ ಗರಿಷ್ಠ	17,783

ವಿನಿಮಯ ದರ

$ ಡಾಲರ್	82.33
£ ಪೌಂಡ್	95.38
€ ಯುರೊ	82.79
¥ ಯೆನ್ (100ಕ್ಕೆ)	56

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹205-615
ದ್ವಿತಳಿ (ಬಿ.ವಿ) ₹336-822

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610
ಸೋಯಾ (ರಿಫೈನ್ಡ್)	₹1355
ಸೂರ್ಯಕಾಂತಿ (ರಿಫೈನ್ಡ್)	₹1570
ಪಾಮೋಲಿನ್	₹1000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹135

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಚಾಲಿ	36999-39099	**ಯಲ್ಲಾಪುರ**	
ಬಂಟ್ವಾಳ		ಕೋಕ	33499-33499	ಬಿಳಿಗೋಟು	28012-34299
ಕೋಕ	12500-25000	ಕೆಂಪುಗೋಟು	31610-32680	ಚಾಲಿ	37299-42060
ಹೊಸತು	27500-38000	ರಾಶಿ	34989-48589	ಕೋಕ	18899-31169
ಹಳತು	48000-56000	ಸಿಪ್ಪೆಗೋಟು	6280-17697	ಕೆಂಪುಗೋಟು	30619-35899
ಕುಮಟ		**ಕುಂದಾಪುರ**			
ಚಿಪ್ಪು	25000-33399	ಹಳೆಚಾಲಿ	50000-56000	ರಾಶಿ	48742-54999
ಕೋಕ	16699-32699	ಹೊಸಚಾಲಿ	40000-47500	ತಟ್ಟಿಬೆಟ್ಟೆ	40069-47862
ಹೊಸಚಾಲಿ	37707-41019	**ಶಿರಸಿ**		**ಕಾಫಿ ಧಾರಣೆ**	
ಪುತ್ತೂರು		ಬೆಟ್ಟೆ	42323-44099	ಎಪಿ	15250
ಕೋಕ	11000-26000	ಬಿಳಿಗೋಟು	32899-36499	ಎಸಿ	8960
ಹೊಸತು	32000-38000	ಚಾಲಿ	39308-42251	ಆರ್‌ಪಿ	9500
ಸಾಗರ		ಕೆಂಪುಗೋಟು	14199-33121	ಆರ್‌ಸಿ	4700
ಬಿಳಿಗೋಟು	28011-31429	ರಾಶಿ	46999-47669		

ಡಾಲರ್ ಎದುರು ರೂಪಾಯಿ ಮೌಲ್ಯ 48 ಪೈಸೆ ಏರಿಕೆ

ಲೋಹ, ರಿಯಾಲ್ಟಿ ಗಳಿಕೆ

ಮುಂಬೈ (ಪಿಟಿಐ): ಲೋಹ, ರಿಯಾಲ್ಟಿ ಮತ್ತು ಇಂಧನ ವಲಯದ ಷೇರುಗಳ ಗಳಿಕೆಯಿಂದಾಗಿ ಷೇರುಪೇಟೆಗಳಲ್ಲಿ ಗುರುವಾರ ಸಕಾರಾತ್ಮಕ ವಹಿವಾಟು ನಡೆಯಿತು.

ವಿದೇಶಿ ಬಂಡವಾಳದ ಹೊರ ಹರಿವು ಸೂಚ್ಯಂಕದ ಏರಿಕೆಯನ್ನು ಮಿತಿಗೊಳಿಸಿದರೂ ರೂಪಾಯಿ ಮೌಲ್ಯ ಹೆಚ್ಚಳವು ವಹಿವಾಟಿನ ಏರಿಕೆಗೆ ನೆರವಾಯಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 213 ಅಂಶ ಏರಿಕೆ ಕಂಡು 69,757 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 81 ಅಂಶ ಹೆಚ್ಚಾಗಿ 17,737 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಸರ್ಕಾರಿ ಬಾಂಡ್‌ಗಳ ಅಕ್ಟೋಬರ್ ತಿಂಗಳ ವಾಯಿದಾ ವಹಿವಾಟು

ಗುರುವಾರ ಮುಕ್ತಾಯ ಆಗುವುದರಿಂದ ಷೇರುಪೇಟೆಯಲ್ಲಿ ಹೆಚ್ಚಿನ ಏರಿಳಿತ ಕಂಡುಬಂದಿತು. ಆದರೆ, ಲೋಹ, ರಿಯಲ್ ಎಸ್ಟೇಟ್ ಹಾಗೂ ತೈಲ ಮತ್ತು ಅನಿಲ ಷೇರುಗಳ ಮೌಲ್ಯ ಹೆಚ್ಚಳವು ಸೂಚ್ಯಂಕಗಳ ಏರುಮುಖ ಚಲನೆಗೆ ನೆರವಾದವು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿ ಸಂಶೋಧನಾ ವಿಭಾಗದ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಭಾರತದ ಆರ್ಥಿಕ ಬೆಳವಣಿಗೆ ಬಗ್ಗೆ ಹೂಡಿಕೆದಾರರು ಸಕಾರಾತ್ಮಕ ಭಾವನೆ ಹೊಂದಿದ್ದಾರೆ. ಹೀಗಾಗಿ ಹಲವು ಬಾಹ್ಯ ಅಡೆತಡೆಗಳ ಹೊರತಾಗಿಯೂ ಷೇರುಪೇಟೆ ವಹಿವಾಟು ಗರಿಷ್ಠ ಮಟ್ಟದಲ್ಲಿದೆ ಎಂದೂ ಅವರು ತಿಳಿಸಿದ್ದಾರೆ.

ಆರ್ಥಿಕತೆ ಮಂದಗತಿಗೆ ತಿರುಗುತ್ತಿರುವ ಕಾರಣ, ಪ್ರಮುಖ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಿಸುವ ವೇಗಕ್ಕೆ ಕಡಿವಾಣ ಹಾಕುವ ಆಲೋಚನೆ ನಡೆಸುತ್ತಿವೆ ಎನ್ನುವ ವದಂತಿಯಿಂದಾಗಿ ಏಷ್ಯಾದ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ವಿಭಾಗದ ಮುಖ್ಯಸ್ಥ ದೀಪಕ್ ಜಸನಿ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.13ರಷ್ಟು ಏರಿಕೆ ಕಂಡು ಒಂದು ಬ್ಯಾರಲ್‌ಗೆ 95.79 ಡಾಲರ್‌ಗೆ ತಲುಪಿತು.

ಎಂಪಿಸಿ ಸಭೆ

ಮುಂಬೈ (ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಮಿತಿಯಲ್ಲಿಇರಿಸಲುಸತತಮೂರುತ್ರೈಮಾಸಿಕಗಳಲ್ಲಿ ಆಗದಿದ್ದುದು ಏಕೆ ಎಂಬ ವರದಿ ಸಿದ್ಧಪಡಿಸಲು ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ನವೆಂಬರ್ 3ರಂದು ವಿಶೇಷ ಸಭೆ ನಡೆಸಲಿದೆ.

ವರದಿಯನ್ನು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದ ಎಂಪಿಸಿ ಸಿದ್ಧಪಡಿಸಲಿದೆ.

ಮುತ್ತೂಟ್: ಪ್ರಚಾರ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನದ ಮೇಲೆ ಸಾಲ ನೀಡುವ ಮುತ್ತೂಟ್ ಫೈನಾನ್ಸ್, ಹೊಸ ಪ್ರಚಾರ ಅಭಿಯಾನ ಆರಂಭಿಸಿದೆ. ಇದರ ಭಾಗವಾಗಿ ಹೊಸ 'ಗೋಲ್ಡ್‌ಮ್ಯಾನ್' ಯೋಜನೆ ಪ್ರದರ್ಶಿಸಲಿದೆ.

'ವಿವಿಧ ಉಪಯೋಗಗಳಿಗಾಗಿ ನಿಮ್ಮ ಚಿನ್ನ ಬಳಸಿ (ಪುಟ್ ಯುವರ್ ಗೋಲ್ಡ್ ಟು ವರ್ಕ್)' ಎಂಬ ಸಂದೇಶವನ್ನು ಪ್ರಚಾರ ಆಂದೋಲನದ ಮೂಲಕ ನೀಡಲಾಗುತ್ತದೆ. ಮನೆಯಲ್ಲಿ ಇರುವ ಚಿನ್ನವನ್ನು ಹೇಗೆ ವಿವಿಧ ಉಪಯೋಗಗಳಿಗೆ ಬಳಸಬಹುದು ಮತ್ತು ಎಲ್ಲ ಕಾಲದಲ್ಲಿಯೂ ಚಿನ್ನದ ಸಾಲ ಸಕಾಲಿಕ ಎನ್ನುವುದನ್ನು ಜನರಿಗೆ ತಿಳಿಸುವುದು ಇದರ ಉದ್ದೇಶ.

ಈ ಅಭಿಯಾನವನ್ನು 'ಮೈತ್ರಿ ಅಡ್ವರ್ಟೈಸಿಂಗ್ ವರ್ಕ್ಸ್' ಜಾಹೀರಾತು ಸಂಸ್ಥೆಯು ರೂಪಿಸಿದೆ. ಹಾಸ್ಯ ನಟರಾದ ಜಾನಿ ಆಂಟೊನಿ, ಬ್ರಹ್ಮಾನಂದ, ಸಾಧು ಕೋಕಿಲ ಮತ್ತು ರೆಡಿನ್ ಕಿಂಗ್‌ಸ್ಲೇ ಅವರು ಕ್ರಮವಾಗಿ ಮಲಯಾಳ, ತೆಲುಗು, ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಅಭಿನಯಿಸಿದ್ದಾರೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಸುದ್ದಿ 2 ನಿಮಿಷ

ಸಕಾರಾತ್ಮಕ ಮಟ್ಟದಲ್ಲೇ ಸಾಗಲಿದೆ ರಿಯಲ್ ಎಸ್ಟೇಟ್: ವರದಿ

ನವದೆಹಲಿ (ಪಿಟಿಐ): ರಿಯಲ್ ಎಸ್ಟೇಟ್ ವಲಯದ ಮುಂದಿನ ಆರು ತಿಂಗಳ ಬೆಳವಣಿಗೆಯು ಸಕಾರಾತ್ಮಕ ಮಟ್ಟದಲ್ಲಿಯೇ ಇರಲಿದೆ ಎಂದು ಹೂಡಿಕೆದಾರರು, ನಿರ್ಮಾಣಗಾರರು ಮತ್ತು ಹಣಕಾಸು ಸಂಸ್ಥೆಗಳು ಆಶಾವಾದ ವ್ಯಕ್ತಪಡಿಸಿವೆ ಎಂದು ವರದಿಯೊಂದು ಹೇಳಿದೆ.

ಅಡಮಾನ ಸಾಲದ ಬಡ್ಡಿದರ ಹೆಚ್ಚಾಗುತ್ತಿರುವುದು ಮತ್ತು ಆರ್ಥಿಕ ಹಿಂಜರಿತದ ಆತಂಕವು ಉದ್ಯಮದ ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯನ್ನೂ ವರದಿಗಳು ಹೇಳಿವೆ.

ನೈಟ್ ಫ್ರ್ಯಾಂಕ್ ಮತ್ತು ನರೆಡ್ಕೊ ಸಂಸ್ಥೆಗಳು ಜೊತೆಗೂಡಿ 2023ರ ಜುಲೈ–ಸೆಪ್ಟೆಂಬರ್ ಅವಧಿಯ 'ರಿಯಲ್ ಎಸ್ಟೇಟ್ ಸೆಂಟಿಮೆಂಟ್ ಇಂಡೆಕ್ಸ್' ವರದಿಯನ್ನು ಗುರುವಾರ ಬಿಡುಗಡೆ ಮಾಡಿವೆ. 2022ರ ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ಸೂಚ್ಯಂಕವು ಸಕಾರಾತ್ಮಕ ಮಟ್ಟದಲ್ಲಿಯೇ (61) ಇದೆ. ಆದರೆ, ಏಪ್ರಿಲ್–ಜೂನ್‌ಗೆ (62) ಹೋಲಿಸಿದರೆ ಅಲ್ಪ ಇಳಿಕೆ ಕಂಡಿದೆ ಎಂದು ಹೇಳಿದೆ.

ಜೋಸ್ ಆಲುಕ್ಕಾಸ್‌ನಲ್ಲಿ ತಿಂಗಳ ಅಂತ್ಯದವರೆಗೆ ಕೊಡುಗೆಗಳು

ಬೆಂಗಳೂರು: ಚಿನ್ನಾಭರಣಗಳ ಮಾರಾಟ ಕಂಪನಿ 'ಜೋಸ್ ಆಲುಕ್ಕಾಸ್'ನ 58ನೇ ವಾರ್ಷಿಕೋತ್ಸವ ಆಚರಣೆ ಅಕ್ಟೋಬರ್ 31ರಂದು ಮುಗಿಯಲಿದೆ. ಕಂಪನಿಯು ತನ್ನ 58ನೆಯ ವರ್ಷಾಚರಣೆ ಭಾಗವಾಗಿ ಗ್ರಾಹಕರಿಗೆ ಹಲವು ಕೊಡುಗೆಗಳು, ರಿಯಾಯಿತಿಗಳನ್ನು ತಿಂಗಳ ಆರಂಭದಲ್ಲಿ ಘೋಷಿಸಿತ್ತು.

ಎಲ್ಲ ಕೊಡುಗೆಗಳು ಮತ್ತು ರಿಯಾಯಿತಿಗಳು ಜೋಸ್ ಆಲುಕ್ಕಾಸ್‌ನ ಎಲ್ಲ ಮಳಿಗೆಗಳಲ್ಲಿ ತಿಂಗಳ ಅಂತ್ಯದವರೆಗೆ ಲಭ್ಯವಿರುತ್ತವೆ ಎಂದು ಪ್ರಕಟಣೆ ತಿಳಿಸಿದೆ.

ಈ ಅವಧಿಯಲ್ಲಿ ಗ್ರಾಹಕರು ಹೊಸ ಆಭರಣ ಸಂಗ್ರಹಗಳನ್ನು ಕಡಿಮೆ ತಯಾರಿಕಾ ವೆಚ್ಚ ಪಾವತಿಸಿ ಖರೀದಿಸಬಹುದು. ವಿಶೇಷ ಆವೃತ್ತಿಯ ವಜ್ರದ ಆಭರಣಗಳ ಮೇಲೆ ಶೇಕಡ 20ರಷ್ಟು ರಿಯಾಯಿತಿ ಪಡೆಯಬಹುದು ಮತ್ತು ತಮ್ಮ ಹಳೆಯ ಚಿನ್ನವನ್ನು ಬಿಐಎಸ್ ಹಾಲ್‌ಮಾರ್ಕ್ ಚಿನ್ನದ ಆಭರಣಗಳಿಗೆ ಅಥವಾ ಐಜಿಐ-ಪ್ರಮಾಣೀಕೃತ ವಜ್ರದ ಆಭರಣಗಳಿಗೆ ವಿನಿಮಯ ಮಾಡಿಕೊಳ್ಳಬಹುದು. ಎಸ್‌ಬಿಐ ಕಾರ್ಡ್ ಬಳಕೆದಾರರು ಶೇ 5ರಷ್ಟು ಕ್ಯಾಶ್‌ಬ್ಯಾಕ್ ಪಡೆಯಬಹುದು.

ಸುನಕ್‌ಗೆ ಮೋದಿ ಅಭಿನಂದನೆ: ಮುಕ್ತ ವಹಿವಾಟಿಗೆ ಒಲವು

ನವದೆಹಲಿ/ಲಂಡನ್ (ಪಿಟಿಐ): ಬ್ರಿಟನ್ ನೂತನ ಪ್ರಧಾನಿ ರಿಷಿ ಸುನಕ್ ಜೊತೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಮಾತುಕತೆ ನಡೆಸಿದ್ದು, ಮುಕ್ತ ವಹಿವಾಟು ಒಪ್ಪಂದಕ್ಕೆ ಉಭಯ ನಾಯಕರು ಒಲವು ತೋರಿದ್ದಾರೆ.

ಸುನಕ್ ಪ್ರಧಾನಿಯಾಗಿ ಆಯ್ಕೆಯಾದ ಬಳಿಕ ಇದೇ ಮೊದಲ ಬಾರಿಗೆ ಮೋದಿ ಅವರು ದೂರವಾಣಿ ಕರೆ ಮೂಲಕ ಅವರನ್ನು ಅಭಿನಂದಿಸಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ನರೇಂದ್ರ ಮೋದಿ, 'ರಿಷಿ ಸುನಕ್ ಜೊತೆ ಮಾತನಾಡಲು ಹೆಮ್ಮೆ ಎನಿಸುತ್ತಿದೆ. ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಲಿದ್ದೇವೆ. ಸಮಗ್ರ ಮತ್ತು ಸಮತೋಲಿತ ಮುಕ್ತ ವಹಿವಾಟು ಕುರಿತಾದ ಆರಂಭಿಕ ತೀರ್ಮಾನದ ಪ್ರಾಮುಖ್ಯತೆಯನ್ನು ಕೂಡ ನಾವು ಒಪ್ಪಿಕೊಂಡಿದ್ದೇವೆ' ಎಂದಿದ್ದಾರೆ.

ಮೋದಿ ಜೊತೆಗಿನ ಮಾತುಕತೆ ಕುರಿತು ಸುನಕ್ ಕೂಡ ಟ್ವೀಟ್ ಮಾಡಿದ್ದಾರೆ. 'ಅಭಿನಂದನೆ ಸಲ್ಲಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳು. ಯುಕೆ ಮತ್ತು ಭಾರತದ ಬಾಂಧವ್ಯ ಗಟ್ಟಿಯಾಗಿದೆ. ಭದ್ರತೆ, ರಕ್ಷಣೆ ಮತ್ತು ಆರ್ಥಿಕ ಪಾಲುದಾರಿಕೆಯಲ್ಲಿ ಎರಡು ಬಲಿಷ್ಠ ಪ್ರಜಾಸತ್ತಾತ್ಮಕ ದೇಶಗಳ ನಡುವಿನ ಮುಂದಿನ ಹೆಜ್ಜೆ ಕುರಿತು ಉತ್ಸುಕನಾಗಿದ್ದೇನೆ' ಎಂದಿದ್ದಾರೆ.

ಸಣ್ಣ ಫ್ಲಾಟ್‌ಗೆ ಮರಳಲಿರುವ ಸುನಕ್: ಪ್ರಧಾನಿ ರಿಷಿ ಸುನಕ್ ಮತ್ತು ಅವರ ಕುಟುಂಬವು 10 ಡೌನಿಂಗ್ ಸ್ಟ್ರೀಟ್ ನಿವಾಸಕ್ಕೆ ಬದಲು ಈ ಮೊದಲಿನ ತಮ್ಮ ಸಣ್ಣ ಫ್ಲಾಟ್‌ಗೆ ಮರಳಲಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಸುನಕ್ ಪ್ರತಿಜ್ಞೆ: 'ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳು ತಮ್ಮ ಕನಸಿನ ದೀಪಗಳನ್ನು ಬೆಳಗಿಸುವ ಬ್ರಿಟನ್ ಅನ್ನು ನಿರ್ಮಿಸುವೆ' ಎಂದು ಸುನಕ್ ಪ್ರತಿಜ್ಞೆ ಮಾಡಿದರು.

ಬುಧವಾರ ರಾತ್ರಿ ದೀಪಾವಳಿ ಹಬ್ಬದ ಆಚರಣೆಯಲ್ಲಿ ಅವರು ಕುಟುಂಬದ ಜತೆಗೆ ಪಾಲ್ಗೊಂಡು ಎಲ್ಲರಿಗೂ ಹಬ್ಬದ ಶುಭಾಶಯ ಕೋರಿದರು.

'ಕಾಶ್ಮೀರ ವಿವಾದ: ಮಾತುಕತೆ ಮೂಲಕ ಇತ್ಯರ್ಥಪಡಿಸಲಿ'

ಬೀಜಿಂಗ್ (ಪಿಟಿಐ): ಕಾಶ್ಮೀರ ವಿವಾದವನ್ನು ಭಾರತ ಮತ್ತು ಪಾಕಿಸ್ತಾನ ಮಾತುಕತೆ ಮತ್ತು ಸಮಾಲೋಚನೆಗಳ ಮೂಲಕ ಇತ್ಯರ್ಥಪಡಿಸಿಕೊಳ್ಳಬೇಕು. ಪರಿಸ್ಥಿತಿಯನ್ನು ಮತ್ತಷ್ಟು ಸಂಕೀರ್ಣಗೊಳಿಸಬಹುದಾದ ಏಕಪಕ್ಷೀಯ ಕ್ರಮ ತೆಗೆದುಕೊಳ್ಳುವುದನ್ನು ಉಭಯದೇಶಗಳೂ ತಪ್ಪಿಸಬೇಕು ಎಂದು ಚೀನಾ ಗುರುವಾರ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಪಾಕಿಸ್ತಾನದ ಪತ್ರಕರ್ತರೊಬ್ಬರು ಕಾಶ್ಮೀರ ವಿಷಯದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೋ ನಿಂಗ್, 'ಕಾಶ್ಮೀರದ ವಿಷಯದಲ್ಲಿ ಚೀನಾದ ನಿಲುವು ಸ್ಥಿರ ಮತ್ತು ಸ್ಪಷ್ಟವಾಗಿದೆ' ಎಂದರು.

'ಇದು ಭಾರತ ಮತ್ತು ಪಾಕಿಸ್ತಾನದ ನಡುವಿನ ಸಮಸ್ಯೆ. ಈ ಸಮಸ್ಯೆಯನ್ನು ವಿಶ್ವಸಂಸ್ಥೆಯ ಸನ್ನದು, ಭದ್ರತಾ ಮಂಡಳಿಯ ನಿರ್ಣಯಗಳು ಮತ್ತು ಸಂಬಂಧಿತ ದ್ವಿಪಕ್ಷೀಯ ಒಪ್ಪಂದಗಳಿಗೆ ಅನುಗುಣವಾಗಿ ಶಾಂತಿಯುತ ರೀತಿಯಲ್ಲಿ ಪರಿಹರಿಸಿಕೊಳ್ಳಬೇಕು' ಎಂದು ಮಾವೋ ಹೇಳಿದರು.

ಇಂದು, ನಾಳೆ ಭಯೋತ್ಪಾದನಾ ನಿಗ್ರಹ ಸಮಾವೇಶ

ವಿಶ್ವಸಂಸ್ಥೆ (ಪಿಟಿಐ): ಭಾರತ ಆಯೋಜಿಸಲಿರುವ ಎರಡು ದಿನಗಳ ಯುಎನ್ಎಸ್‌ಸಿ ಭಯೋತ್ಪಾದನೆ ನಿಗ್ರಹ ಸಮಾವೇಶವು, ಜಾಗತಿಕ ಪಿಡುಗಿನ ವಿರುದ್ಧ ಹೋರಾಡಲು ಮಹತ್ವದ ಸಭೆಯಾಗಿದೆ ಎಂದು ಅಮೆರಿಕ ಬಣ್ಣಿಸಿದೆ.

ಅ. 28-29 ರಂದು ಮುಂಬೈ ಮತ್ತು ನವದೆಹಲಿಯಲ್ಲಿ ನಡೆಯಲಿರುವ ಸಭೆಯಲ್ಲಿ ಅಮೆರಿಕದ ಹಿರಿಯ ರಾಜತಾಂತ್ರಿಕ ಅಧಿಕಾರಿ ಕ್ರಿಸ್ ಲು ಅವರು ಅಮೆರಿಕ ನಿಯೋಗದ ಮುಖ್ಯಸ್ಥರಾಗಿ ಪಾಲ್ಗೊಳ್ಳಲಿದ್ದಾರೆ.

ಹಂತಕನಿಗೆ ಗಲ್ಲು ಶಿಕ್ಷೆ

ಹ್ಯೂಸ್ಟನ್ (ಪಿಟಿಐ): 2019ರಲ್ಲಿ ಟೆಕ್ಸಾಸ್‌ನಲ್ಲಿ ಭಾರತೀಯ-ಅಮೆರಿಕನ್ ಸಿಖ್ ಪೊಲೀಸ್ ಅಧಿಕಾರಿ ಸಂದೀಪ್ ಧಲಿವಾಲ್ ಅವರ ಹತ್ಯೆಗೈದಿದ್ದ ರಾಬರ್ಟ್ ಸೋಲಿಸ್‌ಗೆ ಮರಣದಂಡನೆ ವಿಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಮಂಗಳಾ ರಾಮಚಂದ್ರ
ಗೌ॥ ಅಧ್ಯಕ್ಷರು, ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್
ಭಾವಪೂರ್ಣ ಅಂತಿಮ ನಮನಗಳು:
ಎಂ.ಎಲ್.ಎ ಆಡಳಿತ ಮಂಡಳಿ
ಎಂ.ಎಲ್.ಎ ಸಮೂಹ ವಿದ್ಯಾಸಂಸ್ಥೆಗಳು
ಬೋಧಕ, ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು
(ಜನನ: 17.05.1932 ● ಮರಣ: 24.10.2022)

ಚಿರಸ್ಮರಣೆ

ದಿ. ಶ್ರೀ ಮುನಿವೆಂಕಟಪ್ಪ 28.10.1989 (ನಮ್ಮನ್ನಗಲಿ 33 ವರ್ಷ)
ದಿ. ಶ್ರೀಮತಿ ಗಂಗಮ್ಮ 13.12.1993 (ನಮ್ಮನ್ನಗಲಿ 29 ವರ್ಷ)
ದಿ. ಶ್ರೀ ಮುನಿವೆಂಕಟಪ್ಪ ಸಂಸ್ಥಾಪಕರು ಶ್ರೀ ಪಿಳೇಕಮ್ಮ ದೇವಸ್ಥಾನ, ಲಾಲ್‌ಭಾಗ್ ಸಿದ್ದಾಪುರ, ಅನಂತ ಎಲೆಕ್ಟ್ರಿಕಲ್ಸ್, ವಿ.ವಿ. ಪುರಂ, ಬೆಂಗಳೂರು.
ನೀವು ಕಣ್ಮರೆಯಾಗಿ ಇಷ್ಟು ವರ್ಷಗಳಾದರು, ಸದಾ ನಿಮ್ಮನ್ನು ನೆನೆಸುತ್ತ, ನಿಮ್ಮ ಆದರ್ಶ ಹಾಗು ಮಾರ್ಗದರ್ಶನದಲ್ಲಿ ನಡೆಯುತ್ತಿರುವ–ನಿಮ್ಮ ಮಗ: ವಾಸುದೇವ ಹಾಗು ಕುಟುಂಬ ಸದಸ್ಯರುಗಳು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಮನೆಕೆಲಸ (12,000-15,000) / ಹೋಂನರ್ಸ್ (15,000-20,000), ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಊಟ– ವಸತಿ ಉಚಿತ. ಉಡುಪಿ: 9148330776

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ.10,000-15,000. 8951315839, 9880545002

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ.10,000-15,000. 8951315839, 9880545002

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Drivers

ಅನುಭವಿ ಕಾರು ಚಾಲಕರು ಬೇಕಾಗಿದ್ದಾರೆ, ಉತ್ತಮ ವೇತನ, ಬೋನಸ್,ESI, PF,ಊಟ ಇತ್ಯಾದಿ ಸೌಲಭ್ಯ ನೀಡಲಾಗುವುದು, HSR ಲೇಔಟ್ ಸುತ್ತಮುತ್ತ ವಾಸವಾಗಿರುವವರಿಗೆ ಆಧ್ಯತೆ ನೀಡಲಾಗುವುದು, ತಕ್ಷಣ ಸಂಪರ್ಕಿಸಿ: 9003329174

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Hotel

ಮಲ್ಲೇಶ್ವರಂನಲ್ಲಿ ಫೈನ್ ಡೈನಿಂಗ್ ರೆಸ್ಟೋರೆಂಟ್ ಪ್ರಾರಂಭವಾಗಿದ್ದು ಅನುಭವಸ್ಥ ನುರಿತ ಸೌತ್ ಮಾಸ್ಟರ್, ಚೈನೀಸ್ ಮಾಸ್ಟರ್, ಇಂಡಿಯನ್ ಹಾಗೂ ನುರಿತ ಕ್ಯಾಪ್ಟನ್, ಸ್ಟೇವಾರ್ಡ್, ಕ್ಯಾಶಿಯರ್ ಹಾಗೂ ಹೋಟೆಲ್‌ನ ಎಲ್ಲಾ ಸಿಬ್ಬಂದಿಗಳು ತಕ್ಷಣ ಬೇಕಾಗಿರುತ್ತಾರೆ ಸಂಪರ್ಕಿಸಿ: 8884442517/ 9845577977.

ವ್ಯಾಪಾರ

Business Offers

Finance

ತುಮಕೂರಿನಲ್ಲಿರುವ ಸ್ಥಿರಾಸ್ತಿಯ ಮೇಲೆ ಮೂರು ಕೋಟಿ ರೂಪಾಯಿ ಸಾಲ ಬೇಕಾಗಿದೆ. ಕನ್ನಡದಲ್ಲಿ (ವ್ಯಕ್ತಿ - ಸಂಸ್ಥೆ) ವ್ಯವಹರಿಸಲಾಗುವುದು. ಕಡಿಮೆ ಬಡ್ಡಿ- ನಿಬಂಧನೆಗಳಿಗೆ ಆದ್ಯತೆ. ಯಾವುದೇ ಶುಲ್ಕವನ್ನು ಮುಂಗಡವಾಗಿ ನೀಡುವುದಿಲ್ಲ. ನಗದು ರೂಪದಲ್ಲಿ ವ್ಯವಹರಿಸಬಹುದು. ಕರೆಮಾಡಿ: 98445 44500.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Electronic City

KHB ALLOTTED Shop for sale in KHB Surya City Clear Absolute Sale Deed Title 90 SQFT for 12 lakhs Contact Raghavendra 9606866368

ಭವಿಷ್ಯ

Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಇತರೆ

Books & Periodicals

ಉಚಿತವಾಗಿ ಬೈಬಲ್ ನೀಡಲಾಗುತ್ತದೆ ನಿಮ್ಮ ಮನೆಯ ವಿಳಾಸಕ್ಕೆ ಸಂಪರ್ಕಿಸಿ: 8892501007/ 9606701007

ಪ್ರವಾಸ

Travel

05.11.2022, 2 ದಿನಗಳು ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಹೆಬ್ಬೆಫಾಲ್ಸ್, ಬಾಬಾಬುಡನಗಿರಿ, ಮಾಣಿಕ್ಯದರಫಾಲ್ಸ್, ಕಲ್ಲತ್ತಿಗಿರಿಫಾಲ್ಸ್, ಕೋದಂಡರಾಮಸ್ವಾಮಿ ಇತ್ಯಾದಿ. ಓಂ ಸಾಯಿರಾಮ್ ಟೂರ್ಸ್. 9481433157

ಕಾರ್ತಿಕ ಮಾಸದ ವಿಶೇಷ ಪ್ರವಾಸ: ವಿಮಾನ/A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ ಮೌಂಟ್‌ಅಬು ಇತ್ಯಾದಿ. ಊಟ,ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು4. 9342514289 9686721196

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 30.11.2022 18.01.2023 ರಿಂದ 8/11 ದಿನಗಳ ಗುಜರಾತ್,ರಾಜಸ್ಥಾನ್. 24.12.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 24.12.2022 05.01.2023 ರಿಂದ 5 ದಿನಗಳ ದಕ್ಷಿಣ ಭಾರತ 08.01.2023 22.01.2023 ರಿಂದ 14 ದಿನಗಳ ಅಷ್ಟ ಜ್ಯೋತಿರ್ಲಿಂಗ 19.01.2023 06.02.2023 ರಿಂದ 8 ದಿನಗಳ ನೈಮಿಶಾರಣ್ಯ ಕಾಶಿ,ಗಯಾ ಪ್ರವಾಸಗಳು. 08.01.2023 22.01.2023 ರಿಂದ 5 ದಿನಗಳ ದುಬೈ,ಅಬುಧಾಬಿ. 18.01.2023 22.02.2023 ರಿಂದ 11 ದಿನಗಳ ಸಿಂಗಾಪುರ್,ಮಲೇಶಿಯಾ 16.01.2023 01.02.2023 ರಿಂದ 8 ದಿನಗಳ ವಿಯಟ್ನಾಂ ಕಾಂಬೋಡಿಯಾ ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 8088887677 080-23385837

ಹೆಸರಾಂತ ಪ್ರವಾಸಿ ಸಂಸ್ಥೆಯಾದ ಏಷ್ಯನ್ ಟ್ರಾವಲ್ ಏಜೆನ್ಸಿ ವತಿಯಿಂದ ಸಮಸ್ತ ನಾಡಿನ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳೊಂದಿಗೆ ವಿಮಾನ/ A/C ಬಸ್ಸಿನಲ್ಲಿ 09.11.2022 ಸೋಮನಾಥ ಕಚ್-ಬುಜ್ ಓಂಕಾರೇಶ್ವರ್ ಮಂಹಾಕಾಳೇಶ್ವರ್ 11.11.2022 ಪಂಚರಾಮ ಸಮೇತ ಪ್ರವಾಸ 14.11.2022, 6 ದಿನಗಳ ಕಾಶಿ,ಅಲಹಾಬಾದ್‌ಅಯೋಧ್ಯ 18.11.2022 ಮುಕ್ತಿನಾಥ, ನೇಪಾಳ,ಪೋಕ್ರಾ 24.12.2022, 6 ದಿನಗಳ ಶಿರಡಿ ಮತ್ತು 9 ದಿನಗಳ ದಕ್ಷಿಣ ಭಾರತ ಪ್ರವಾಸ. ಸಂಪರ್ಕಿಸಿ. 26574131 26573421 8317446683

ಶ್ರೀರಾಜರಾಜೇಶ್ವರಿ ಟೂರ್ಸ್ 9739618243, 9743895346 10.11.2022 8 ದಿನಗಳ ದೆಹಲಿ, ಮಥುರ, ಬೃಂದಾವನ ಆಗ್ರಾ ವಾಘಾಗಡಿ ವೈಷ್ಣೋದೇವಿ, ಶಿವಕೋರಿ ಇತ್ಯಾದಿ.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್14/11/22 ಗುಜರಾತ್, ದ್ವಾರಕಾ, ಬೆಟ್‌ದ್ವಾರಕ, ನಾಗನಾಥ, ಸೋಮನಾಥ, Statue of Unity, ಮಾತೃಗಯಾ, ರಾನಿಕಿವಾವ್. 9591017782,9964527782

ಸುವರ್ಣ ಯಾತ್ರ ನೇಪಾಳಪ್ರವಾಸ 15/11/22, ಕಾಶಿಪ್ರವಾಸ 15/11/22, ಗುಜರಾತ್ಪ್ರವಾಸ 24/11/22, ಶಿರಿಡಿಪ್ರವಾಸ 11/11/22. 9008381022/9019462508

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD
BOOK YOUR CLASSIFIEDS ONLINE ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

NATIONAL ASSESSMENT AND ACCREDITATION COUNCIL(NAAC)
(An Autonomous Institution of the University Grants Commission)
P.O.Box No. 1075, Nagarbhavi, Bengaluru- 560072.
Website : www.naac.gov.in
No. 02/NAAC/Admin/Rect/2022 Date: 28.10.2022

VACANCY CIRCULAR

The National Assessment and Accreditation Council (NAAC) invites applications for Recruitment of one post of **Deputy Adviser (Deputation).** The details can be obtained from NAAC website **www.naac.gov.in** The candidates should submit their applications **online only** through NAAC website on or before **27.11.2022.**

Sd/- Administrative Officer, NAAC

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–2/ಟೆಂಡರ್/28/2022–23 ದಿನಾಂಕ: 25–10–2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ Viveka Yojane/2022-23 Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **03–11–2022ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/2794/ಅಕ್ಟೋಬರ್/2022–23

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052.
ಸಂ.: ಕವಶಿಸಸ/ಸಕಾಇ/ಟೆಂಡರ್–13/2022–23 ದಿನಾಂಕ: 27.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ನಿರ್ವಹಿಸುತ್ತಿರುವ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ ಸೌರವಿದ್ಯುತ್ ಉತ್ಪಾದನ ಘಟಕ, ಹೈಮಾಸ್ಟ್ ಲೈಟಿಂಗ್, ಸೋಲಾರ್ ವಿದ್ಯುತ್ ದೀಪ, ಸೋಲಾರ್ ವಾಟರ್ ಹೀಟರ್‌ಗಳು ಮತ್ತು ಯು.ಪಿ.ಎಸ್ ಅಳವಡಿಸುವ ಕಾಮಗಾರಿಗೆ (Indent no- 3014 & 3015) ಇ–ಪೋರ್ಟಲ್ ಮುಖಾಂತರ ದಿನಾಂಕ: **28.10.2022**ರಂದು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವನ್ನು **14.11.2022**ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://eproc.karnataka.gov.in** ರಲ್ಲಿ ನೋಡಬಹುದಾಗಿದೆ.
ಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://eproc.karnataka.gov.in)** ಮಾತ್ರ ಪ್ರಕಟಿಸಲಾಗುವುದು.

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು,
ಕ.ವ.ಶಿ.ಸ.ಸಂ.
ವಾಸಾಸಂಇ/ವಾಪ್ರ/ಎಲ್‌ಸಿ/2805/2022–23

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪಿಒಕೆ ಸ್ವಾಧೀನಕ್ಕೆ ಬದ್ಧ: ಸಚಿವ

ಪ್ರಜಾವಾಣಿ ವಾರ್ತೆ

ಶ್ರೀನಗರ: 'ಪಾಕಿಸ್ತಾನ ಆಕ್ರಮಿತ ಕಾಶ್ಮೀರವನ್ನು (ಪಿಒಕೆ) ಮತ್ತೆ ವಶಕ್ಕೆ ಪಡೆಯಲು ನಾವು ಬದ್ಧರಾಗಿದ್ದೇವೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.



ರಾಜನಾಥ್ ಸಿಂಗ್

ಗುರುವಾರ ಇಲ್ಲಿ ನಡೆದ ಶೌರ್ಯದಿವಸ ಆಚರಣೆಯಲ್ಲಿ ಅವರು ಈ ಮಾತು ಹೇಳಿದ್ದಾರೆ. ಪಾಕಿಸ್ತಾನವು ಅಕ್ರಮವಾಗಿ ತನ್ನ ವಶದಲ್ಲಿ ಇರಿಸಿ-ಕೊಂಡಿರುವ ಕಾಶ್ಮೀರ, ಗಿಲ್ಗಿಟ್-ಬಲ್ತಿಸ್ತಾನ ಪ್ರದೇಶವನ್ನು ಭಾರತವು ಮರುವಶ ಮಾಡಿಕೊಳ್ಳಬೇಕು ಎಂಬ ನಿರ್ಣಯವನ್ನು 1994ರಲ್ಲಿ ಸಂಸತ್ತಿನಲ್ಲಿ ಅವಿರೋಧವಾಗಿ ಅಂಗೀಕರಿಸಲಾಗಿತ್ತು. ಆ ನಿರ್ಣಯಕ್ಕೆ ನಮ್ಮ ಸರ್ಕಾರವು ಈಗಲೂ ಬದ್ಧವಾಗಿದೆ ಎಂದು ರಾಜನಾಥ್ ಹೇಳಿದ್ದಾರೆ.

'ಪಿಒಕೆಯಲ್ಲಿ ನಾಗರಿಕರ ಮೇಲೆ ಪಾಕಿಸ್ತಾನದ ಕಿರುಕುಳ ಮತ್ತು ದೌರ್ಜನ್ಯ ಸಾಮಾನ್ಯ ಎಂಬಂತಾಗಿದೆ. ಅಲ್ಲಿನ ಜನರ ನೋವು ನಮಗೆ ಅರ್ಥವಾಗುತ್ತದೆ. ಅಲ್ಲಿನ ಜನರಿಗೆ ಕನಿಷ್ಠ ಸೌಲಭ್ಯಗಳನ್ನೂ ನಿರಾಕರಿಸಲಾಗಿದೆ. ಪಾಕಿಸ್ತಾನವು ಅಲ್ಲಿ ದ್ವೇಷವನ್ನು ಹುಟ್ಟುಹಾಕುತ್ತಿದೆ. ಇವೆಲ್ಲದರ ವಿರುದ್ಧ ಅಲ್ಲಿನ ಜನ ಶೀಘ್ರವೇ ಬಂಡಾಯ ಏಳಲಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಕಾಶ್ಮೀರದಲ್ಲಿ ಉಗ್ರರ ವಿರುದ್ಧ ಸೇನೆ ನಡೆಸುವ ಕಾರ್ಯಾಚರಣೆಗಳ ಬಗ್ಗೆ ಕೆಲವು ಬುದ್ಧಿಜೀವಿಗಳು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ ಎಂದು ಆರೋಪಿಸಲಾಗುತ್ತಿದೆ. ಆದರೆ, ಸಾಮಾನ್ಯ ಜನರ ಮೇಲೆ ಆ ಭಯೋತ್ಪಾದಕರು ನಿರ್ದಯವಾಗಿ ದಾಳಿ ನಡೆಸುವಾಗ ಇವರೆಲ್ಲಾ ಎಲ್ಲಿ ಹೋಗಿರುತ್ತಾರೆ' ಎಂದು ರಾಜನಾಥ್ ಪ್ರಶ್ನಿಸಿದ್ದಾರೆ.

2019ರ ಆಗಸ್ಟ್ 5ಕ್ಕೂ ಮುನ್ನ ಕಾಶ್ಮೀರದಲ್ಲಿ ತಾರತಮ್ಯವಿತ್ತು, ಸಮಾಜ ವಿಭಜನೆಯಾಗಿತ್ತು. ಆದರೆ, ವಿಶೇಷ ಸ್ಥಾನಮಾನ ರದ್ದತಿಯ ನಂತರ ಸಮಾಜದ ಎಲ್ಲಾ ವರ್ಗದ ಜನರು ಯಶಸ್ವಿಯಾಗಿ ಮುನ್ನಡೆಯುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಶೌರ್ಯ ದಿವಸ ಆಚರಣೆ

1947ರಲ್ಲಿ ಪಾಕಿಸ್ತಾನವು ಕಾಶ್ಮೀರವನ್ನು ಅಕ್ರಮಿಸಿಕೊಂಡಿತ್ತು. ಅಕ್ಟೋಬರ್ 27ರಂದು ವಾಯುಪಡೆಯ ವಿಮಾನಗಳು ಶ್ರೀನಗರದಲ್ಲಿ ಇಳಿದು, ಪಾಕಿಸ್ತಾನ ಸೇನೆಯ ವಿರುದ್ಧ ಕಾರ್ಯಾಚರಣೆ ಆರಂಭಿಸಿದ್ದವು. ಆ ದಿನವನ್ನು 'ಶೌರ್ಯ ದಿವಸ' ಕರೆಯಲಾಗಿತ್ತು. ಆನಂತರ ಪ್ರತಿ ವರ್ಷವೂ ಅಕ್ಟೋಬರ್ 27ರಂದು ಶೌರ್ಯ ದಿವಸವನ್ನಾಗಿ ಆಚರಿಸಲಾಗುತ್ತದೆ. ಗುರುವಾರ 75ನೇ ಶೌರ್ಯ ದಿವಸವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಸಮ್ಮುಖದಲ್ಲಿ ಆಚರಿಸಲಾಯಿತು.

ನೋಟುಗಳ ಮೇಲೆ ಲಕ್ಷ್ಮೀ, ಗಣೇಶ ಚಿತ್ರ ಹಾಕಿ ಎಂಬ ಹೇಳಿಕೆ • ಬಿಜೆಪಿ, ಕಾಂಗ್ರೆಸ್ ಟೀಕೆ

ರಾಜಕೀಯ ಕಿಡಿ ಹಚ್ಚಿದ ಕೇಜ್ರಿವಾಲ್

ನವದೆಹಲಿ (ಪಿಟಿಐ): ಕರೆನ್ಸಿ ನೋಟುಗಳ ಮೇಲೆ ಲಕ್ಷ್ಮೀ ಮತ್ತು ಗಣೇಶನ ಚಿತ್ರ ಮುದ್ರಿಸುವಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೀಡಿರುವ ಹೇಳಿಕೆ ರಾಜಕಾರಣದಲ್ಲಿ ಕಿಡಿ ಹೊತ್ತಿಸಿದೆ. ಆಮ್ ಆದ್ಮಿ ಪಕ್ಷದ ವಿರುದ್ಧ ಬಿಜೆಪಿ, ಕಾಂಗ್ರೆಸ್ ಮುಗಿಬಿದ್ದಿದ್ದು, ವಾಕ್ಸಮರ ತೀವ್ರಗೊಂಡಿದೆ.

'ಹಿಂದೂ ದೇವತೆಗಳ ವಿರುದ್ಧ ಎಎಪಿ ನಾಯಕರು ನೀಡಿದ ಹೇಳಿಕೆಗಳಿಂದ ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿರುವುದನ್ನು ಮುಚ್ಚಿಕೊಳ್ಳುವ ಪ್ರಯತ್ನವಿದು' ಎಂದು ಕೇಜ್ರಿವಾಲ್ ಮೇಲೆ ಬಿಜೆಪಿ ನಾಯಕರು ವಾಗ್ದಾಳಿ ಮಾಡಿದ್ದಾರೆ.

ಕಾಂಗ್ರೆಸ್ ದೆಹಲಿ ಘಟಕದ ಅಧ್ಯಕ್ಷ ಅನಿಲ್ ಕುಮಾರ್, 'ಕೇಜ್ರಿವಾಲ್ ತಮ್ಮ ರಾಜಕೀಯ ಚದುರಂಗದಾಟಕ್ಕೆ ಹಿಂದೂ ದೇವತೆಗಳನ್ನು ದಾಳವಾಗಿಸಿಕೊಳ್ಳುತ್ತಿದ್ದಾರೆ. ಸಂವಿಧಾನದ ಜಾತ್ಯತೀತ ತತ್ವಗಳನ್ನು ಉಲ್ಲಂಘಿಸಿರುವ ಅವರು ದೆಹಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ಕೇಜ್ರಿವಾಲ್ ಹೇಳಿಕೆಯಲ್ಲಿ ನಿಜವಾಗಿಯೂ ಅರ್ಥವಿದ್ದರೆ, ಹಿಂದೂ ದೇವತೆಗಳ ವಿರುದ್ಧ ಮಾತನಾಡಿರುವ ದೆಹಲಿಯ ಮಾಜಿ ಸಚಿವ ರಾಜೇಂದ್ರ ಪಾಲ್ ಗೌತಮ್ ಮತ್ತು ಎಎಪಿಯ ಗುಜರಾತ್ ಘಟಕದ ಅಧ್ಯಕ್ಷ ಗೋಪಾಲ್ ಇಟಾಲಿಯಾ ಅವರನ್ನು ಮೊದಲು ಪಕ್ಷದಿಂದ ಹೊರಗಟ್ಟಲಿ ಎಂದು ಬಿಜೆಪಿಯ ದೆಹಲಿ ಸಂಸದ ಮನೋಜ್ ತಿವಾರಿ ಸವಾಲು ಹಾಕಿದರು.

ದೆಹಲಿಯಲ್ಲಿ ದೀಪಾವಳಿಯನ್ನು ಪಟಾಕಿಯೊಂದಿಗೆ ಆಚರಿಸಿದರೆ ಕಾನೂನು ಕ್ರಮ ಜರುಗಿಸುವುದಾಗಿ ಎಎಪಿ ಸರ್ಕಾರ ಎಚ್ಚರಿಕೆ ಕೊಟ್ಟಿತ್ತು. ಕೇಜ್ರಿವಾಲ್ ಅವರ ಈ ಹೊಸ ಹೇಳಿಕೆ ಬೂಟಾಟಿಕೆಯ ಪ್ರದರ್ಶನ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಕಿಡಿಕಾರಿದರು.

ಬಿಜೆಪಿ ನಾಯಕರ ತೀವ್ರ ವಾಗ್ದಾಳಿಗೆ ತಿರುಗೇಟು ನೀಡಿರುವ ಎಎಪಿಯ ದೆಹಲಿ ಘಟಕದ ಮುಖ್ಯಸ್ಥ, ಸಂಸದ ಸಂಜಯ್ ಸಿಂಗ್ 'ಕೇಜ್ರಿವಾಲ್ ಅವರು ಮಾಡಿರುವುದು ಬರೀ ಮನವಿ ಅಷ್ಟೇ. ಆದರೆ, ಈ ಪ್ರಸ್ತಾವನೆ ಬಿಜೆಪಿಗೆ ಇರುಸುಮುರುಸು ತಂದಿದೆ' ಎಂದು ವ್ಯಂಗ್ಯವಾಡಿದ್ದಾರೆ. ಇವರ ಹೇಳಿಕೆಗೆ ಎಎಪಿ ಶಾಸಕರಾದ ಅತಿಶಿ, ದಿಲೀಪ್ ಪಾಂಡೆ ದನಿಗೂಡಿಸಿದ್ದಾರೆ.

ನೋಟಿನಲ್ಲಿ ಒಂದೆಡೆ ಗಾಂಧೀಜಿ ಚಿತ್ರ, ಮತ್ತೊಂದೆಡೆ ಅಂಬೇಡ್ಕರ್ ಚಿತ್ರವಿದ್ದರೆ ಹೇಗೆ? ಅಹಿಂಸೆ, ಸಂವಿಧಾನ, ಸಮತಾವಾದಗಳು ಒಟ್ಟಾಗಿ ಆಧುನಿಕ ಭಾರತವನ್ನು ಉತ್ತಮವಾಗಿ ಪ್ರತಿನಿಧಿಸುತ್ತವೆ

ಮನೀಷ್ ತಿವಾರಿ, ಕಾಂಗ್ರೆಸ್ ಸಂಸದ

ಕೇಜ್ರಿವಾಲ್ ಹೇಳಿದ್ದೇನು?

ದೆಹಲಿಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ್ದ ಅರವಿಂದ ಕೇಜ್ರಿವಾಲ್, 'ದೇಶದ ಆರ್ಥಿಕತೆಯು ಉತ್ತಮ ಸ್ಥಿತಿಯಲ್ಲಿಲ್ಲ. ಕರೆನ್ಸಿ ನೋಟುಗಳ ಮೇಲೆ ಮಹಾತ್ಮ ಗಾಂಧೀಜಿ ಭಾವಚಿತ್ರದ ಜತೆಗೆ ಲಕ್ಷ್ಮೀದೇವಿ, ಗಣೇಶನ ಚಿತ್ರಗಳನ್ನು ಹಾಕಬೇಕೆಂಬುದು ನನ್ನ ಬಯಕೆ. ಈ ಕುರಿತು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತೇನೆ' ಎಂದು ತಿಳಿಸಿದ್ದರು.

'ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಾಕಷ್ಟು ಪ್ರಯತ್ನಿಸಬೇಕಿದೆ. ಕೆಲವೊಮ್ಮೆ ನಾವು ಎಷ್ಟೇ ಪ್ರಯತ್ನಿಸಿದರೂ ಉತ್ತಮ ಫಲಿತಾಂಶ ದೊರೆಯಲ್ಲ. ಇದಕ್ಕೆ ದೇವರ ಆಶೀರ್ವಾದ ಬೇಕಿರುತ್ತದೆ. ಅದಕ್ಕಾಗಿ ನೋಟುಗಳಲ್ಲಿ ಲಕ್ಷ್ಮಿ ಮತ್ತು ಗಣೇಶ ದೇವರ ಭಾವಚಿತ್ರಗಳಿದ್ದರೆ ಇಡೀ ದೇಶಕ್ಕೆ ಆಶೀರ್ವಾದ ಸಿಗುತ್ತದೆ. ದೇಶವೂ ಅಭಿವೃದ್ಧಿ ಹೊಂದುತ್ತದೆ' ಎಂದು ಕೇಜ್ರಿವಾಲ್ ಸಲಹೆ ನೀಡಿದ್ದರು. ಇಂಡೋನೇಷ್ಯಾದಲ್ಲಿ ಕರೆನ್ಸಿ ನೋಟಿನ ಮೇಲೆ ಗಣೇಶ ಚಿತ್ರ ಮುದ್ರಿಸಲಾಗಿದೆ ಎಂದೂ ಹೇಳಿದ್ದರು.

'ಅಪರಾಧಗಳಿಗೆ ಕಡಿವಾಣ– ರಾಜ್ಯ, ಕೇಂದ್ರದ ಸಾಮೂಹಿಕ ಜವಾಬ್ದಾರಿ'

ಸೂರಜ್‌ಕುಂಡ್, ಹರಿಯಾಣ (ಪಿಟಿಐ): ಗಡಿಯಾಚೆಗಿನ ಅಪರಾಧಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದು ರಾಜ್ಯ ಮತ್ತು ಕೇಂದ್ರದ ಸಾಮೂಹಿಕ ಜವಾಬ್ದಾರಿ ಎಂದು ಗೃಹ ಸಚಿವ ಅಮಿತ್ ಶಾ ಗುರುವಾರ ಹೇಳಿದ್ದಾರೆ.

'ಕಾನೂನು ಮತ್ತು ಸುವ್ಯವಸ್ಥೆ ರಾಜ್ಯದ ವಿಷಯವಾಗಿದೆ. ಎಲ್ಲ ರಾಜ್ಯಗಳು ಒಟ್ಟಾಗಿ ಕುಳಿತು ಅವುಗಳನ್ನು ನಿಗ್ರಹಿಸಲು ಸಾಮಾನ್ಯ ಕಾರ್ಯತಂತ್ರ ರೂಪಿಸಿ, ಪ್ರಯತ್ನಿಸಿದಾಗ ಅಪರಾಧಗಳ ವಿರುದ್ಧ ಯಶಸ್ವಿಯಾಗಬಹುದು' ಎಂದರು.

ಪ್ರಧಾನಿ ನರೇಂದ್ರ ಮೋದಿ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಘೋಷಿಸಿದ 'ವಿಷನ್ 2047' ಮತ್ತು 'ಪಂಚ ಪ್ರಾಣ' ಅನುಷ್ಠಾನಕ್ಕೆ ಕ್ರಿಯಾ ಯೋಜನೆ ಸಿದ್ಧಪಡಿಸುವ ಉದ್ದೇಶದಿಂದ ಆಯೋಜಿಸಿರುವ ಎರಡು ದಿನಗಳ 'ಚಿಂತನ ಶಿಬಿರ' ಉದ್ದೇಶಿಸಿ ಶಾ ಮಾತನಾಡಿದರು.

ಸೈಬರ್ ಅಪರಾಧ, ಮಾದಕ ದ್ರವ್ಯ ಮತ್ತು ಗಡಿಯಾಚೆಗಿನ ಭಯೋತ್ಪಾದನೆ ಎದುರಿಸುವ ತಂತ್ರ ಚರ್ಚಿಸಲು 'ಶಿಬಿರ' ಉತ್ತಮ ವೇದಿಕೆಯಾಗಬಹುದು ಎಂದರು.

'ಮನೆಗೆಲಸ ಮಾಡಿಸುವುದು ಕ್ರೌರ್ಯವಲ್ಲ'

ವಿವಾಹಿತೆ ಸಲ್ಲಿಸಿದ್ದ ದೂರು • ಎಫ್‌ಐಆರ್ ರದ್ದು ಮಾಡಿದ ಬಾಂಬೆ ಹೈಕೋರ್ಟ್

ಮುಂಬೈ (ಪಿಟಿಐ): ತನ್ನ ಕುಟುಂಬಕ್ಕಾಗಿ ಮನೆಗೆಲಸ ಮಾಡುವಂತೆ ವಿವಾಹಿತೆಯನ್ನು ಒತ್ತಾಯಿಸುವುದು ಕ್ರೌರ್ಯವಲ್ಲ. ಜೊತೆಗೆ ಮನೆಗೆಲಸ ಮಾಡು ಎನ್ನುವುದು ವಿವಾಹಿತೆಯನ್ನು ಮನೆಗೆಲಸದವರಿಗೆ ಹೋಲಿಸಿದಂತೆ ಅಲ್ಲ ಎಂದು ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠ ಹೇಳಿದೆ.

ಪತಿ ಹಾಗೂ ಆತನ ಪೋಷಕರ ವಿರುದ್ಧ ವಿವಾಹಿತೆಯೊಬ್ಬರು ಕೌಟುಂಬಿಕ ದೌರ್ಜನ್ಯದ ದೂರು ನೀಡಿದ್ದರು. ಈ ಸಂಬಂಧ ಎಫ್‌ಐಆರ್ ದಾಖಲಾಗಿತ್ತು. ನ್ಯಾಯಮೂರ್ತಿಗಳಾದ ವಿಭಾ ಕಂಕನ್‌ವಾಡಿ ಮತ್ತು ರಾಜೇಶ್ ಪಾಟೀಲ್ ಅವರು ಈ ಎಫ್‌ಐಆರ್ ಅನ್ನು ಅ.21ರಂದು ರದ್ದು ಮಾಡಿದ್ದರು.

'ಮದುವೆ ಆದ ಒಂದು ತಿಂಗಳವರೆಗೆ ಎಲ್ಲರೂ ನನ್ನನ್ನು ಚೆನ್ನಾಗಿಯೇ ನೋಡಿಕೊಂಡರು. ನಂತರ, ನನ್ನನ್ನು ಮನೆಗೆಲಸದವಳಂತೆ ಕಾಣತೊಡಗಿದರು. ಜೊತೆಗೆ ಕಾರು ಖರೀದಿಸಲು ₹4 ಲಕ್ಷ ಕೊಡುವಂತೆ ಬೇಡಿಕೆ ಇಟ್ಟರು. ಅದಕ್ಕಾಗಿ ಒತ್ತಾಯಪಡಿಸಿದರು. ಹಣ ನೀಡುವಂತೆ ಪತಿಯು ನನ್ನ ಮೇಲೆ ಮಾನಸಿಕ ಹಾಗೂ ದೈಹಿಕ ದೌರ್ಜನ್ಯ ನಡೆಸಿದ್ದಾರೆ' ಎಂದು ಮಹಿಳೆಯು ದೂರಿನಲ್ಲಿ ಹೇಳಿದ್ದರು. ವಿವಾಹಿತೆಯು ಸದ್ಯ ಪತಿಯೊಂದಿಗೆ ವಾಸವಿಲ್ಲ.

'ಮಹಿಳೆಯು ದೂರಿನಲ್ಲಿ ದೌರ್ಜನ್ಯವಾಗಿದೆ ಎಂದಷ್ಟೇ ಹೇಳಿದ್ದಾರೆ. ಆದರೆ, ಯಾವ ರೀತಿಯ ದೌರ್ಜನ್ಯವಾಗಿದೆ ಎಂದು ವಿವರಿಸಿಲ್ಲ' ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

ಮಹಿಳೆಯು ಆಕೆಯ ಪತಿ ಕುರಿತು ಮಾಡಿದ ಆರೋಪವು ಸೆಕ್ಷನ್ 498ಎ ಅಡಿ ಬರುವುದಿಲ್ಲ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಾಲಯವು, ಎಫ್‌ಐಆರ್ ರದ್ದು ಮಾಡಬೇಕು ಎಂದು ವಿವಾಹಿತೆಯ ಪತಿ ಮತ್ತು ಆತನ ಪೋಷಕರು ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿತು.

ಕೋರ್ಟ್ ಹೇಳಿದ್ದೇನು?

- ಮನೆಗೆಲಸ ಮಾಡುವ ಇಚ್ಛೆ ಇಲ್ಲದಿದ್ದರೆ, ಮದುವೆಗೂ ಮೊದಲೇ ಇದನ್ನು ತಿಳಿಸಬೇಕಿತ್ತು. ಆಗ ಮದುವೆಯ ಕುರಿತು ಹುಡುಗ ಮತ್ತು ಆತನ ಮನೆಯವರು ಮತ್ತೊಮ್ಮೆ ಯೋಚಿಸುತ್ತಿದ್ದರು.
- ಮಾನಸಿಕ ಮತ್ತು ದೈಹಿಕ ದೌರ್ಜನ್ಯ ಎಂದಷ್ಟೇ ಹೇಳಿದರೆ ಸಾಲದು. ಯಾವ ರೀತಿಯ ದೌರ್ಜನ್ಯ ಎಂದು ವಿವರಿಸಬೇಕು
- ಯಾವ ರೀತಿಯ ಕ್ರಿಯೆ (ಮಹಿಳೆ ಹೇಳುವ ದೌರ್ಜನ್ಯ) ನಡೆದಿದೆ ಎಂದು ವಿವರಿಸದಿದ್ದರೆ, ಪತಿ ನಡೆಸಿದ ಕ್ರಿಯೆಯು ದೌರ್ಜನ್ಯ ಹೌದೊ ಅಲ್ಲವೊ ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಮಿಸಳ್ ಹಾಪ್ಚಾ

ಬಿದಿರಿನಿಂದ ಬದುಕು ಕಟ್ಟುತ...

ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30

ಪ್ರಜಾವಾಣಿ ಕನ್ನಡ ಧ್ವನಿ

ಸಂವಾದ

ನಾಳೆ

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ

ಭಾಗವಹಿಸುವವರು:

ಮುರುಗೇಶ ನಿರಾಣಿ
ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

ಬಿ.ವಿ. ಗೋಪಾಲ ರೆಡ್ಡಿ
ಅಧ್ಯಕ್ಷ, ಎಫ್‌ಕೆಸಿಸಿಐ

ಮಧ್ಯಾಹ್ನ 3.30ರಿಂದ 4ರವರೆಗೆ

ಬಿಆರ್‌ಎಸ್– ಬಿಜೆಪಿ ವಾಕ್ಸಮರ

ಒಂದನೇ ಪುಟದಿಂದ...

ಈ ಮೂವರ ಪೈಕಿ ಇಬ್ಬರು ಮಂಗಳವಾರ ಮತ್ತೆ ಸಂಪರ್ಕಿಸಿ, ಮುಂದಿನ ಮಾತುಕತೆಗಾಗಿ ಮೊಯಿನಾಬಾದ್‌ನ ತಮ್ಮ ತೋಟದ ಮನೆಯಲ್ಲಿ ಭೇಟಿ ನಿಗದಿ ಮಾಡಿದ್ದರು. ಇನ್ನೂ ಕೆಲವು ಶಾಸಕರನ್ನು ಬಿಜೆಪಿ ಸೇರುವಂತೆ ಮಾಡಲು ಅವರು ಕೋರಿದ್ದರು. ಹಾಗೆ ಬರುವವರಿಗೆ ತಲಾ ₹50 ಕೋಟಿ ನೀಡುವ ಆಮಿಷವನ್ನೂ ಒಡ್ಡಿದ್ದರು ಎಂದು ರೋಹಿತ್ ರೆಡ್ಡಿ ದೂರಿನಲ್ಲಿ ಹೇಳಿರುವುದಾಗಿ ಎಫ್‌ಐಆರ್‌ನಲ್ಲಿ ಇದೆ.

ರೋಹಿತ್ ಅವರ ತೋಟದ ಮನೆಗೆ ನುಗ್ಗಿದ ಪೊಲೀಸರು ರಾಮಚಂದ್ರ ಭಾರತಿ, ನಂದಕುಮಾರ್ ಮತ್ತು ಸಿಂಹಯಾಜಿ ಸ್ವಾಮಿ ಅವರನ್ನು ವಶಕ್ಕೆ ಪಡೆದಿದ್ದಾರೆ. ಬಿಆರ್‌ಎಸ್ ಶಾಸಕರಾದ ಗುವ್ವಲ ಬಾಲರಾಜು, ರೇಗಾ ಕಾಂತಾ ರಾವ್, ಹರ್ಷವರ್ಧನ ರೆಡ್ಡಿ ಮತ್ತು ರೋಹಿತ್ ಅವರು ಆ ಸಂದರ್ಭದಲ್ಲಿ ತೋಟದ ಮನೆಯಲ್ಲಿ ಇದ್ದರು. ನಗದು ವಶ ಪಡಿಸಿಕೊಂಡಿರುವ ಕುರಿತು ಪೊಲೀಸರು ಏನನ್ನೂ ಹೇಳಿಲ್ಲ.

ಈ ನಾಲ್ವರು ಶಾಸಕರು ಕೆಸಿಆರ್ ಅವರ ನಿವಾಸಕ್ಕೆ ಧಾವಿಸಿದ್ದು, ಸರಣಿ ಸಭೆಗಳನ್ನು ನಡೆಸಲಾಗಿದೆ.

'ಶಾಸಕರಿಗೆ ಲಂಚ ಮತ್ತು ಪೊಲೀಸರ ತಡರಾತ್ರಿ ಕಾರ್ಯಾಚರಣೆ' ಪ್ರಕರಣವನ್ನು ಕೆಸಿಆರ್ ನಿರ್ದೇಶನದಂತೆ ಕಾರ್ಯರೂಪಕ್ಕೆ ತರಲಾಗಿದೆ. ಮುನುಗೋಡು ಉಪಚುನಾವಣೆಯಲ್ಲಿ ಸೋಲುವ ಭೀತಿಯಿಂದಾಗಿ ಅವರು ಹೀಗೆ ಮಾಡಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

'ನಾಚಿಕೆಯೇ ಇಲ್ಲದೆ ಈ ವಿಚಿತ್ರ ನಾಟಕವನ್ನು ಆಡಲಾಗಿದೆ. ನಗದು ಎಲ್ಲಿ ಹೋಯಿತು? ಹಣವು ಎಲ್ಲಿಂದ ಬಂತು ಪ್ರಗತಿ ಭವನದಿಂದಲೇ (ಕೆಸಿಆರ್ ನಿವಾಸ), ತೋಟದ ಮನೆಯಿಂದಲೇ, ಶಾಸಕರಿಂದಲೇ? ಪೊಲೀಸರು ಶಾಸಕರನ್ನು ಏಕೆ ತನಿಖೆಗೆ ಒಳಪಡಿಸಿಲ್ಲ ಎಂದು ಕೇಂದ್ರ ಸಚಿವ ಕಿಶನ್ ರೆಡ್ಡಿ ಪ್ರಶ್ನಿಸಿದ್ದಾರೆ.

ಚುನಾವಣೆಗೆ ಇನ್ನು ಒಂದು ವರ್ಷವಷ್ಟೇ ಇದೆ. ಇಂತಹ ಸಂದರ್ಭದಲ್ಲಿ ನಾಲ್ವರು ಶಾಸಕರನ್ನು ಸೆಳೆದುಕೊಂಡು ಏನು ಉಪಯೋಗ ಎಂದು ಸಿಕಂದರಾಬಾದ್ ಸಂಸದ ಕಿಶನ್ ರೆಡ್ಡಿ ಪ್ರಶ್ನಿಸಿದ್ದಾರೆ.

ಆರೋಪಿಗಳಿಗೆ ಬಿಜೆಪಿ ಜೊತೆ ಯಾವ ಸಂಬಂಧವೂ ಇಲ್ಲ. ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಅಥವಾ ಸಿಬಿಐಯಿಂದ ಈ ಪ್ರಕರಣದ ತನಿಖೆ ನಡೆಸುತ್ತೇವೆ. ಕೆಸಿಆರ್ ಅವರ ಷಡ್ಯಂತ್ರ ಬಯಲಾಗಲಿದೆ ಎಂದು ಕಿಶನ್ ಹೇಳಿದ್ದಾರೆ.

ಕೇರಳದಲ್ಲಿ ಹಕ್ಕಿ ಜ್ವರ: ಕೇಂದ್ರ ತಂಡ ನಿಯೋಜನೆ

ನವದೆಹಲಿ (ಪಿಟಿಐ): ರಾಜ್ಯದಲ್ಲಿ ಹಕ್ಕಿ ಜ್ವರ ಹರಡುತ್ತಿರುವುದನ್ನು ಪರಿಶೀಲಿಸಲು ಕೇಂದ್ರ ಆರೋಗ್ಯ ಸಚಿವಾಲಯವು ಕೇರಳಕ್ಕೆ ಉನ್ನತ ಮಟ್ಟದ ತಂಡವನ್ನು ನಿಯೋಜಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬೆಂಗಳೂರಿನಲ್ಲಿರುವ ಪ್ರಾದೇಶಿಕ ಕಚೇರಿಯ ಹಿರಿಯ ಪ್ರಾದೇಶಿಕ ನಿರ್ದೇಶಕ ಡಾ. ರಾಜೇಶ್ ಕೆದಮನಿ ನೇತೃತ್ವದ ಏಳು ಸದಸ್ಯರ ತಂಡವು ವಿವರವಾಗಿ ತನಿಖೆ ನಡೆಸಿ, ಶಿಫಾರಸುಗಳೊಂದಿಗೆ ವರದಿ ಸಲ್ಲಿಸುತ್ತದೆ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಅಲಪ್ಪುಳ ಜಿಲ್ಲೆಯಲ್ಲಿ 20,000 ಕ್ಕೂ ಹೆಚ್ಚು ಪಕ್ಷಿಗಳನ್ನು ಹತ್ಯೆ ಮಾಡಲು ಅಧಿಕಾರಿಗಳು ಪ್ರಾರಂಭಿಸಿದರು.

ಬಿಡುವಿನ ಬಳಿಕ ಭಾರತ್ ಜೋಡೊ ಯಾತ್ರೆ ಪುನರಾರಂಭ

ಹೈದರಾಬಾದ್ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆ ನಾಲ್ಕು ದಿನಗಳ ಬಿಡುವಿನ ಬಳಿಕ ಗುರುವಾರ ತೆಲಂಗಾಣದ ನಾರಾಯಣಪೇಟ್ ಜಿಲ್ಲೆಯ ಮಕ್ತಾಲ್‌ನಿಂದ ಪುನಾರಂಭವಾಯಿತು.

ಬೆಳಿಗ್ಗೆ 6.30ರಿಂದ ಯಾತ್ರೆಯನ್ನು ಆರಂಭಿಸಲಾಯಿತು. ರಾಜ್ಯದಲ್ಲಿ ನಡೆಯುತ್ತಿರುವ ಯಾತ್ರೆಯಲ್ಲಿ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಎ.ರೇವಂತ್ ರೆಡ್ಡಿ, ಸಂಸದ ಉತ್ತಮ ಕುಮಾರ್ ರೆಡ್ಡಿ, ಸಿಎಲ್‌ಪಿ ನಾಯಕ ಭಟ್ಟಿ ವಿಕ್ರಮಾರ್ಕ ಮತ್ತು ಪಕ್ಷದ ಅಸಂಖ್ಯಾತ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಯಾತ್ರೆಯು ಅ.23ರಂದು ಕರ್ನಾಟಕ ಮೂಲಕವಾಗಿ ರಾಜ್ಯಕ್ಕೆ ಪ್ರವೇಶಿಸಿತ್ತು. ದೀಪಾವಳಿ ಹಿನ್ನೆಲೆಯಲ್ಲಿ ಅ.23ರಿಂದ 26ರವರೆಗೆ ಬಿಡುವು ನೀಡಲಾಗಿತ್ತು. ಈ ವೇಳೆ ನವದೆಹಲಿಗೆ ತೆರಳಿದ್ದ ರಾಹುಲ್ ಗಾಂಧಿ ಬುಧವಾರ ರಾತ್ರಿ ತೆಲಂಗಾಣಕ್ಕೆ ಮರಳಿದರು.

ರಾಜ್ಯದಲ್ಲಿ 16 ದಿನಗಳ ಕಾಲ ಪಾದಯಾತ್ರೆ ನಡೆಯಲಿದ್ದು, 19 ವಿಧಾನಸಭಾ ಕ್ಷೇತ್ರ ಮತ್ತು ಏಳು ಲೋಕಸಭಾ ಕ್ಷೇತ್ರಗಳಲ್ಲಿ ರಾಹುಲ್ ಗಾಂಧಿ ಸಂಚರಿಸಲಿದ್ದಾರೆ. ನವೆಂಬರ್ 7ರಂದು ಯಾತ್ರೆಯು ಮಹಾರಾಷ್ಟ್ರವನ್ನು ತಲುಪಲಿದೆ.

ಭಾರತ್ ಜೋಡೊ ಯಾತ್ರೆಯ ವೇಳೆ ತೆಲಂಗಾಣದ ನಾರಾಯಣಪೇಟ್ ಜಿಲ್ಲೆಯಲ್ಲಿ ರಾಹುಲ್ ಗಾಂಧಿ ಡೊಳ್ಳು ಬಾರಿಸಿದರು –ಪಿಟಿಐ ಚಿತ್ರ

ಕಾಂಗ್ರೆಸ್ ಉನ್ನತ ಸಮಿತಿಯಲ್ಲಿ ರಾಜ್ಯದ ಮೂವರಿಗೆ ಸ್ಥಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಖಿಲ ಭಾರತ ಕಾಂಗ್ರೆಸ್ ಸಮಿತಿಯ (ಎಐಸಿಸಿ) ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು 47 ನಾಯಕರನ್ನು ಒಳಗೊಂಡ ಉನ್ನತ ಸಮಿತಿಯನ್ನು ರಚಿಸಿದ್ದು, ಕರ್ನಾಟಕದ ಮೂವರು ಮುಖಂಡರು ಸ್ಥಾನ ಪಡೆದಿದ್ದಾರೆ.

ಸೋನಿಯಾ ಗಾಂಧಿ, ಮನಮೋಹನ್ ಸಿಂಗ್, ರಾಹುಲ್ ಗಾಂಧಿ ಸೇರಿದಂತೆ ಪಕ್ಷದ ಪ್ರಮುಖ ನಾಯಕರು ಈ ಸಮಿತಿಯಲ್ಲಿ ಇದ್ದಾರೆ. ಕರ್ನಾಟಕದ ಕೆ.ಎಚ್.ಮುನಿಯಪ್ಪ, ಎಚ್.ಕೆ.ಪಾಟೀಲ, ದಿನೇಶ್ ಗುಂಡೂರಾವ್ ಅವರಿಗೆ ಸಮಿತಿಯಲ್ಲಿ ಸ್ಥಾನ ನೀಡಲಾಗಿದೆ. ಆದರೆ, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ ಗೆಹಲೋತ್, ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶಶಿ ತರೂರ್ ಅವರಿಗೆ ಸಮಿತಿಯಲ್ಲಿ ಸ್ಥಾನ ನೀಡದೆ ಇರುವುದು ಪಕ್ಷದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಪಕ್ಷಕ್ಕೆ ನೂತನ ಅಧ್ಯಕ್ಷರು ನೇಮಕವಾದ ಬೆನ್ನಲ್ಲೇ, ಪಕ್ಷದ ಅತ್ಯುನ್ನತ ತೀರ್ಮಾನಗಳನ್ನು ತೆಗೆದುಕೊಳ್ಳುವ ಕಾರ್ಯಕಾರಿ ಸಮಿತಿಯನ್ನು (ಸಿಡಬ್ಲ್ಯುಸಿ) ವಿಸರ್ಜಿಸಲಾಗಿತ್ತು. ಉನ್ನತ ಸಮಿತಿಯು ಕಾರ್ಯಕಾರಿ ಸಮಿತಿಯ ಜಾಗದಲ್ಲಿ ಕೆಲಸ ಮಾಡಲಿದೆ. ಈ ಸಮಿತಿಯು ಸರ್ವ ಸದಸ್ಯರ ಅಧಿವೇಶನದ ಸ್ಥಳ ಹಾಗೂ ದಿನಾಂಕವನ್ನು ನಿಗದಿ ಮಾಡಲಿದೆ. ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಯಾತ್ರೆ ಮುಗಿದ ನಂತರ ಸರ್ವ ಸದಸ್ಯರ ಅಧಿವೇಶನ ನಡೆಯಲಿದೆ. ಈ ಸಭೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಮಧ್ಯಸ್ಥಿಕೆ ವಹಿಸಲು ವಿಶ್ವಸಂಸ್ಥೆಗೆ ಹುರಿಯತ್ ಮನವಿ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ಹಿಂತೆಗೆದುಕೊಂಡ ನಂತರ ಕಣಿವೆ ರಾಜ್ಯದಲ್ಲಿ ಭದ್ರತಾ ಪಡೆಗಳಿಂದ ಮಾನವ ಹಕ್ಕುಗಳ ಉಲ್ಲಂಘನೆ ತಡೆಯಲು ವಿಶ್ವಸಂಸ್ಥೆ (ಯುಎನ್) ಮಧ್ಯಸ್ಥಿಕೆ ವಹಿಸುವಂತೆ ಮೊದಲ ಬಾರಿಗೆ ಹುರಿಯತ್ ಕಾನ್ಫರೆನ್ಸ್ ಗುರುವಾರ ಮನವಿ ಮಾಡಿದೆ.

ಮಿರ್ವೈಜ್ ಉಮೇರ್ ಫಾರೂಕ್ ನೇತೃತ್ವದ ಹುರಿಯತ್ ವಕ್ತಾರ ಹೇಳಿಕೆ ನೀಡಿದ್ದು, 'ಜನರನ್ನು ಹಿಂಸಿಸಲು ಮತ್ತು ಭಯ ಮೂಡಿಸಲು ಬಂಧನವನ್ನು ಆಯುಧವಾಗಿ ಮಾಡಿಕೊಳ್ಳಲಾಗಿದೆ. ಧಾರ್ಮಿಕ ವಿದ್ವಾಂಸರು ಸೇರಿದಂತೆ ನೂರಾರು ಕಾಶ್ಮೀರಿಗಳು ತಮ್ಮ ವಯಸ್ಸು ಮತ್ತು ಹಿನ್ನೆಲೆ ಲೆಕ್ಕಿಸದೆ, ವಿಚಾರಣೆ ವಿಳಂಬದಿಂದ ಕಠಿಣ ಕಾನೂನುಗಳ ಅಡಿ ಜೈಲು ಮತ್ತು ಬಂಧನ ಕೇಂದ್ರಗಳಲ್ಲಿ ಕೊಳೆಯುತ್ತಿದ್ದಾರೆ' ಎಂದು ಅವರು ಹೇಳಿದ್ದಾರೆ.

ನಿರೀಕ್ಷಣಾ ಜಾಮೀನು: ಹೈಕೋರ್ಟ್‌ಗಳ ಪ್ರವೃತ್ತಿಗೆ 'ಸುಪ್ರೀಂ' ಅಸಮಾಧಾನ

ನವದೆಹಲಿ (ಪಿಟಿಐ): ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ವಶಕ್ಕೆ ಪಡೆಯುವ ಅಗತ್ಯವಿಲ್ಲ ಎಂಬ ಅಂಶವನ್ನಷ್ಟೇ ಪರಿಗಣಿಸಿ ನಿರೀಕ್ಷಣಾ ಜಾಮೀನು ಮಂಜೂರು ಮಾಡುವ ಹೈಕೋರ್ಟ್‌ಗಳ ಪ್ರವೃತ್ತಿ ಕುರಿತು ಸುಪ್ರೀಂ ಕೋರ್ಟ್ ಗುರುವಾರ ಅಸಮಾಧಾನ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪರ್ದಿವಾಲಾ ಅವರಿದ್ದ ಪೀಠವು, 'ಆರೋಪಿಯನ್ನು ವಶಕ್ಕೆ ನೀಡುವಂತೆ ಕೋರದಿರುವ ಅಂಶವನ್ನೇ ಆಧರಿಸಿ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗುತ್ತದೆ. ಇದು, ಕಾನೂನಿನ ಗಂಭೀರವಾದ ತಪ್ಪುಗ್ರಹಿಕೆ' ಎಂದೂ ಹೇಳಿದೆ.



भारत इलेक्ट्रॉनिक्स BHARAT ELECTRONICS
QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045. ಇ-ಮೇಲ್: secretary@bel.co.in,
ವೆಬ್‌ಸೈಟ್: www.bel-india.in, ಫೋನ್: 080-25039300, ಫ್ಯಾಕ್ಸ್: 080-25039266

30ನೇ ಸೆಪ್ಟೆಂಬರ್ 2022ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ಅರ್ಧ ವಾರ್ಷಿಕ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕರಿಸಿದ ಲೆಕ್ಕ ಪರಿಶೋಧಿತವಾಗದ ಲೆಕ್ಕ ಫಲಿತಾಂಶಗಳ ಸಾರಾಂಶ

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಸ್ಟ್ಯಾಂಡ್ ಅಲೋನ್						ಕ್ರೋಢೀಕೃತ					
		ತ್ರೈಮಾಸಿಕ ಅಂತ್ಯಗೊಂಡ			ಅರ್ಧ ವರ್ಷಾಂತ್ಯಕ್ಕೆ		ವರ್ಷಾಂತ್ಯಕ್ಕೆ	ತ್ರೈಮಾಸಿಕ ಅಂತ್ಯಗೊಂಡ			ಅರ್ಧ ವರ್ಷಾಂತ್ಯಕ್ಕೆ		ವರ್ಷಾಂತ್ಯಕ್ಕೆ
		30.09.2022	30.06.2022	30.09.2021	30.09.2022	30.09.2021	31.03.2022	30.09.2022	30.06.2022	30.09.2021	30.09.2022	30.09.2021	31.03.2022
		(ಪರಿಶೋಧಿತ ವಲ್ಲದ)			(ಪರಿಶೋಧಿತ ವಲ್ಲದ)		(ಪರಿಶೋಧಿತ)	(ಪರಿಶೋಧಿತ ವಲ್ಲದ)			(ಪರಿಶೋಧಿತ ವಲ್ಲದ)		(ಪರಿಶೋಧಿತ)
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	3,94,583	3,11,278	3,66,056	7,05,861	5,29,515	15,31,376	3,96,159	3,14,061	3,67,805	7,10,220	5,32,672	15,36,818
2.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಅವಧಿಯ ನಿವ್ವಳ ಲಾಭ	82,486	57,810	82,774	1,40,296	84,291	3,15,780	83,087	50,424	82,650	1,33,511	84,426	3,16,624
3.	ತೆರಿಗೆ ಮುಂಚಿನ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	82,486	57,810	82,774	1,40,296	84,291	3,15,780	83,087	50,424	82,650	1,33,511	84,426	3,16,624
4.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	61,105	43,149	61,260	1,04,254	62,375	2,34,893	62,440	36,633	62,461	99,073	64,902	2,40,022
5.	ಒಟ್ಟುಸಮಗ್ರ ಅವಧಿಯ ಆದಾಯ [ಅವಧಿಯ ಲಾಭ ಸಹಿತ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	55,806	50,520	63,184	1,06,326	67,640	2,19,972	57,141	44,005	64,385	1,01,146	70,168	2,25,105
6.	ಪಾವತಿಸಿದ ಇಕ್ವಿಟಿ ಷೇರು ಬಂಡವಾಳ	73,098	24,366	24,366	73,098	24,366	24,366	73,098	24,366	24,366	73,098	24,366	24,366
7.	ಮರುಮೌಲ್ಯಗೊಳಿಸಿದ ಮೀಸಲು ನಿಧಿಯ ಹೊರತಾದ ಇತರೆ ಇಕ್ವಿಟಿಗಳು	-	-	-	-	-	11,74,060	-	-	-	-	-	12,04,227
8.	ಪ್ರತಿ ಷೇರಿನ ಗಳಿಕೆ (₹1/- ರಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರಿಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ಪರಿವರ್ತಿತ (₹ ನಲ್ಲಿ)	0.84	0.59	0.84	1.43	0.85	3.21	0.86	0.50	0.85	1.36	0.89	3.28

ಟಿಪ್ಪಣಿಗಳು:

1. ಈ ಮೇಲಿನವುಗಳು ಸೆಬಿಯ ನಿಯಂತ್ರಣ ಆಧಿನಿಯಮ 33 (ಪಟ್ಟಿ ನಿರ್ಬಂಧ ಮತ್ತು ಪ್ರಕಟಗೊಳಿಸಿದ ಅಗತ್ಯಗಳು), 2015 ರ ಅಡಿಯಲ್ಲಿ ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ವಾರ್ಷಿಕ ಹಣಕಾಸಿನ ವಿಸ್ತೃತ ರೂಪವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (**www.bseindia.com** ಮತ್ತು **www.nseindia.com**) ಮತ್ತು ಕಂಪೆನಿಯ ವೆಬ್‌ಸೈಟ್ (**www.bel-india.in**) ನಲ್ಲಿಯೂ ಲಭ್ಯವಿದೆ.
2. ದಿನಾಂಕ 25 ಅಕ್ಟೋಬರ್, 2022 ರಂದು ನಡೆದ ಸಭೆಯಲ್ಲಿ ಲೆಕ್ಕ ಪರಿಶೋಧನಾ ಸಮಿತಿಯ ಮೂಲಕ ಈ ಮೇಲಿನ ಹಣಕಾಸಿನ ಫಲಿತಾಂಶಗಳ ವಿವರಣೆಯನ್ನು ಅವಲೋಕನ ಮಾಡಲಾಯಿತು ಮತ್ತು ಅದನ್ನು ದಿನಾಂಕ 27 ಅಕ್ಟೋಬರ್, 2022 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಯಿತು.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ದಿನೇಶ್ ಕುಮಾರ್ ಬತ್ರ
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು (ಹೆಚ್ಚುವರಿ ಪ್ರಭಾರಿ)

ಸ್ಥಳ: ಚೆನ್ನೈ
ದಿನಾಂಕ: 27 ಅಕ್ಟೋಬರ್, 2022

ಸಿಡ್ನಿಯಲ್ಲಿ ಸೂರ್ಯ ಸಿಡಿಲಬ್ಬರ

ರೋಹಿತ್, ವಿರಾಟ್ ಅರ್ಧಶತಕ; ನೆದರ್ಲೆಂಡ್ಸ್ ವಿರುದ್ಧ ಭಾರತಕ್ಕೆ ಗೆಲುವು

• ಆರ್.ಕೌಶಿಕ್

ನೆದರ್ಲೆಂಡ್ಸ್ ವಿರುದ್ಧ ಗೆಲುವು ಪಡೆದ ಭಾರತ ತಂಡದ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಸಿಡ್ನಿ: ಹೋದ ಭಾನುವಾರ ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯ 'ಫೈನಲ್' ಮಾದರಿಯ ಸಂಚಲನ ಸೃಷ್ಟಿಸಿತ್ತು. ನಾಲ್ಕು ದಿನಗಳು ಉರುಳಿದರೂ ಆ ಪಂದ್ಯದ ರೋಚಕ ಫಲಿತಾಂಶದ ಗುಂಗು ಇನ್ನೂ ಆವರಿಸಿದೆ. ಆದರೆ, ಗುರುವಾರ ಸಿಡ್ನಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅಂತಹ ಸಂಚಲನ ಇರಲಿಲ್ಲ.

ಇಲ್ಲಿ ನಡೆದ ಭಾರತ ಮತ್ತು ನೆದರ್ಲೆಂಡ್ಸ್ ನಡುವಣ ಪಂದ್ಯದಲ್ಲಿ ಮೊದಲ ಎಸೆತ ಪ್ರಯೋಗವಾಗುವ ಮುನ್ನವೇ ಅಭಿಮಾನಿಗಳು ಫಲಿತಾಂಶವನ್ನು ಊಹಿಸಿದಂತಿತ್ತು. ಭಾವೋದ್ವೇಗಗಳಿಲ್ಲದ ನಿರುಮ್ಮಳ ವಾತಾವರಣದಲ್ಲಿ ನಡೆದ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗವು 56 ರನ್‌ಗಳಿಂದ ಜಯಿಸಿತು.

ಐಸಿಸಿಯ ಟಿ20 ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಭಾರತ ಹಾಗೂ 17ನೇ ಸ್ಥಾನದಲ್ಲಿರುವ ನೆದರ್ಲೆಂಡ್ಸ್ ನಡುವಣದ ಪಂದ್ಯವನ್ನು 36,426 ಅಭಿಮಾನಿಗಳು ಕಣ್ತುಂಬಿಕೊಂಡರು. ಟಾಸ್ ಜಯಿಸಿ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅರ್ಧಶತಕ ಮತ್ತು ಟೂರ್ನಿಯಲ್ಲಿ ಎರಡನೇ ಅಜೇಯ ಅರ್ಧಶತಕ ಗಳಿಸಿದ ವಿರಾಟ್ ಕೊಹ್ಲಿಯ ಆಟಕ್ಕೆ ಪ್ರೇಕ್ಷಕರು ಮನಸೋತರು.

ದೀಪಾವಳಿ ಹಬ್ಬದ ಮರುದಿನವೂ ಸಿಕ್ಸರ್, ಬೌಂಡರಿಗಳನ್ನು ಪಟಾಕಿಗಳಂತೆ ಸಿಡಿಸಿದ ಸೂರ್ಯಕುಮಾರ್ ಯಾದವ್ ಪ್ರಜ್ವಲಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 179 ರನ್ ಗಳಿಸಿತು. ಅದಕ್ಕುತ್ತರವಾಗಿ ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 123 ರನ್ ಗಳಿಸಲಷ್ಟೇ ಶಕ್ತವಾಯಿತು.

ಎಸ್‌ಸಿಜಿಯ ಪಿಚ್‌ನಲ್ಲಿ ಚೆಂಡು ನಿಧಾನಗತಿಯಲ್ಲಿ ಚಲಿಸುವುದರಿಂದ ಬ್ಯಾಟಿಂಗ್ ಸುಲಭವಾಗಿರಲಿಲ್ಲ. ಆದರೆ ಸೂರ್ಯಕುಮಾರ್ ಇದಾವುದನ್ನೂ ಲೆಕ್ಕಿಸಲಿಲ್ಲ. ಪ್ರಸಕ್ತ ಕ್ಯಾಲೆಂಡರ್ ವರ್ಷದಲ್ಲಿ ಅತಿ ಹೆಚ್ಚು ರನ್ ಗಳಿಸಿರುವ ಸೂರ್ಯ ಇಲ್ಲಿ 25 ಎಸೆತಗಳಲ್ಲಿ 51 ರನ್ ಗಳಿಸಿದರು.

ಒಂಬತ್ತು ಓವರ್‌ಗಳಲ್ಲಿ ತಂಡದ ಮೊತ್ತವು ಒಂದು ವಿಕೆಟ್‌ಗೆ 53 ರನ್‌ಗಳಷ್ಟೇ ಆಗಿತ್ತು. ನಾಯಕ ರೋಹಿತ್ ಹಾಗೂ ವಿರಾಟ್ ಅರ್ಧಶತಕಗಳು ರನ್ ಗಳಿಕೆ ಹೆಚ್ಚಿಸಲು ನೆರವಾದವು. ಅದರಲ್ಲೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 95 ರನ್ ಸೇರಿಸಿದ್ದು ಮೊತ್ತ ಹೆಚ್ಚಲು ಕಾರಣವಾಯಿತು. ನೆದರ್ಲೆಂಡ್ಸ್ ಬೌಲರ್‌ಗಳು ಕೊನೆಯ 11 ಓವರ್‌ಗಳಲ್ಲಿ 126 ರನ್‌ಗಳನ್ನು ಕೊಟ್ಟರು. ಆರಂಭಿಕ ಬ್ಯಾಟರ್ ರಾಹುಲ್ ವೈಫಲ್ಯ ಮುಂದುವರಿಯಿತು.

ಗುರಿ ಬೆನ್ನಟ್ಟಿದ ನೆದರ್ಲೆಂಡ್ಸ್ ತಂಡವು ಭಾರತದ ಬೌಲಿಂಗ್ ದಾಳಿ ಎದುರಿಸಲು ಹರಸಾಹಸಪಟ್ಟಿತು. ಭುವನೇಶ್ವರ್ ಕುಮಾರ್ ತಮ್ಮ ಮೊದಲ ಸ್ಪೆಲ್ ನಲ್ಲಿ (2–2–0–1) ನೆದರ್ಲೆಂಡ್ಸ್‌ಗೆ ಕಡಿವಾಣ ಹಾಕುವ ಅಭಿಯಾನ ಆರಂಭಿಸಿದರು. ಅರ್ಷದೀಪ್ ಸಿಂಗ್ (37ಕ್ಕೆ2), ಅಕ್ಷರ್ ಪಟೇಲ್ (18ಕ್ಕೆ2) ಹಾಗೂ ಆರ್. ಅಶ್ವಿನ್ (21ಕ್ಕೆ2) ತಮ್ಮ ಕೈಚಳಕ ಮೆರೆದರು. ಇದರೊಂದಿಗೆ ಸೂಪರ್ 12ರ ಹಂತದ ಎರಡನೇ ಗುಂಪಿನ ಅಂಕಪಟ್ಟಿಯಲ್ಲಿ ಭಾರತವು ಮೊದಲ ಸ್ಥಾನಕ್ಕೇರಿತು.

ಸ್ಕೋರ್ ಕಾರ್ಡ್

ಭಾರತ 2 ಕ್ಕೆ 179 (20 ಓವರ್)
ರಾಹುಲ್ ಎಲ್‌ಬಿಡಬ್ಲ್ಯು ಬಿ ಮೀಕೆರೆನ್ 9 (12 ಎ., 4X1), ರೋಹಿತ್ ಸಿ ಆ್ಯಕರ್‌ಮನ್ ಬಿ ಕ್ಲಾಸೆನ್ 53 (39 ಎ., 4X4, 6X3), ವಿರಾಟ್ ಕೊಹ್ಲಿ ಔಟಾಗದೆ 62 (44 ಎ., 4X3, 6X2), ಸೂರ್ಯಕುಮಾರ್ ಯಾದವ್ ಔಟಾಗದೆ 51 (25 ಎ., 4X7, 6X1)
ಇತರೆ: 4 (ಬೈ-1, ವೈಡ್-3)
ವಿಕೆಟ್ ಪತನ: 1-11 (ಕೆ.ಎಲ್. ರಾಹುಲ್; 2.4), 2-84 (ರೋಹಿತ್ ಶರ್ಮ; 11.6)
ಬೌಲಿಂಗ್: ಫ್ರೆಡ್ ಕ್ಲಾಸೆನ್ 4-0-33-1, ಟಿಮ್ ಪ್ರಿಂಗಲ್ 4-0-30-0, ಪಾಲ್ ವಾನ್ ಮೀಕೆರೆನ್ 4-0-32-1, ಬಸ್ ಡಿ ಲೀಡ್ 3-0-33-0, ಲೋಗನ್ ವಾನ್ ಬೀಕ್ 4-0-45-0, ಶಾರಿಜ್ ಅಹ್ಮದ್ 1-0-5-0

ನೆದರ್ಲೆಂಡ್ಸ್ 9 ಕ್ಕೆ 123 (20 ಓವರ್)
ವಿಕ್ರಮ್‌ಜಿತ್ ಬಿ ಭುವನೇಶ್ವರ್ 1 (9 ಎ.), ಒಡಾಡ್ ಬಿ ಅಕ್ಷರ್ 16 (10 ಎ., 4X3), ಲೀಡ್ ಸಿ ಪಾಂಡ್ಯ ಬಿ ಅಕ್ಷರ್ 16 (23 ಎ.), ಆ್ಯಕರ್‌ಮನ್ ಸಿ ಅಕ್ಷರ್ ಬಿ ಅಶ್ವಿನ್ 17 (21 ಎ., 4X1), ಕೂಪರ್ ಸಿ ಹೂಡಾ (ಬದಲಿ ಆಟಗಾರ) ಬಿ ಅಶ್ವಿನ್ 9 (12 ಎ.), ಎಡ್ವರ್ಡ್ಸ್ ಸಿ ಹೂಡಾ (ಬದಲಿ ಆಟಗಾರ) ಬಿ ಭುವನೇಶ್ವರ್ 5 (8 ಎ.), ಪ್ರಿಂಗಲ್ ಸಿ ಕೊಹ್ಲಿ ಬಿ ಶಮಿ 20 (15 ಎ., 4X1, 6X1), ಬೀಕ್ ಸಿ ಕಾರ್ತಿಕ್ ಬಿ ಅರ್ಷದೀಪ್ 3 (5 ಎ.), ಶಾರಿಜ್ ಔಟಾಗದೆ 16 (11 ಎ., 4X2), ಕ್ಲಾಸೆನ್ ಎಲ್‌ಬಿಡಬ್ಲ್ಯು ಬಿ ಅರ್ಷದೀಪ್ 0 (1 ಎ.), ಮೀಕೆರೆನ್ ಔಟಾಗದೆ 14 (6 ಎ., 4X3)
ಇತರೆ: 6 (ಲೆಗ್‌ಬೈ-2, ನೋಬಾಲ್-1, ವೈಡ್-3)
ವಿಕೆಟ್ ಪತನ: 1-11 (ವಿಕ್ರಮ್‌ಜಿತ್ ಸಿಂಗ್; 2.2), 2-20 (ಮ್ಯಾಕ್ಸ್ ಒಡಾಡ್; 4.2), 3-47 (ಬಸ್ ಡಿ ಲೀಡ್; 9.2), 4-62 (ಕಾಲಿನ್ ಆ್ಯಕರ್‌ಮನ್; 12.1), 5-63 (ಟಾಮ್ ಕೂಪರ್; 12.4), 6-87 (ಟಿಮ್ ಪ್ರಿಂಗಲ್; 15.4), 7-89 (ಸ್ಕಾಟ್ ಎಡ್ವರ್ಡ್ಸ್; 16.3), 8-101 (ಲೋಗನ್ ವಾನ್ ಬೀಕ್; 17.5), 9-101 (ಫ್ರೆಡ್ ಕ್ಲಾಸೆನ್; 17.6)
ಬೌಲಿಂಗ್: ಭುವನೇಶ್ವರ್ ಕುಮಾರ್ 3-2-9-2, ಅರ್ಷದೀಪ್ ಸಿಂಗ್ 4-0-37-2, ಮೊಹಮ್ಮದ್ ಶಮಿ 4-0-27-1, ಅಕ್ಷರ್ ಪಟೇಲ್ 4-0-18-2, ಹಾರ್ದಿಕ್ ಪಾಂಡ್ಯ 1-0-9-0, ಆರ್. ಅಶ್ವಿನ್ 4-0-21-2

ಫಲಿತಾಂಶ: ಭಾರತಕ್ಕೆ 56 ರನ್‌ಗಳ ಗೆಲುವು

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	2	1	0	1	3	4.450
ಶ್ರೀಲಂಕಾ	2	1	1	0	2	0.450
ಇಂಗ್ಲೆಂಡ್	2	1	1	0	2	0.239
ಐರ್ಲೆಂಡ್	2	1	1	0	2	-1.169
ಆಸ್ಟ್ರೇಲಿಯಾ	2	1	1	0	2	-1.155
ಅಫ್ಗಾನಿಸ್ತಾನ	2	0	1	1	1	-0.620
ಗುಂಪು 2						
ಭಾರತ	2	2	0	0	4	1.425
ದಕ್ಷಿಣ ಆಫ್ರಿಕಾ	2	1	0	1	3	5.200
ಜಿಂಬಾಬ್ವೆ	2	1	0	1	3	0.050
ಬಾಂಗ್ಲಾದೇಶ	2	1	1	0	2	-2.375
ಪಾಕಿಸ್ತಾನ	2	0	2	0	0	-0.050
ನೆದರ್ಲೆಂಡ್ಸ್	2	0	2	0	0	-1.625

ಇಂದಿನ ಪಂದ್ಯಗಳು

ಅಫ್ಗಾನಿಸ್ತಾನ– ಐರ್ಲೆಂಡ್
ಮೆಲ್ಬರ್ನ್, ಆರಂಭ: ಬೆಳಿಗ್ಗೆ 9.30

ಆಸ್ಟ್ರೇಲಿಯಾ– ಇಂಗ್ಲೆಂಡ್
ಮೆಲ್ಬರ್ನ್, ಆರಂಭ: ಮಧ್ಯಾಹ್ನ 1.30

ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಸಂಕ್ಷಿಪ್ತ ಸುದ್ದಿ

ಸ್ಯಾಂಡ್‌ವಿಚ್ ನಿರಾಕರಿಸಿದ ಭಾರತದ ಆಟಗಾರರು

ಕೋಲ್ಕತ್ತ (ಪಿಟಿಐ): ಬುಧವಾರ ಭಾರತ ತಂಡದ ಅಭ್ಯಾಸದ ನಂತರ ನೀಡಲಾದ ಲಘು ಆಹಾರದ ಗುಣಮಟ್ಟ ಚೆನ್ನಾಗಿರಲಿಲ್ಲವೆಂದು ಆಟಗಾರರು ದೂರಿದ್ದಾರೆ. ಈ ಕುರಿತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ತ್ವರಿತವಾಗಿ ಪರಿಹಾರ ಕಂಡುಕೊಳ್ಳುವ ವಿಶ್ವಾಸ ತಮಗಿದೆ ಎಂದು ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಹೇಳಿದ್ದಾರೆ.

ಭಾರತ ತಂಡವು ಅಭ್ಯಾಸ ಮುಗಿಸಿದ ನಂತರ ನೀಡಲಾದ ಸ್ಯಾಂಡ್‌ವಿಚ್ ಹಾಗೂ ತಿನಿಸುಗಳು ತಣ್ಣಗಾಗಿದ್ದವು. ತಾಜಾ ಇರಲಿಲ್ಲವೆಂಬ ಕಾರಣದಿಂದ ಆಟಗಾರರು ಅವುಗಳನ್ನು ತಿನ್ನಲು ನಿರಾಕರಿಸಿದ್ದರು. ತಾವು ತಂಗಿದ್ದ ಹೋಟೆಲ್‌ಗೆ ಮರಳಿ ಊಟ ಮಾಡಿದ್ದರು. ತಂಡದ ಮೂಲಗಳು ಈ ಕುರಿತು ಆಯೋಜಕರಿಗೆ ದೂರು ನೀಡಿದ್ದರು ಎನ್ನಲಾಗಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಬಿಸಿಸಿಐನ ನಿಕಟಪೂರ್ವ ಅಧ್ಯಕ್ಷ ಗಂಗೂಲಿ, 'ಈ ಬಗ್ಗೆ ಮಂಡಳಿಯು ಸೂಕ್ತವಾಗಿ ಕ್ರಮಕೈಗೊಳ್ಳುವ ಭರವಸೆ ಇದೆ' ಎಂದರು.

ಫಿಫಾ ವಿಶ್ವಕಪ್: ಪ್ರಶಸ್ತಿಗೆ ಕೊಲಂಬಿಯ – ಸ್ಪೇನ್ ಸೆಣಸು

ಮಡಗಾಂವ್ (ಪಿಟಿಐ): ಹಾಲಿ ಚಾಂಪಿಯನ್ ಸ್ಪೇನ್ ಮತ್ತು ಕೊಲಂಬಿಯಾ ತಂಡಗಳು ಫಿಫಾ 17 ವರ್ಷ ವಯಸ್ಸಿನೊಳಗಿನ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ.

ನೆಹರು ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ಸ್ಪೇನ್ ಏಕೈಕ ಗೋಲಿನಿಂದ ಜರ್ಮನಿ ತಂಡವನ್ನು ಮಣಿಸಿತು. ಲೂಸಿಯಾ ಸೊರಾಲೆಸ್ ಅವರು 90ನೇ ನಿಮಿಷದಲ್ಲಿ ಗೆಲುವಿನ ಗೋಲು ತಂದಿತ್ತರು.

ಬಿಎಫ್‌ಸಿಗೆ ನಿರಾಸೆ

ಭುವನೇಶ್ವರ (ಪಿಟಿಐ): ಬೆಂಗಳೂರು ಎಫ್‌ಸಿ ತಂಡದವರು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ನಿರಾಸೆ ಅನುಭವಿಸಿದರು. ಗುರುವಾರ ನಡೆದ ಪಂದ್ಯದಲ್ಲಿ ಒಡಿಶಾ ಎಫ್‌ಸಿ 1–0 ಗೋಲಿನಿಂದ ಬಿಎಫ್‌ಸಿ ತಂಡವನ್ನು ಮಣಿಸಿತು. ನಂದಕುಮಾರ್ ಶೇಖರ್ ಅವರು 33ನೇ ನಿಮಿಷದಲ್ಲಿ ಆತಿಥೇಯ ತಂಡಕ್ಕೆ ಗೋಲು ಗಳಿಸಿದರು.

ಪ್ರೊ ಕಬಡ್ಡಿ: ಇಂದಿನಿಂದ ಪುಣೆಯಲ್ಲಿ ಪಂದ್ಯ

ಮುಂಬಾ, ಬೆಂಗಾಲ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಡರ್‌ಗಳಾದ ಗುಮಾನ್ ಸಿಂಗ್ ಮತ್ತು ಹೈದರಲಿ ಇಕ್ರಮಿ ಅವರ ಮಿಂಚಿನ ಆಟದ ನೆರವಿನಿಂದ ಯು ಮುಂಬಾ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಮೂರನೇ ಗೆಲುವು ಪಡೆದರು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಯು ಮುಂಬಾ 37-29 ರಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಮೊದಲ 30 ನಿಮಿಷಗಳವರೆಗೆ ಎರಡೂ ತಂಡಗಳು ಸಮಬಲದ ಹೋರಾಟ ನೀಡಿದವು. ಕೊನೆಯಲ್ಲಿ ಅಮೋಘ ಆಟವಾಡಿದ ಮುಂಬಾ ತಂಡ ಗೆಲುವು ತನ್ನದಾಗಿಸಿಕೊಂಡಿತು.

ಗುಮಾನ್ ಸಿಂಗ್ 12 ಹಾಗೂ ಹೈದರಲಿ 10 ಪಾಯಿಂಟ್ಸ್ ತಂದಿತ್ತರು. ಮೊದಲಾರ್ಧ ಕೊನೆಗೊಂಡಾಗ 16-16 ರಲ್ಲಿ ಸಮಬಲ ಕಂಡುಬಂದಿತ್ತು.

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	7	5	2	0	27
ಜೈಪುರ	7	5	2	0	26
ಬೆಂಗಳೂರು	7	4	2	1	24
ಪುಣೇರಿ	7	4	2	1	24
ಬೆಂಗಾಲ್	7	4	3	1	21
ಮುಂಬಾ	7	4	3	0	21

ಗುಜರಾತ್ ತಂಡಕ್ಕೆ ರಾಕೇಶ್ 12 ಪಾಯಿಂಟ್ಸ್ ತಂದಿತ್ತರು. ಅವರಿಗೆ ಇತರರಿಂದ ತಕ್ಕ ಸಾಥ್ ಸಿಗಲಿಲ್ಲ.

ದಿನದ ಎರಡನೇ ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ 35-30 ರಲ್ಲಿ ದಬಾಂಗ್ ಡೆಲ್ಲಿ ತಂಡವನ್ನು ಮಣಿಸಿತು. ಮೊದಲಾರ್ಧದಲ್ಲಿ 15-13 ರಲ್ಲಿ ಮುನ್ನಡೆ ಸಾಧಿಸಿದ್ದ ಬೆಂಗಾಲ್ ಪರ ಮಣೀಂದರ್ ಸಿಂಗ್ 10 ಪಾಯಿಂಟ್ಸ್ ಗಳಿಸಿದರು.

ಇಂದಿನಿಂದ ಪುಣೆ ಲೆಗ್ ಆರಂಭ: ಪ್ರೊ ಕಬಡ್ಡಿ ಲೀಗ್‌ನಲ್ಲಿ ಬೆಂಗಳೂರು ಲೆಗ್‌ನ ಪಂದ್ಯಗಳು ಬುಧವಾರ ಕೊನೆಗೊಂಡವು. ಅ.28 ರಿಂದ ಪುಣೆ ಲೆಗ್ ಆರಂಭವಾಗಲಿದ್ದು, ಬಾಳೇವಾಡಿಯಲ್ಲಿರುವ ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಪಂದ್ಯಗಳು ಆಯೋಜನೆಯಾಗಿವೆ.

ಶುಕ್ರವಾರ ತಮಿಳ್ ತಲೈವಾಸ್- ಜೈಪುರ ಪಿಂಕ್ ಪ್ಯಾಂಥರ್ಸ್, ಹರಿಯಾಣ ಸ್ಟೀಲರ್ಸ್- ಪುಣೇರಿ ಪಲ್ಟನ್ ಮತ್ತು ಪಟ್ನಾ ಪೈರೇಟ್ಸ್- ಯು.ಪಿ. ಯೋಧಾಸ್ ತಂಡಗಳು ಪೈಪೋಟಿ ನಡೆಸಲಿವೆ.

ಬೆಂಗಳೂರು ಲೆಗ್‌ನ ಪಂದ್ಯಗಳ ಬಳಿಕ ದಬಾಂಗ್ ಡೆಲ್ಲಿ 27 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಜೈಪುರ ಮತ್ತು ಬೆಂಗಳೂರು ಬುಲ್ಸ್ ತಂಡಗಳು ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನದಲ್ಲಿವೆ.

ಕ್ವಾರ್ಟರ್ ಫೈನಲ್‌ಗೆ ಬೋಪಣ್ಣ ಜೋಡಿ

ವಿಯೆನ್ನಾ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ನೆದರ್ಲೆಂಡ್ಸ್‌ನ ಮಟ್ವೆ ಮಿಡ್ಲ್‌ಕೂಪ್ ಜೋಡಿ ಇಲ್ಲಿ ನಡೆಯುತ್ತಿರುವ ಎರ್ಸ್ಟ್ ಬ್ಯಾಂಕ್ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಬುಧವಾರ ನಡೆದ ಪುರುಷರ ಡಬಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತ-ನೆದರ್ಲೆಂಡ್ಸ್ ಜೋಡಿ 6–1, 6–3 ರಲ್ಲಿ ಅರ್ಜೆಂಟೀನಾದ ಪೆಡ್ರೊ ಕಚಿನ್ ಮತ್ತು ಡಿಯಾಗೊ ಸ್ವಾರ್ಟ್ಸ್‌ಮನ್ ವಿರುದ್ಧ ಗೆದ್ದಿತು.

ಬೋಪಣ್ಣ ಮತ್ತು ಮಿಡ್ಲ್‌ಕೂಪ್ ಅವರು ಎಂಟರಘಟ್ಟದಲ್ಲಿ ಅರ್ಜೆಂಟೀನಾದ ಅಂಡ್ರೆಸ್ ಮಲ್ವೆನಿ- ಮೆಕ್ಸಿಕೊದ ಸಾಂಟಿಯಾಗೊ ಗೊನ್ಸಾಲೆಸ್ ವಿರುದ್ಧ ಪೈಪೋಟಿ ನಡೆಸುವರು.

ಬೋಪಣ್ಣ ಜೋಡಿ ಈ ತಿಂಗಳ ಆರಂಭದಲ್ಲಿ ಟೆಲ್ ಅವೀವ್‌ನಲ್ಲಿ ನಡೆದಿದ್ದ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು.

2ನೇ ಸುತ್ತಿಗೆ ಸಮೀರ್ ವರ್ಮಾ

ಸಮೀರ್ ವರ್ಮಾ –ಸಂಗ್ರಹ ಚಿತ್ರ

ಪ್ಯಾರಿಸ್ (ಪಿಟಿಐ): ಭಾರತದ ಸಮೀರ್ ವರ್ಮಾ ಅವರು ಇಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತು ಪ್ರವೇಶಿಸಿದರು.

ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಸಮೀರ್, ಆರನೇ ಶ್ರೇಯಾಂಕದ ಆಟಗಾರ ಇಂಡೊನೇಷ್ಯಾದ ಆಂಥೋನಿ ಸಿನಿಸುಕ ಗಿಂಟಿಂಗ್‌ಗೆ ಆಘಾತ ನೀಡಿದರು. ಒಂದು ಗಂಟೆ 17 ನಿಮಿಷ ನಡೆದ ರೋಚಕ ಹೋರಾಟದಲ್ಲಿ ಭಾರತದ ಆಟಗಾರ 21-15, 21-23, 22-20 ರಲ್ಲಿ ಗೆದ್ದರು.

ಎಚ್.ಎಸ್.ಪ್ರಣಯ್ 21-16, 16-21, 21-16 ರಲ್ಲಿ ಮಲೇಷ್ಯಾದ ಲೆವ್ ಡರೆನ್ ಎದುರು ಪ್ರಯಾಸದಿಂದ ಗೆದ್ದರು.

ಶ್ರೀಕಾಂತ್‌ಗೆ ನಿರಾಸೆ: ಭಾರತದ ಕೆ.ಶ್ರೀಕಾಂತ್ ಅವರು ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ 21-19, 12-21, 19-21 ರಲ್ಲಿ ಡೆನ್ಮಾರ್ಕ್‌ನ ರಾಸ್ಮಸ್ ಗೆಮ್ಕೆ ಎದುರು ಪರಾಭವಗೊಂಡರು.

ಶ್ರೀಕಾಂತ್ ಮೊದಲ ಸುತ್ತಿನಲ್ಲಿ 21-18, 21-18 ರಲ್ಲಿ ಭಾರತದವರೇ ಆದ ಲಕ್ಷ್ಯ ಸೇನ್ ಅವರನ್ನು ಮಣಿಸಿದ್ದರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ 21–16, 21–14 ರಲ್ಲಿ ಮಲೇಷ್ಯಾದ ವೀ ಚೊಂಗ್– ಕೈ ವುನ್ ತೀ ಎದುರು ಗೆದ್ದಿತು.

ಕ್ರಿಕೆಟ್‌ನಲ್ಲಿ ಲಿಂಗ ಸಮಾನತೆ: ಬಿಸಿಸಿಐ ಐತಿಹಾಸಿಕ ತೀರ್ಮಾನ

ಮಹಿಳೆಯರಿಗೂ ಸಮಾನ ವೇತನ

ನವದೆಹಲಿ (ಪಿಟಿಐ): ಪುರುಷ ಕ್ರಿಕೆಟಿಗರಿಗೆ ನೀಡುವಷ್ಟೇ ಸಂಭಾವನೆಯನ್ನು ಮಹಿಳಾ ಕ್ರಿಕೆಟಿಗರಿಗೂ ನೀಡುವ ಐತಿಹಾಸಿಕ ತೀರ್ಮಾನವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಗುರುವಾರ ತೆಗೆದುಕೊಂಡಿದೆ.

ಬಿಸಿಸಿಐ ಅಪೆಕ್ಸ್ ಸಮಿತಿ ತುರ್ತುಸಭೆಯಲ್ಲಿ ಈ ಮಹತ್ವದ ನಿರ್ಧಾರ ಹೊರಬಿದ್ದಿದೆ. ಮಂಡಳಿಯ ಕೇಂದ್ರ ಗುತ್ತಿಗೆಯಲ್ಲಿರುವ ಆಟಗಾರ್ತಿಯರಿಗೆ ಹೊಸ ಸಂಭಾವನೆ ಅನ್ವಯವಾಗಲಿದೆ.

ಮಹಿಳಾ ಕ್ರಿಕೆಟಿಗರು ಇನ್ನು ಮುಂದೆ ಏಕದಿನ ಪಂದ್ಯಗಳಿಗೆ ಈಗ ಪಡೆಯುವ ಸಂಭಾವನೆಗಿಂತ ಆರು ಪಟ್ಟು ಅಧಿಕ ವೇತನ ಗಳಿಸಲಿದ್ದಾರೆ. ಈಗ ₹ 1 ಲಕ್ಷ ಸಂಭಾವನೆ ಪಡೆಯುತ್ತಿದ್ದು, ಹೊಸ ವ್ಯವಸ್ಥೆಯಲ್ಲಿ ₹ 6 ಲಕ್ಷ ಗಳಿಸಲಿದ್ದಾರೆ.

ಟಿ20 ಪಂದ್ಯದ ವೇತನ ಈಗಿನ ₹ 1 ಲಕ್ಷದಿಂದ ₹ 3 ಲಕ್ಷಕ್ಕೆ ಏರಿಕೆಯಾಗಲಿದೆ. ಪ್ರತಿ ಟೆಸ್ಟ್ ಪಂದ್ಯಕ್ಕೆ ಈಗ ₹ 4 ಲಕ್ಷ ಸಂಭಾವನೆ ಪಡೆಯುತ್ತಿದ್ದು, ಇನ್ನು ಮುಂದೆ ₹ 15 ಲಕ್ಷ ಪಡೆಯಲಿದ್ದಾರೆ.

'ಲಿಂಗ ಅಸಮಾನತೆಯನ್ನು ತೊಲಗಿಸುವ ನಿಟ್ಟಿನಲ್ಲಿ ಬಿಸಿಸಿಐ ಇಟ್ಟ ಮೊದಲ ಹೆಜ್ಜೆಯಿದು. ಇನ್ನು ಮುಂದೆ ಪುರುಷ ಮತ್ತು ಮಹಿಳಾ ಕ್ರಿಕೆಟಿಗರು ಸಮಾನ ಪಂದ್ಯ ಶುಲ್ಕ ಪಡೆಯಲಿದ್ದು, ಕ್ರಿಕೆಟ್‌ನಲ್ಲಿ ಲಿಂಗ ಸಮಾನತೆಯ ಹೊಸ ಯುಗಕ್ಕೆ ಕಾಲಿಡುತ್ತಿದ್ದೇವೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ 'ಟ್ವೀಟ್' ಮಾಡಿದ್ದಾರೆ.

ಭಾರತವು ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಪುರುಷ ಮತ್ತು ಮಹಿಳಾ ಕ್ರಿಕೆಟಿಗರಿಗೆ ಸಮಾನ ಸಂಭಾವನೆ ನೀಡುವ ಎರಡನೇ ದೇಶ ಎನಿಸಿಕೊಂಡಿದೆ. ಈ ವರ್ಷದ ಆರಂಭದಲ್ಲಿ ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ಇಂತಹದೇ ನಿರ್ಧಾರ ತೆಗೆದುಕೊಂಡಿತ್ತು.

ಭಾರತ ಮಹಿಳಾ ತಂಡ ಈಚೆಗೆ ಬಾಂಗ್ಲಾದೇಶದಲ್ಲಿ ನಡೆದಿದ್ದ ಏಷ್ಯಾ ಕಪ್ ಟೂರ್ನಿಯನ್ನು ಗೆದ್ದುಕೊಂಡಿತ್ತು. ಅದಕ್ಕೂ ಮುನ್ನ ಬರ್ಮಿಂಗ್‌ಹ್ಯಾಂನಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಜಯಿಸಿತ್ತು.

ಸ್ವಾಗತ: ಬಿಸಿಸಿಐ ನಿರ್ಧಾರಕ್ಕೆ ಕ್ರಿಕೆಟ್ ವಲಯದಲ್ಲಿ ಶ್ಲಾಘನೆ ವ್ಯಕ್ತವಾಗಿದೆ.

ಕ್ರಾಂತಿಕಾರಿ ನಿರ್ಧಾರ: ಶಾಂತಾ

ಬೆಂಗಳೂರು: ಭಾರತದ ಕ್ರಿಕೆಟ್ ಇತಿಹಾಸದಲ್ಲಿಯೇ ಇದೊಂದು ಕ್ರಾಂತಿಕಾರಿ ನಿರ್ಧಾರವಾಗಿದೆ. ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನಲ್ಲಿ ಮಹಿಳಾ ಕ್ರಿಕೆಟ್ ಆರಂಭವಾಗಿ ದಶಕಗಳೇ ಕಳೆದಿವೆ. ಆದರೂ ಅಲ್ಲಿ ಇಂತಹ ತೀರ್ಮಾನ ಕೈಗೊಂಡಿಲ್ಲ. ಹೋದ ವರ್ಷ ನ್ಯೂಜಿಲೆಂಡ್ ಇಂತಹ ನಿರ್ಧಾರ ತೆಗೆದುಕೊಂಡಿತ್ತು. ಇದೀಗ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಅಭಿನಂದನಾರ್ಹ ಕಾರ್ಯ ಮಾಡಿದೆ ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕಿ ಶಾಂತಾ ರಂಗಸ್ವಾಮಿ ಸಂತಸ ವ್ಯಕ್ತಪಡಿಸಿದರು.

'ಅಪೆಕ್ಸ್ ಸಮಿತಿಯ ಸದಸ್ಯೆಯಾಗಿರುವ ನಾನೂ ಇಂದಿನ (ಗುರುವಾರ) ಸಭೆಯಲ್ಲಿದ್ದೆ. ಈ ತೀರ್ಮಾನದಿಂದ ಮಹಿಳಾ ಕ್ರಿಕೆಟ್ ಬೆಳವಣಿಗೆಗೆ ಪ್ರೋತ್ಸಾಹ ಸಿಗುತ್ತದೆ. ಪುರುಷ ಹಾಗೂ ಮಹಿಳಾ ಕ್ರಿಕೆಟ್ ನಡುವಿನ ಅಂತರವನ್ನು ತೊಲಗಿಸಲು ಇದು ದಿಟ್ಟ ಹೆಜ್ಜೆಯಾಗಿದೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

'ಬಿಸಿಸಿಐ ನಿರ್ಧಾರದಿಂದ ಕೇಂದ್ರಿಯ ಗುತ್ತಿಗೆಯಲ್ಲಿರುವ 20–22 ಆಟಗಾರ್ತಿಯರಿಗೆ ಅನುಕೂಲವಾಗಲಿದೆ. ಇದೇ ರೀತಿಯ ನಿರ್ಣಯವನ್ನು ದೇಶಿ ಕ್ರಿಕೆಟ್‌ನಲ್ಲಿಯೂ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ದೇಶಿ ಕ್ರಿಕೆಟ್‌ನಲ್ಲಿ ಮಹಿಳೆಯರಿಗೆ ₹ 20 ಸಾವಿರ ಹಾಗೂ ಪುರುಷರಿಗೆ ₹ 60 ಸಾವಿರ ಪಂದ್ಯ ಶುಲ್ಕ ನೀಡಲಾಗುತ್ತಿದೆ. ಈ ಹಂತದಲ್ಲಿ ಏಕರೂಪ ನಿಯಮ ಬಂದರೆ 200ಕ್ಕೂ ಹೆಚ್ಚು ಆಟಗಾರ್ತಿಯರಿಗೆ ನೆರವಾಗುವುದು' ಎಂದು ಶಾಂತಾ ಹೇಳಿದರು.

ಅಪೆಕ್ಸ್ ಸಮಿತಿಯ ಸದಸ್ಯೆಯಾಗಿ ಶಾಂತಾ ಅವರಿಗೆ ಇದು ಕೊನೆಯ ಸಭೆಯಾಗಿತ್ತು. ಅವರ ಕಾರ್ಯಾವಧಿಯು ಮುಗಿಯಲಿದೆ. ಶಾಂತಾ ಅವರ ಸ್ಥಾನಕ್ಕೆ ಶುಭಾಂಗಿ ಕುಲಕರ್ಣಿಯವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಕೇಂದ್ರ ಗುತ್ತಿಗೆ: ಭಾರಿ ವ್ಯತ್ಯಾಸ

ಪುರುಷ ಮತ್ತು ಮಹಿಳಾ ಕ್ರಿಕೆಟಿಗರಿಗೆ ಇನ್ನು ಮುಂದೆ ಸಮಾನ ಪಂದ್ಯ ಶುಲ್ಕ ಸಿಗುವುದಾದರೂ, ಕೇಂದ್ರ ಗುತ್ತಿಗೆಯಲ್ಲಿ ನೀಡುವ ಸಂಭಾವನೆಯ ಪ್ರಮಾಣದಲ್ಲಿ ಭಾರಿ ವ್ಯತ್ಯಾಸವಿದೆ.

ಬಿಸಿಸಿಐ ವಾರ್ಷಿಕ ಗುತ್ತಿಗೆಯಲ್ಲಿ ಪುರುಷರ ವಿಭಾಗದಲ್ಲಿ ನಾಲ್ಕು ಗುಂಪುಗಳಿಗೆ ಕ್ರಮವಾಗಿ ₹ 7 ಕೋಟಿ (ಎ +), ₹ 5 ಕೋಟಿ (ಎ), ₹ 3 ಕೋಟಿ (ಬಿ) ಮತ್ತು ₹ 1 ಕೋಟಿ (ಸಿ) ನೀಡಲಾಗುತ್ತಿದೆ.

ಮಹಿಳೆಯರ ಗುತ್ತಿಗೆಯ 'ಎ' ಗುಂಪಿನವರಿಗೆ ₹50 ಲಕ್ಷ, ಬಿ ಮತ್ತು ಸಿ ಗುಂಪಿನವರಿಗೆ ಕ್ರಮವಾಗಿ ₹ 30 ಲಕ್ಷ ಹಾಗೂ ₹ 10 ಲಕ್ಷ ಲಭಿಸುತ್ತದೆ.

ಮಹಿಳಾ ಕ್ರಿಕೆಟ್ ಮತ್ತು ಒಟ್ಟಾರೆಯಾಗಿ ಕ್ರಿಕೆಟ್‌ನ ಬೆಳವಣಿಗೆಯ ನಿಟ್ಟಿನಲ್ಲಿ ಇಟ್ಟಂತಹ ಮಹತ್ವದ ಹೆಜ್ಜೆ ಇದು.
ರೋಜರ್ ಬಿನ್ನಿ, ಬಿಸಿಸಿಐ ಅಧ್ಯಕ್ಷ

'ಇದು ಐತಿಹಾಸಿಕ ತೀರ್ಮಾನ. ಭಾರತದ ಮಹಿಳಾ ಕ್ರಿಕೆಟ್‌ನಲ್ಲಿ ಹೊಸ ಶಕೆ ಆರಂಭವಾಗಿದೆ' ಎಂದು ಭಾರತದ ಮಹಿಳಾ ಕ್ರಿಕೆಟ್‌ನ ದಿಗ್ಗಜ ಆಟಗಾರ್ತಿ ಮಿಥಾಲಿ ರಾಜ್ ಪ್ರತಿಕ್ರಿಯಿಸಿದ್ದಾರೆ.

ಪ್ರತಿ ಪಂದ್ಯದ ಸಂಭಾವನೆ (₹ ಲಕ್ಷಗಳಲ್ಲಿ)



ಹರ್ಮನ್‌ಪ್ರೀತ್ ಕೌರ್ ಸಂತಸ

'ಪುರುಷ ಹಾಗೂ ಮಹಿಳೆಯರಲ್ಲಿ ಸಮಾನತೆ ಇರಬೇಕು ಎಂದು ನಾವು ಯಾವಾಗಲೂ ಮಾತನಾಡುತ್ತೇವೆ. ಆದರೆ ಭಾರತದ ಕ್ರಿಕೆಟ್‌ನಲ್ಲಿ ಇವತ್ತು ಇದು ಸಾಕಾರವಾಗಿದೆ. ನನಗೆ ಅಪಾರ ಸಂತಸವಾಗಿದೆ. ಇದು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ. ಭವಿಷ್ಯದಲ್ಲಿ ಬಹಳಷ್ಟು ಹುಡುಗಿಯರು ಕ್ರಿಕೆಟ್ ಆಟವನ್ನು ವೃತ್ತಿಯಾಗಿ ಸ್ವೀಕರಿಸಲು ಇದು ಪ್ರೇರಣೆಯಾಗಲಿದೆ' ಎಂದು ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ಹೇಳಿದ್ದಾರೆ.

ಬ್ಯಾಟಿಂಗ್ ಚಾಂಪಿಯನ್ ಸಚಿನ್ ತೆಂಡೂಲ್ಕರ್ ಅವರೂ ಬಿಸಿಸಿಐ ನಿರ್ಧಾರವನ್ನು ಸ್ವಾಗತಿಸಿದ್ದಾರೆ. 'ಲಿಂಗ ಸಮಾನತೆಯನ್ನು ತರಲು ಇದೊಂದು ಮಹತ್ವದ ಹೆಜ್ಜೆಯಾಗಿದೆ. ಕ್ರಿಕೆಟ್ ಆಟವು ಸಮಾನತೆಯನ್ನು ಮೂಡಿಸುವ ಮಹತ್ವದ ಮಾಧ್ಯಮವಾಗಿದೆ' ಎಂದು ಸಚಿನ್ ಟ್ವೀಟ್ ಮಾಡಿದ್ದಾರೆ.

ಮಾಜಿ ಆಟಗಾರ್ತಿ ಜೂಲನ್ ಗೋಸ್ವಾಮಿ, ಎನ್‌ಸಿಎ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್, ಬಾಲಿವುಡ್ ತಾರೆಯರಾದ ತಾಪ್ಸಿ ಪನ್ನು, ಶಾರೂಕ್ ಖಾನ್, ಅಭಿಷೇಕ್ ಬಚ್ಚನ್ ಅವರೂ ಬಿಸಿಸಿಐ ತೀರ್ಮಾನವನ್ನು ಸ್ವಾಗತಿಸಿದ್ದಾರೆ.

ಪಾಕ್‌ಗೆ ಆಘಾತ; ಜಿಂಬಾಬ್ವೆಗೆ ರೋಚಕ ಜಯ

ಪಾಕ್ ವಿರುದ್ಧ ಜಯಗಳಿಸಿದ ಜಿಂಬಾಬ್ವೆ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಪರ್ತ್ (ಪಿಟಿಐ): ಪಂದ್ಯದ ಕೊನೆಯ ಓವರ್‌ನಲ್ಲಿ ಕೈಚಳಕ ಮೆರೆದ ಬ್ರಾಡ್ ಇವಾನ್ಸ್ ಹಾಗೂ ಸಿಕಂದರ್ ರಝಾ ಅವರ ಆಟದಿಂದ ಜಿಂಬಾಬ್ವೆ ತಂಡವು ಗುರುವಾರ ಪಾಕಿಸ್ತಾನ ವಿರುದ್ಧ ಒಂದು ರನ್ ಅಂತರ ರೋಚಕ ಜಯಸಾಧಿಸಿತು.

ಕಳೆದ ಭಾನುವಾರ ಭಾರತದ ಎದುರು ನಡೆದಿದ್ದ ಕುತೂಹಲಭರಿತ ಪಂದ್ಯದಲ್ಲಿ ಸೋತಿದ್ದ ಬಾಬರ್ ಆಜಂ ಬಳಗವು ಎರಡನೇ ಪಂದ್ಯದಲ್ಲಿ ಮುಗ್ಗರಿಸಿತು. ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 130 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಮೊಹಮ್ಮದ್ ವಾಸೀಂ ಜೂನಿಯರ್ (24ಕ್ಕೆ4) ಹಾಗೂ ಶಾದಾಬ್ ಖಾನ್ (23ಕ್ಕೆ3) ಜಿಂಬಾಬ್ವೆಯನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾದರು.

ಕೊನೆಯ ಓವರ್‌ನಲ್ಲಿ ಗೆಲುವಿಗೆ 11 ರನ್‌ಗಳ ಅಗತ್ಯವಿತ್ತು. ಬ್ರಾಡ್ ಇವಾನ್ಸ್ ಹಾಕಿದ ಈ ಓವರ್ ಕುತೂಹಲ ಕೆರಳಿಸಿತ್ತು. ಕ್ರೀಸ್‌ನಲ್ಲಿದ್ದ ನವಾಜ್ ಹಾಗೂ ಶಾಹೀನ್ ಶಾ ಆಫ್ರಿದಿ ಸೇರಿ ಐದು ಎಸೆತಗಳಲ್ಲಿ ಎಂಟು ರನ್ ಗಳಿಸುವಲ್ಲಿ ಯಶಸ್ವಿಯಾದರು.

ಕೊನೆಯ ಒಂದು ಎಸೆತಕ್ಕೆ ಮೂರು ರನ್ ಹೊಡೆಯುವ ಸವಾಲು ಆಫ್ರಿದಿ ಮುಂದಿತ್ತು. ಚೆಂಡನ್ನು ಹೊಡೆದ ಆಫ್ರಿದಿ ಮತ್ತು ನವಾಜ್ ರನ್ ಪಡೆಯಲು ಓಡಿದರು. ಎರಡನೇ ರನ್ ಪಡೆಯುವ ಹೊತ್ತಿನಲ್ಲಿ ಚುರುಕಿನ ಫೀಲ್ಡಿಂಗ್ ಮಾಡಿದ ರಝಾ ಥ್ರೋ ಮಾಡಿದ ಚೆಂಡನ್ನು ಹಿಡಿತಕ್ಕೆ ಪಡೆಯುವಲ್ಲಿ ವಿಕೆಟ್‌ಕೀಪರ್ ಚಕಾಬ್ವಾ ತಡಬಡಾಯಿಸಿದರು. ಆದರೂ ಆಫ್ರಿದಿಯನ್ನು ರನೌಟ್ ಮಾಡುವಲ್ಲಿ ಯಶಸ್ವಿಯಾದರು.

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 130 (ಮದೆವೆರ 17, ಕ್ರೇಗ್ ಇವಾನ್ಸ್ 19, ಸೀನ್ ವಿಲಿಯಮ್ಸ್ 31, ರಿಯಾನ್ ಬರ್ಲ್ 10, ಬ್ರಾಡ್ ಇವಾನ್ಸ್ 19, ಮೊಹಮ್ಮದ್ ವಾಸೀಂ ಜೂನಿಯರ್ 24ಕ್ಕೆ4, ಶಾದಾಬ್ ಖಾನ್ 23ಕ್ಕೆ3) ಪಾಕಿಸ್ತಾನ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 129 (ಶಾನ್ ಮಸೂದ್ 44, ಮೊಹಮ್ಮದ್ ನವಾಜ್ 22, ಶಾದಾಬ್ ಖಾನ್ 17, ಮೊಹಮ್ಮದ್ ರಿಜ್ವಾನ್ 14, ವಾಸೀಂ ಔಟಾಗದೆ 12, ಸಿಕಂದರ್ ರಝಾ 25ಕ್ಕೆ3, ಇವಾನ್ಸ್ 25ಕ್ಕೆ2) ಫಲಿತಾಂಶ: ಜಿಂಬಾಬ್ವೆಗೆ 1 ರನ್ ಜಯ.

ಐರ್ಲೆಂಡ್‌ಗೆ ಮಣಿದ ಇಂಗ್ಲೆಂಡ್

ಮೆಲ್ಬರ್ನ್ (ಪಿಟಿಐ): ನಾಯಕ ಆ್ಯಂಡ್ರ್ಯೂ ಬಲ್ಬಿರ್ನಿ ಅಮೋಘ ಅರ್ಧಶತಕದ ಬಲದಿಂದ ಐರ್ಲೆಂಡ್ ತಂಡವು ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 12ರಲ್ಲಿ ಇಂಗ್ಲೆಂಡ್ ತಂಡಕ್ಕೆ ಆಘಾತ ನೀಡಿತು.

ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಒಂದನೇ ಗುಂಪಿನ ಪಂದ್ಯದಲ್ಲಿ ಐರ್ಲೆಂಡ್ ತಂಡವು 5 ರನ್‌ಗಳಿಂದ ಜಯಿಸಿತು. ಮೊದಲು ಬ್ಯಾಟಿಂಗ್ ಮಾಡಿದ್ದ ಐರ್ಲೆಂಡ್ 19.2 ಓವರ್‌ಗಳಲ್ಲಿ 157 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು 14.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 105 ರನ್ ಗಳಿಸಿತು. ಈ ಸಂದರ್ಭದಲ್ಲಿ ಮಳೆ ಆರಂಭವಾಯಿತು. ಆದರೆ ಪಂದ್ಯ ಪುನರಾರಂಭವಾಗಬೇಕಾದ ಕಾಲಮಿತಿಯೊಳಗೆ ಮಳೆ ನಿಲ್ಲಲಿಲ್ಲ. ಅದರಿಂದಾಗಿ ಡಕ್ವರ್ಥ್‌-ಲೂಯಿಸ್ ನಿಯಮವನ್ನು ಅನ್ವಯಿಸಲಾಯಿತು.

ಈ ನಿಯಮದ ಪ್ರಕಾರ ಇಂಗ್ಲೆಂಡ್ 14.3 ಓವರ್‌ಗಳಲ್ಲಿ 110 ರನ್ ಗಳಿಸಬೇಕಿತ್ತು. ಆದರೆ ಐದು ರನ್‌ಗಳ ಹಿನ್ನಡೆಯಾದ ಕಾರಣ ಗೆಲುವು ಐರ್ಲೆಂಡ್ ಮಡಿಲಿಗೆ ಬಿತ್ತು. 2011ರಲ್ಲಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿಯೂ ಇಂಗ್ಲೆಂಡ್ ವಿರುದ್ಧ ಜಯಿಸಿತ್ತು. ಆಗ ಕೆವಿನ್ ಒ ಬ್ರೇನ್ ಮಿಂಚಿದ್ದರು.

ಇಲ್ಲಿ ಆ್ಯಂಡ್ರ್ಯೂ ಬಲ್ಬಿರ್ನಿ (62; 47ಎ, 4X5, 6X2) ಅವರ ಆಟ ತಂಡಕ್ಕೆ ನೆರವಾಯಿತು. ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ತಂಡದ ಲಿಯಾಮ್ ಲಿವಿಂಗ್‌ಸ್ಟೋನ್ (17ಕ್ಕೆ3) ಹಾಗೂ ಮಾರ್ಕ್ ವುಡ್ (34ಕ್ಕೆ3) ಐರ್ಲೆಂಡ್ ತಂಡವು ದೊಡ್ಡ ಮೊತ್ತ ಗಳಿಸದಂತೆ ತಡೆಯೊಡ್ಡಿದರು.

ಇಂಗ್ಲೆಂಡ್ ತಂಡವು ಬ್ಯಾಟಿಂಗ್‌ನಲ್ಲಿ ಡೇವಿಡ್ ಮಲಾನ್ (35; 37ಎ) ಹಾಗೂ ಮೋಯಿನ್ ಅಲಿ (ಔಟಾಗದೆ 24; 12ಎ) ಬಿಟ್ಟರೆ ಉಳಿದವರು ನಿರೀಕ್ಷೆಗೆ ತಕ್ಕಂತೆ ಆಡಲಿಲ್ಲ. ಐರ್ಲೆಂಡ್‌ನ ಜೋಶುವಾ ಲಿಟಲ್ (16ಕ್ಕೆ2) ಇಂಗ್ಲೆಂಡ್ ತಂಡಕ್ಕೆ ಕಠಿಣ ಸವಾಲೊಡ್ಡಿದರು.

ಪಂದ್ಯ ರದ್ದು: ಇದೇ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ನ್ಯೂಜಿಲೆಂಡ್ ಮತ್ತು ಅಫ್ಗಾನಿಸ್ತಾನ ನಡುವಣ ಪಂದ್ಯವು ರದ್ದಾಯಿತು.

ಐರ್ಲೆಂಡ್ ತಂಡದ ನಾಯಕ ಬಲ್ಬಿರ್ನಿ ಸಂಭ್ರಮ –ಎಎಫ್‌ಪಿ ಚಿತ್ರ

ಪುಣೆ ರೇಸ್

ಜೂಲಿಯೆಟ್ ಗೆಲ್ಲುವ ನಿರೀಕ್ಷೆ

ಟೀನಾ ಕಟ್ರಕ್ ಮೆಮೋರಿಯಲ್ ಅರ್.ಡಬ್ಲ್ಯು.ಐ.ಟಿ.ಸಿ ಲಿಮಿಟೆಡ್ ಟ್ರೋಫಿ ಶುಕ್ರವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜೂಲಿಯೆಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆಲ್‌ಪೈನ್ ಸ್ಟಾರ್ 1, ಪವರ್ ಆಫ್ ನೀತ್ 2, ರೆಡ್ ಡಸ್ಟ್ 8
2ನೇ ರೇಸ್: ಬಿಯಾಂಡ್ ಮೆಷರ್ 3, ಮುರ್ವಾರ ಪ್ರಿನ್ಸೆಸ್ 2, ಗಿಮ್ಮೆ 5
3ನೇ ರೇಸ್: ಒನ್ ವಿಷ್ 4, ಸಕ್ಸಸ್ 5
4ನೇ ರೇಸ್: ಸ್ಪೆಕ್ಯುಲೇಟರ್ 2, ಟಾಸ್ಮಾನ್ 1, ಪವರ್ ಆಫ್ ಥೋರ್ 7
5ನೇ ರೇಸ್: ಡೆಸರ್ಟ್ ಫೈರ್ 2, ಪ್ಯೂರ್ 6, ರೆಮುಸ್ 10
6ನೇ ರೇಸ್: ಜೂಲಿಯೆಟ್ 3, ಫಾರೆಸ್ಟ್ ಫ್ಲೇಮ್ 2
7ನೇ ರೇಸ್: ರೆಮಿ ರೆಡ್ 10, ಆಲ್ಫಾ ಗಿನಿ 3, ಜ್ಯಾಂಗೊ 1
8ನೇ ರೇಸ್: ಪಿಸಾ 7, ಕಾಗ್ನೊಸ್ಕೊ 6, ಜೆಟ್‌ಫೈರ್ 1

ಉತ್ತಮ ಬೆಟ್: ಬಿಯಾಂಡ್ ಮೆಷರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ರಿಲೀ ಶತಕ; ದಕ್ಷಿಣ ಆಫ್ರಿಕಾಗೆ ಗೆಲುವು

ಸಿಡ್ನಿ (ಪಿಟಿಐ): ರಿಲೀ ರಿಸೊವ್ (109; 56ಎ, 4X7, 6X8) ಮಿಂಚಿನ ಶತಕದ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಎರಡನೇ ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಜಯಿಸಿತು.

ಸಿಡ್ನಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 104 ರನ್‌ಗಳ ದೊಡ್ಡ ಅಂತರದಿಂದ ಜಯಿಸಿತು. ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ತಂಡವು ರಿಲೀ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 205 ರನ್ ಗಳಿಸಿತು.

ಅದಕ್ಕುತ್ತರವಾಗಿ ಬಾಂಗ್ಲಾದೇಶ ತಂಡವು 16.3 ಓವರ್‌ಗಳಲ್ಲಿ 101 ರನ್ ಗಳಿಸಿ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 205 (ಕ್ವಿಂಟನ್ ಡಿಕಾಕ್ 63, ರಿಲೀ ರಿಸೊವ್ 109, ಶಕೀಬ್ ಅಲ್ ಹಸನ್ 33ಕ್ಕೆ2) ಬಾಂಗ್ಲಾದೇಶ: 16.3 ಓವರ್‌ಗಳಲ್ಲಿ 101 (ಲಿಟನ್ ದಾಸ್ 34, ಸೌಮ್ಯ ಸರ್ಕಾರ್ 15, ತಸ್ಕಿನ್ ಅಹಮದ್ 10, ಎನ್ರಿಚ್ ನಾಕಿಯಾ 10ಕ್ಕೆ4, ತಬ್ರೇಜ್ ಶಮ್ಸಿ 20ಕ್ಕೆ3) ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 104 ರನ್‌ಗಳ ಜಯ.